ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಇರಾಕಿನ ಮೊದಲ ಮಹಿಳಾ ಕಮ್ಯುನಿಸ್ಟ್ ಸಂಸದೆ
ಕಾಮ್ರೇಡ್ ಸುಹಾದ್ ಅಲ್ ಖತಿಬ್
ಅವರಿಗೆ ಲಾಲ್ ಸಲಾಂ !

ಸಂಪುಟ 12 | ಸಂಚಿಕೆ 22 | ಮೇ 28–ಜೂನ್3, 2018 | ಪುಟ 16 ರೂ. 10/-

web: www.janashakthi.co.in e-mail : js_weekly@yahoo.com

ಸರಣಿ ಬೊಗಳೆಗಳ 4 ವರ್ಷ





'ಪೋಲ್ ಖೋಲ್ ಹಲ್ಲಾ ಬೋಲ್' ಪ್ರತಿಭಟನೆಗಳು



ಬಿಜೆಪಿಯನ್ನು 2019 ರಲ್ಲಿ ಸೋಲಿಸಲು ಮೊದಲ ಹೆಜ್ಜೆ ಮಾತ್ರ!



ತೂತುಕುಡಿ: 'ವೇದಾಂತ' ದಕ್ಷಣಿಗೆ ಕಗ್ಗೊಲೆ



'ಮಾರ್ಕ್ಸ್ 200 – ಕ್ಯಾಪಿಟಲ್ 150' ಆಚರಣೆಗೆ ಸಂಭ್ರಮದ ಆರಂಭ



ನಿರ್ವಸಿತ ಕೊರಗರಿಗೆ ಮನೆ: ಸಂಭ್ರಮದ ಉದ್ಘಾಟನೆ

ಥೂಥುಕುಡಿಯಲ್ಲಿ ಪ್ರತಿಭಟನಾಕಾರರ ಮೇಲೆ ನಿರ್ದಯ ಗೋಲೀಬಾರ್ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತಮಿಳುನಾಡಿನ ಥೂಥುಕುಡಿಯಲ್ಲಿರುವ ಸ್ಟೆರ್ಲೈಟ್ ಕಾಪ್ಪರ್ ಇಂಡಸ್ಟ್ರಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಜನಗಳ ಮೇಲೆ ಪೋಲೀಸ್ ಗೋಲೀಬಾರನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಈ ಗೋಲೀಬಾರಿನಿಂದಾಗಿ ಹನ್ನೆರಡು ಮಂದಿ ಪ್ರಾಣ ಕಳಕೊಂಡಿದ್ದಾರೆ, ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸತ್ತವರಲ್ಲಿ ಬಹಳ ಮಂದಿಯ ತಲೆಯಲ್ಲಿ ಮತ್ತು ಮುಖದ ಮೇಲೆ ಬುಲೆಟ್ ಗಾಯಗಳಿರುವುದು ತಮಿಳುನಾಡು ಪೋಲೀಸ್‌ನ ಅಮಾನುಷತೆಯನ್ನು ಬಯಲಿಗೆ ತಂದಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಈ ಉದ್ದಿಮೆಯಿಂದ ಜನಗಳಲ್ಲಿ ಉಂಟಾಗಿರುವ ಗಾಳಿ, ನೀರು ಮತ್ತು ಭೂಮಿ ಮಲಿನಗೊಳ್ಳುತ್ತಿವೆ ಎಂಬ ನೈಜ ಆತಂಕಗಳಿಗೆ ರಾಜ್ಯ ಆಡಳಿತ ಸರಿಯಾಗಿ ಸ್ಪಂದಿಸದಿದ್ದುದರಿಂದ ಜನಗಳು ಪ್ರತಿಭಟನೆಗಳಿಗೆ ಇಳಿಯುವಂತಾಗಿತ್ತು. ಈ ಸ್ಥಾವರವನ್ನು ಶಾಶ್ವತವಾಗಿ ಮುಚ್ಚಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪ್ರತಿಭಟನಾಕಾರರ ಮೇಲೆ ಈ ನಿರ್ದಯ ಗೋಲೀಬಾರಿಗೆ ಕಾರಣರಾದವರನ್ನೆಲ್ಲ ಉತ್ತರದಾಯಿಗಳನ್ನಾಗಿ ಮಾಡಬೇಕು, ಅವರ ವಿರುದ್ಧ ತಕ್ಷಣವೇ ಕಾನೂನು ಕಲಾಪಗಳನ್ನು ಆರಂಭಿಸಬೇಕು. ಈ ಬಗ್ಗೆ ಪ್ರಕಟಿಸಿರುವ ತನಿಖೆ ಮದ್ರಾಸ್ ಹೈಕೋರ್ಟಿನ ಹಾಲೀ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕೃಷಿ ಕೂಲಿಕಾರರ ಸಂಘದ ಖಂಡನೆ

ಥೂತುಕುಡಿ ಪಟ್ಟಣ ಮತ್ತು ಸುತ್ತಲಿನ 18 ಹಳ್ಳಿಗಳ ಜನಸಾಮಾನ್ಯರಿಗೆ ಕಂಟಕಪ್ರಾಯವಾಗುತ್ತಿದ್ದ ಸ್ಥಾವರದ ವಿರುದ್ಧ ಪ್ರತಿಭಟಿಸುತ್ತಿದ್ದವರ ಮೇಲೆ ಗೋಲೀಬಾರಿಗಿಳಿದ ತಮಿಳುನಾಡು ಸರಕಾರ ಮತ್ತು ಮೋದಿ ಸರಕಾರ ಈ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ನೈಸರ್ಗಿಕ ಸಂಪನ್ಮೂಲಗಳ ಲೂಟಿಯಲ್ಲಿ ಕೈಜೋಡಿಸುತ್ತಿದ್ದಾರೆ ಎಂದು ಈ ಗೋಲೀಬಾರನ್ನು ಬಲವಾಗಿ ಖಂಡಿಸುತ್ತ ಅಖಿಲ ಬಾರತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯುಯು) ಹೇಳಿದೆ. ಈ ಸ್ಥಾವರವನ್ನು ಕೂಡಲೇ ಮುಚ್ಚಬೇಕು. ಸತ್ತವರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ತಕ್ಷಣವೇ ಅನುಕ್ರಮವಾಗಿ ತಲಾ 10 ಲಕ್ಷ ರೂ. ಮತ್ತು 5 ಲಕ್ಷ ರೂ. ಕೊಡಬೇಕು ಎಂದು ಅದು ಆಗ್ರಹಿಸಿದೆ.

ಕಾರ್ಪೋರೇಟ್ ಯಜಮಾನರುಗಳಿಗಾಗಿ ಅಮಾನುಷ ಕೊಲೆಗಡುಕತನಕ್ಕೆ ಇಳಿದ ತಮಿಳುನಾಡು ಆಡಳಿತ?–ಸಿಐಟಿಯು ಖಂಡನೆ

ಸಿಐಟಿಯು ಇದು ಅಮಾನುಷ ಪೋಲೀಸ್ ಕೊಲೆಗಡುಕತನ ಎನ್ನುತ್ತ ಬಿಜೆಪಿ ನೇತೃತ್ವದ ನಿಕಟ ಮಿತ್ರಪಕ್ಷವಾಗಿರುವ ಎಐಎಡಿಎಂಕೆ ಸರಕಾರ ಪರಿಸರ ಮಾಲಿನ್ಯದಂತಹ ಸೂಕ್ಷ್ಮ ವಿಷಯದ ಮೇಲೆ ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಗೋಲೀಬಾರ್‌ಗೆ ಮಂಜೂರಾತಿ ಏಕೆ ಮತ್ತು ಹೇಗೆ ನೀಡಿತು ಎಂದು ವಿವರಣೆ ಕೊಡಬೇಕಾಗಿದೆ ಎಂದು ಹೇಳಿದೆ.

ಇಲ್ಲಿರುವ ಸ್ಟೆರ್ಲೈಟ್/ವೇದಾಂತ ಬಹುರಾಷ್ಟ್ರೀಯ ಕಂಪನಿಯ ಈ ಸ್ಥಾವರದಲ್ಲಿ ತಾಮ್ರದ ಅದುರು ಕರಗಿಸಲು ಅತ್ಯಂತ ಅಸುರಕ್ಷಿತ ವಿಧಾನಗಳನ್ನು ಅನುಸರಿಸಲಾಗಿದೆ, ತಾಮ್ರದ ಅದಿರಿನ ತ್ಯಾಜ್ಯಗಳನ್ನು ಕ್ರಮಬದ್ಧವಾಗಿ ವಿಲೇವಾರಿ ಮಾಡುತ್ತಿಲ್ಲ, ಇದರಿಂದ ಗಾಳಿ, ನೀರು ಮತ್ತು ಭೂಮಿ ಮಲಿನಗೊಳ್ಳುತ್ತಿವೆ, ಈ ಬಗ್ಗೆ ಕಂಪನಿಯ ಮತ್ತು ಸರಕಾರದ ಗಮನ ಸೆಳೆದರೂ ಅದನ್ನು ನಿರ್ಲಕ್ಷಿಸಿ ಈ ಸ್ಥಾವರದ ವಿಸ್ತರಣೆಯ ಬಗ್ಗೆ ಯೋಚಿಸಲಾಗುತ್ತಿತ್ತು. ಇದನ್ನು ಪ್ರತಿಭಟಿಸಿ ಮೇ 22ರಂದು ಜನ ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸುತ್ತಿದ್ದರು. ಇಂತಹ ಗಹನವಾದ ವಿಷಯದಲ್ಲಿ ತಮಿಳುನಾಡು ಸರಕಾರ ಬೇಕಾಬಿಟ್ಟಿ ಬಂದೂಕಿನ ಬಳಕೆಗೆ ಇಳಿದಿದೆ. ಪೋಲೀಸರು ಗೋಲೀಬಾರ್ ಮಾಡಿದ ರೀತಿ ನೋಡಿದರೆ, ಅವರು ಈ ಸರಕಾರದ ಕಾರ್ಪೋರೇಟ್ ಯಜಮಾನರುಗಳ ಪರವಾಗಿ ಪ್ರತಿಭಟನಾಕಾರರಿಗೆ 'ಪಾಟ ಕಲಿಸಲು' ಮುಂದಾದಂತೆ ಕಾಣುತ್ತದೆ ಎಂದು ಸಿಐಟಿಯು ಹೇಳಿದೆ.

ಸ್ಟೆರ್ಲೈಟ್/ವೇದಾಂತ ಗುಂಪಿನ ಆದೇಶಪಾಲನೆಗೆ ಇಳಿದ ತಮಿಳುನಾಡು ಆಡಳಿತದ ಈ ಅಮಾನುಷ ಕೊಲೆಗಡುಕ ಕೃತ್ಯದ ವಿರುದ್ಧ ಪ್ರತಿಭಟನೆ ನಡೆಸಬೇಕು ಎಂದು ದುಡಿಯುವ ಜನಗಳಿಗೆ ಮತ್ತು ಅವರ ಸಂಘಟನೆಗಳಿಗೆ ಸಿಐಟಿಯು ಕರೆ ನಿಡಿದೆ.

ಎಐಎಲ್‌ಯು ಸಂಘದ ಖಂಡನೆ

ಅಖಿಲ ಭಾರತ ವಕೀಲರ ಸಂಘ(ಎಐಎಲ್‌ಯು) ಕೂಡ ಗೋಲೀಬಾರನ್ನು ಖಂಡಿಸಿದೆ. ತಮಿಳುನಾಡು ಸರಕಾರ ಮತ್ತು ಪೊಲೀಸರು ಈ ಸ್ಥರದಿಂದ ತೊಂದರೆಗೆ ಒಳಗಾಗಿರುವ ರೈತರು ಮತ್ತು ಜನಗಳನ್ನು ರಕ್ಷಿಸಲು ಕರ್ತವ್ಯಬದ್ದರಾಗಿದ್ದಾರೆಯೇ ಹೊರತು ಬಹುರಾಷ್ಟ್ರೀಯ ಕಂಪನಿಯ ಹಿತರಕ್ಕಣೆಗಲ್ಲ ಎಂದು ಎಐಎಲ್‌ಯು ಪ್ರಧಾನ ಕಾರ್ಯದರ್ಶಿ ಸೋಮದತ್ತ ಶರ್ಮ ಹೇಳಿದ್ದಾರೆ. ಪರಿಸರ ಮತ್ತು ಭೂಮಿಯನ್ನು ಮಲಿನಗೊಳಿಸಿದ್ದಕ್ಕಾಗಿ ಸ್ಟೆರ್ಲೈಟ್ ಕಂಪನಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಅಂಗನವಾಡಿಗಳಲ್ಲಿ ಪೂರಕ ಪೋಷಣಾಂಶ ಪೂರೈಕೆಗೆ ನೇರ ನಗದು ವರ್ಗಾವಣೆ : ಅಂಗನವಾಡಿ ಒಕ್ಕೂಟದ ಪ್ರತಿಭಟನೆ

ಸಮಗ್ರೀಕೃತ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್)ನ ನಿರ್ದೇಶನಾಲಯ ಮೇ 23 ರಂದು ಒಂದು ಆದೇಶ ಹೊರಡಿಸಿ ಪೂರಕ ಪೋಣಾಂಶ ಪೂರೈಕೆಯಲ್ಲಿ ನೇರ ನಗದು ವರ್ಗಾವಣೆ (ಡಿಬಿಟಿ) ವಿಧಾನವನ್ನು ತರಬೇಕೆಂದು ಆದೇಶ ಹೊರಡಿಸಿದೆ. ಬಿಹಾರ ಸರಕಾರ ಅದನ್ನಾಗಲೇ ಜಾರಿಗೊಳಿಸಲು ಮುಂದಾಗಿ ಒಂದು ವಾರದೊಳಗೆ ಆಕ್ಸಿಸ್ ಬ್ಯಾಂಕಿನಲ್ಲಿ ಮಕ್ಕಳ ಖಾತೆ(ಶೂನ್ಯ ಬ್ಯಾಲೆಂಸ್) ತೆರೆಯಬೇಕೆಂದು ಆದೇಶ ಹೊರಡಿಸಿದೆ.

ಇದನ್ನು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕರ ಒಕ್ಕೂಟ (ಎಐಎಫ್‌ಎಡಬ್ಲ್ಯುಹೆಚ್) ಬಲವಾಗಿ ವಿರೋಧಿಸುತ್ತ ಈ ಆದೇಶಗಳನ್ನು ಸಂಬಂಧಪಟ್ಟ ಸರಕಾರಗಳು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ, ಬ್ಯಾಂಕ್ ಖಾತೆ ತೆರೆಯುವುದು/ಈ ಸ್ಕೀಮಿನೊಂದಿಗೆ ಜೋಡಿಸುವ ಕೆಲಸವನ್ನು ಬಹಿಷ್ಕರಿಸಬೇಕು ಎಂದು ಅಂಗನವಾಡಿ ನೌಕರರಿಗೆ ಕರೆ ನೀಡಿದೆ.

ಇದು ಸ್ಪಷ್ಟವಾಗಿಯೂ ಆಹಾರ ಭದ್ರತಾ ಕಾನೂನಿಗೆ ವಿರುದ್ಧವಾದದ್ದು ಎಂದು ಎಐಎಫ್‌ಎಡಬ್ಲ್ಯುಹೆಚ್ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಹೇಳಿದ್ದಾರೆ. ಈ ಕುರಿತ ಸುಪ್ರಿಂ ಕೋರ್ಟಿನ ನಿರ್ದೇಶನಕ್ಕೂ ಇದು ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಡಿಬಿಟಿ ವಿಧಾನ ಜಾರಿಗೆ ಬಂದಿರುವ ಇತರ ರಂಗಗಳಲ್ಲಿ ಅದು ಫಲಾನುಭವಿಗಳಿಗೆ ಸರಿಯಾಗಿ ಪ್ರಯೋಜನಗಳನ್ನು ತಲುಪಿಸುವಲ್ಲಿ ವಿಫಲವಾಗಿದೆ ಎಂಬುದನ್ನು ಈಗಾಗಲೇ ಹಲವರು ಗಮನಿಸಿದ್ದಾರೆ. ನಮ್ಮ ದೇಶದಲ್ಲಿ ಆತಂಕಕಾರಿ ಆಯಾಮ ಪಡೆದಿರುವ ಪೌಷ್ಟಿಕಾಂಶ ಕೊರತೆಯನ್ನು ನೀಗಿಸುವ ಪ್ರಯತ್ನಗಳನ್ನು ಈ ಆದೇಶಗಳು ಬುಡಮೇಲು ಮಾಡುತ್ತವೆ ಮತ್ತು ಮಕ್ಕಳ ಅಭಿವೃದ್ಧಿ ಕುರಿತಂತೆ ಒಂದು ಸಮಗ್ರ ನಿಲುವನ್ನು ಕೂಡ ಬುಡಮೇಲು ಮಾಡುತ್ತದೆ ಎಂದು ಎಐಎಫ್‌ಎಡಬ್ಲ್ಯುಹೆಚ್ ಹೇಳಿದೆ. ಇದು 8 ಕೋಟಿಗೂ ಹೆಚ್ಚು ಮಕ್ಕಳನ್ನು ಮತ್ತು 2ಕೋಟಿಯಷ್ಟು ಗರ್ಭಿಣಿ ಸ್ತ್ರೀಯರನ್ನು ತಟ್ಟುವ ಕ್ರಮ ಎಂದು ಅದು ಹೇಳಿದೆ. ಈ ಕ್ರಮಕ್ಕೆ ಪರಿಣಿತರೂ ಸೇರಿದಂತೆ ಎಲ್ಲೆಡೆಗಳಿಂದಲೂ ವಿರೋಧ ಬಂದಿದೆ.

ಐಸಿಡಿಎಸ್‌ನ್ನು ಕಳಚಿ ಹಾಕುವ ಇಂತಹ ಪ್ರಯತ್ನಗಳಿಂದ ಅದನ್ನು ರಕ್ಷಿಸಲು ಜುಲೈ 10 ರಂದು ಒಂದು ಬೃಹತ್ ಪ್ರದರ್ಶನಕ್ಕೆ ಸಂಘಟನೆ ಸಿದ್ಧವಾಗುತ್ತಿದೆ.

ಚುನಾವಣೆಯಲ್ಲಿ ಸೋತರೂ ಸರಕಾರ ರಚಿಸುವ ಬಿಜೆಪಿ ಚಾಳಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಣೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರ್ನಾಟಕದಲ್ಲಿನ ಬೆಳವಣಿಗೆಗಳನ್ನು ಸ್ವಾಗತಿಸುತ್ತ ಬಿಜೆಪಿ/ಆರೆಸ್ಸೆಸ್‌ನ ಕುದುರೆ ವ್ಯಾಪಾರದ ಮೂಲಕ ಒಂದು ಬಹುಮತವನ್ನು ಹೆಣೆಯುವ ಪ್ರಯತ್ನಗಳನ್ನು ವಿಫಲಗೊಳಿಸಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದೆ. ಬಿಜೆಪಿ ಚುನಾವಣೆಗಳಲ್ಲಿ ಸೋತ ನಂತರವೂ ಸರಕಾರಗಳನ್ನು ರಚಿಸುವುದನ್ನು ಚಾಳಿಯಾಗಿ ಮಾಡಿಕೊಂಡಿದೆ. ಗೋವ, ಮಣಿಪುರ, ಮೇಘಾಲಯದಲ್ಲಿ ಇದನ್ನು ಮಾಡಿದರು. ಬಿಹಾರದಲ್ಲಿ ಜನಾದೇಶವನ್ನು ವಂಚಿಸಿ ಸರಕಾರದ ಒಳಹೊಕ್ಕರು. ಕರ್ನಾಟಕದಲ್ಲಿ ಅದು ಗಳಿಸಿದ್ದು 36.2% ಮತಗಳು. ಈಗ ಅಧಿಕಾರವಹಿಸಿಕೊಳ್ಳುತ್ತಿರುವ ಪಕ್ಷಗಳು ಒಟ್ಟಾಗಿ 56.6% ಮತ ಗಳಿಸಿವೆ ಎಂದು ಮೇ 21ರಂದು ದಿಲ್ಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನಿಸಿದೆ. ಇದು ಪಕ್ಷದ 22ನೇ ಮಹಾಧಿವೇಶನದಲ್ಲಿ ಆರಿಸಲ್ಪಟ್ಟ ಪೊಲಿಟ್‌ಬ್ಯುರೊದ ಮೊದಲ ಸಭೆಯಾಗಿತ್ತು.

ಬೆಂಗಳೂರಿನಲ್ಲಿ ಮೇ 23ರ ಪ್ರತಿಜ್ಞಾ–ಸ್ವೀಕಾರ ಸಮಾರಂಭದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರು ಮತ್ತು ಕೇರಳದ ಮುಖ್ಯಮಂತ್ರಿಗಳೂ ಆಗಿರುವ ಪಿಣರಾಯಿ ವಿಜಯನ್ ಭಾಗವಹಿಸಿದ್ದಾರೆ.

ಜನಗಳ ಮೇಲೆ ಅಸಹನೀಯ ಆರ್ಥಿಕ ಹೊರೆಗಳು

ಈ ಬಿಜೆಪಿ ಸರಕಾರ ಅನುಸರಿಸುತ್ತಿರುವ ಧೋರಣೆಗಳಿಂದಾಗಿ ನಮ್ಮ ಬಹುಪಾಲು ಜನಗಳ ಜೀವನೋಪಾಯಗಳ ಮೇಲೆ ನಿರಂತರ ದಾಳಿಗಳು ನಡೆಯುತ್ತಲೇ ಇರುವ ಬಗ್ಗೆ ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಗಗನಕ್ಕೇರಿವೆ. ಇದುವರೆಗಿನ ಅತ್ಯುನ್ನತ ಮಟ್ಟವನ್ನು ತಲುಪಿವೆ. ಗ್ರಾಮೀಣ ಸಂಕಟ ಉಲ್ಬಣಗೊಳ್ಳುತ್ತಲೇ ಇದೆ. ಗ್ರಾಮೀಣ ಆರ್ಥಿಕ ಪರಿಸ್ಥಿತಿ ಸರಕಾರದ ಕಳೆದ ನಾಲ್ಕು ವರ್ಷಗಳ ಆಳ್ವಿಕೆಯಲ್ಲಿ ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕಂಡಿರದಷ್ಟು ವಿನಾಶಕಾರಿಯಾಗಿದೆ. ಗ್ರಾಮೀಣ ಕೂಲಿ ಬೆಳವಣಿಗೆ ದರ ಕಳೆದ ಮೂರು ವರ್ಷಗಳಲ್ಲಿ ಅತ್ಯಂತ ಕನಿಷ್ಟಕ್ಕಿಳಿದಿದೆ. ಅಡುಗೆ ಅನಿಲದ ಅಗತ್ಯವುಳ್ಳವರಿಗೆ ಸಬ್ಸಿಡಿಗಳನ್ನು ಕೊಡಲಾಗುತ್ತಿದೆ ಎಂದು ಜಾಹೀರಾತುಗಳಲ್ಲಿ ಹೇಳಿಕೊಳ್ಳುತ್ತಿದ್ದರೂ ಅನಿಲ ಸಿಲಿಂಡರಿನ ಬೆಲೆ ಗಮನಾರ್ಹವಾಗಿ ಏರುತ್ತ ಬಂದಿದೆ.

ದೇಶದ ಆರ್ಥಿಕತೆಗೆ ನೋಟುರದ್ಧತಿ ಮತ್ತು ಜಿಎಸ್‌ಟಿಯ ದ್ವಿಮುಖ ದಾಳಿಯಿಂದ ಚೇತರಿಸಿಕೊಳ್ಳಲು ಇನ್ನೂ ಆಗಿಲ್ಲ. ಆದರೆ ಅದೇ ವೇಳೆಯಲ್ಲಿ, ಈ ಬಿಜೆಪಿ ಸರಕಾರ ತನ್ನ ಚಮಚಾ ಕಾರ್ಪೋರೇಟ್‌ಗಳು ಮರುಪಾವತಿ ಮಾಡದ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುತ್ತಲೇ ಇದೆ. ಈ ಕಾರ್ಪೋರೇಟ್‌ಗಳು ಬ್ಯಾಂಕುಗಳಿಂದ ತಗೊಂಡಿರುವ 11 ಲಕ್ಷ ಕೋಟಿ ರೂ.ಗಳಿಗೂ ಮೀರಿದ ಸಾಲಗಳನ್ನು ಹಿಂದಿರುಗಿಸಲು ನಿರಾಕರಿಸುತ್ತಿವೆ ಎಂದು ವಿಶ್ಲೇಷಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನಗಳ ಜೀವನಾಧಾರಗಳ ಮೇಲಿನ ನಿರಂತರ ದಾಳಿಗಳ ವಿರುದ್ಧ ಜನಗಳನ್ನು ಅಣಿನೆರೆಸಬೇಕು ಮತ್ತು ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ.

ತ್ರಿಪುರಾದಲ್ಲಿ ದಾಳಿಗಳು ನಿಲ್ಲದ ಸಾಗಿವೆ

ತ್ರಿಪುರಾದಲ್ಲಿ ಬಿಜೆಪಿ/ಆರೆಸ್ಸೆಸ್ ಅಧಿಕಾರ ವಹಿಸಿಕೊಂಡಂದಿನಿಂದ ಸತತವಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ದಾಳಿಗಳನ್ನು ನಡೆಸುತ್ತಿದೆ ಎಂದು ಗಮನಿಸಿದ ಪೊಲಿಟ್‌ಬ್ಯುರೊ ಈ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿದೆ. ಈ ಅವಧಿಯಲ್ಲಿ ಇಬ್ಬರು ಸಂಗಾತಿಗಳ ಹತ್ಯೆಯಾಗಿದೆ, ಸುಮಾರು 50 ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸಿದ್ದಾರೆ, ಅಲ್ಲದೆ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಕಚೇರಿಗಳಿಂದ ಎಬ್ಬಿಸುವುದು/ ಬಲವಂತವಾಗಿ ಆಕ್ರಮಿಸಿಕೊಳ್ಳುವುದು ನಡೆಯುತ್ತಿದೆ. ಈ ನಿರಂತರ ದಾಳಿಗಳಿಂದಾಗಿ ಸುಮಾರು 500 ಸಂಗಾತಿಗಳು ಪಕ್ಷದ ಕಚೇರಿಗಳಲ್ಲಿ ನಿರ್ಮಿಸಿರುವ ಕ್ಯಾಂಪ್‌ಗಳಿಗೆ ತಮ್ಮ ವಾಸವನ್ನು ತಾತ್ಕಾಲಿಕವಾಗಿ ಸ್ಥಳಾಂತರಗೊಳಿಸಿ ಕೊಳ್ಳಬೇಕಾಗಿ ಬಂದಿದೆ.

ಎಡ ಕಾರ್ಯಕರ್ತರ ಮೇಲೆ ದೈಹಿಕ ಹಲ್ಲೆಗಳು ಮಾತ್ರವೇ ಅಲ್ಲ, ಪಕ್ಷದ ಮತ್ತು ಇತರ ಎಡಪಂಥೀಯರ ಕಾರ್ಯಕ್ರಮಗಳು, ಸಮಾರಂಭಗಳ ಮೇಲೂ ದಾಳಿ ನಡೆಸಲಾಗುತ್ತಿದೆ. ಮೇದಿನಾಚರಣೆಯನ್ನೂ ರಾಜ್ಯದ ಹಲವು ಭಾಗಗಳಲ್ಲಿ ಅಸ್ತವ್ಯಸ್ತಗೊಳಿಸಲು ಪ್ರಯತ್ನಿಸಲಾಗಿದೆ. ಪಕ್ಷ ನಡೆಸುತ್ತಿರುವ ದಿನಪತ್ರಿಕೆ 'ದೇಶೇರ್ ಕಥಾ' ಕೂಡ ದಾಳಿಗೆ ಗುರಿಯಾಗಿದೆ. ಅದನ್ನು ಸಾಗಿಸುವವರು ಮತ್ತು ಚಂದಾದಾರರನ್ನು ಬೆದರಿಸಲಾಗುತ್ತಿದೆ.

ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿಯೂ ಸೇರಿದಂತೆ ವಿವಿಧ ಸ್ಥಳೀಯ ಸಂಸ್ಥೆಗಳ ಪ್ರಧಾನರು, ಅಧ್ಯಕ್ಷರು ಮತ್ತು ಸದಸ್ಯರು ರಾಜೀನಾಮೆ ನೀಡುವಂತೆ, ಇಲ್ಲವೇ ಬಿಜೆಪಿ ಸೇರುವಂತೆ ಬಲವಂತ ಹೇರಲಾಗುತ್ತಿದೆ.

ಇದರಲ್ಲಿ ರಾಜ್ಯ ಆಡಳಿತವನ್ನೂ ಶಾಮೀಲು ಮಾಡಲಾಗಿದೆ. ದೂರು ಸಲ್ಲಿಸಲು ಪೋಲೀಸ್ ಠಾಣೆಗಳಿಗೆ ಹೋದಾಗ ಠಾಣೆಯ ಒಳಗೂ ಪಕ್ಷದ ಮುಖಂಡರ ಮೇಲೆ ಹಲ್ಲೆ ನಡೆದಿರುವುದು ಇದನ್ನು ಹೊರಗೆಡವಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ನಾಶ

ಪಶ್ಚಿಮ ಬಂಗಾಲದಲ್ಲಿನ ಪರಿಸ್ಥಿತಿ ಆಕ್ರೋಶಕಾರಿಯಲ್ಲದೇ ಬೇರೇನೂ ಅಲ್ಲ ಎಂದು ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ. ಅಲ್ಲಿ ಇತ್ತೀಚಿನ ಪಂಚಾಯತು ಚುನಾವಣೆಗಳು, ಸರ್ವಾಧಿಕಾರಶಾಹಿ ದಾಳಿಗಳು ಎಂತಹ ಅಧೋಗತಿಗೆ ಇಳಿಯಬಹುದು ಎಂಬುದನ್ನು ಬಯಲಿಗೆ ತಂದಿವೆ. ಇದರಲ್ಲಿ ಮೊತ್ತಮೊದಲ ಬಾರಿಗೆ, ಚುನಾವಣೆಯಲ್ಲಿ ಮೋಸ ಮತಗಣನೆಯ ಕೇಂದ್ರಗಳನ್ನೂ ಬಹಿರಂಗವಾಗಿಯೇ ಬಲವಂತವಾಗಿ ವಶಪಡಿಸಿಕೊಳ್ಳುವುದು, ಅಂತಿಮ ಫಲಿತಾಂಶದಲ್ಲಿ ಮತಗಣನೆಯ ಪ್ರಕ್ರಿಯೆಯಲ್ಲಿ ಸೋತವರಿಗೂ ಗೆದ್ದಿದ್ದಾರೆಂಬ ಪ್ರಮಾಣ ಪತ್ರ ನೀಡುವುದರ ವರೆಗೂ ಹೋಗಿದೆ. ಮತದಾನ–ಪೂರ್ವದಿಂದ ಮತದಾನದ ನಂತರದ ವರೆಗೆ 40 ಜನ ಪ್ರಾಣ ಕಳಕೊಂಡಿದ್ದಾರೆ. ಪ್ರತಿಭಟಿಸುವವರು,. ಅದರಲ್ಲೂ ಚುನಾವಣಾ ಸಿಬ್ಬಂದಿಯನ್ನು ಗುರಿ ಮಾಡಿ ಸುಳ್ಳು ಕೇಸುಗಳನ್ನು ಹಾಕಲಾಗಿದೆ.

ಈಗ ಕರ್ನಾಟಕದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ತಂದಿರುವವರಿಗೆ ಸೌಹಾರ್ದವನ್ನು ವ್ಯಕ್ತಪಡಿಸುವಂತೆ ಕಾಣುತ್ತಿರುವ ರಾಜ್ಯದ ಮುಖ್ಯಮಂತ್ರಿಗಳು, ಆರಂಭದಲ್ಲಿ, ಮೊದಲ ಸುತ್ತುಗಳ ಚಿತ್ರಗಳ ಧಾರದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯಥಿಯನ್ನು ಅಭಿನಂದಿಸಿದ್ದು ಒಂದು ವ್ಯಂಗ್ಯವೇ ಸರಿ.

ಈ ಮುಖ್ಯಮಂತ್ರಿಯ **ಪುಟ 7 ನೋಡಿ**

ಸಂಪಾದಕೀಯ

ಬಿಜೆಪಿಯನ್ನು 2019ರಲ್ಲಿ ಸೋಲಿಸಲು ಇದು ಮೊದಲ ಹೆಜ್ಜೆ ಮಾತ್ರ !

ಕೊನೆಗೂ ಜೆಡಿ-ಎಸ್ ಮತ್ತು ಕಾಂಗ್ರೆಸುಗಳ ಸಮ್ಮಿಶ್ರ ಸರಕಾರ ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡಿ ಅಧಿಕಾರ ವಹಿಸಿಕೊಂಡಿದೆ. ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿಯಾಗಿ ಡಾ. ಪರಮೇಶ್ವರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ರಮೇಶ್ ಕುಮಾರ್ ಅವರ ಸ್ಪೀಕರ್ ಆಯ್ಕೆ ಸಹ ಅವಿರೋಧವಾಗಿದೆ. ಆರು ತಿಂಗಳ ಮಟ್ಟಿಗಂತೂ ಸರಕಾರ ಇರುವುದು ಗ್ಯಾರಂಟಿಯಾಗಿದೆ. ಬಹುಮತವಿಲ್ಲದೆ ಸಂವಿಧಾನ ಕಾನೂನು ನಿಯಮಾವಳಿಗಳೆಲ್ಲವನ್ನು ಗಾಳಿಗೆ ತೂರಿ, ಕುದುರೆ ವ್ಯಾಪಾರದಿಂದ ಸೀಟುಗಳ ಬಹುಮತ 'ಸೃಷ್ಟಿಸುವ" ಬಿಜೆಪಿಯ ಮೋದಿ-ಶಾ ನಾಯಕತ್ವ, ರಾಜ್ಯಪಾಲರು ಮತ್ತು ಯಡ್ಡಿ-ರೆಡ್ಡಿ ಕಂಪನಿಯ ಪ್ರಯತ್ನಗಳು ವಿಫಲವಾಗಿ ಮುಖಭಂಗವಾದ ಮೇಲೂ ಬಿಜೆಪಿ ಪ್ರಜಾಪ್ರಭುತ್ವದ ನಡಾವಳಿಗಳ ಪ್ರಾಥಮಿಕ ಪಾಠವನ್ನು ಕಲಿತಂತಿಲ್ಲ. ಮೇ 25ರಂದು ವಿಶ್ವಾಸಮತದ ಬಗ್ಗೆ ಚರ್ಚೆಯ ಸಂದರ್ಭದಲ್ಲಿ ಕುಮಾರಸ್ವಾಮಿ ಹಾಗೂ ಜೆಡಿ-ಎಸ್ ಬಗ್ಗೆ ಯಡಿಯೂರಪ್ಪ ಅವರ ಅತ್ಯಂತ ಅಸಹ್ಯಕರ ಕೀಳು ಮಟ್ಟದ ವೈಯಕ್ತಿಕ ಹೇಳಿಕೆಗಳು, ಕಾಂಗ್ರೆಸ್ ಜೆಡಿ-ಎಸ್ ಗಳ ನಡುವೆ ಕಂದಕ ಸೃಷ್ಟಿಸುವ ವಿಚಿತ್ರ ಕೆಲವೊಮ್ಮೆ ಹಾಸ್ಯಾಸ್ಪದವಾದ ಪ್ರಯತ್ನಗಳನ್ನು ನೋಡಿದರೆ, ಕನಿಷ್ಟ ಯಡಿಯೂರಪ್ಪ ಯಾವುದೇ ಪಾಠ ಕಲಿತಂತಿಲ್ಲ. ಸಾಯಂಕಾಲದೊಳಗೆ ಸಾಲಮನ್ನಾ ಮಾಡದಿದ್ದರೆ ಸೋಮವಾರವೇ ಕರ್ನಾಟಕ ಬಂದ್ ಮಾಡುವ ಬೆದರಿಕೆ, ವಿಶ್ವಾಸಮತದ ಹೊತ್ತಿನಲ್ಲಿ ಸಭಾತ್ಯಾಗ ಅರ್ಥಹೀನ ಮಾತ್ರವಲ್ಲ, ಕೆಟ್ಟ ವರ್ತನೆಯಾಗಿತ್ತು.

ಜೆಡಿ-ಎಸ್ ಮತ್ತು ಕಾಂಗ್ರೆಸುಗಳ ಶಾಸಕರು ಮತ್ತು ನಾಯಕರು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡು ಈ ವರೆಗಂತೂ ಜವಾಬ್ದಾರಿಯಿಂದ ವರ್ತಿಸಿದ್ದಾರೆ. ಆದರೆ ಅದಕ್ಕೆ ರೆಸಾರ್ಟಿನಲ್ಲಿ ಅವರನ್ನು ಕೂಡಿಹಾಕಿದ್ದು ಕಾರಣವೇ ಎಂದು ಇನ್ನಷ್ಟೇ ಗೊತ್ತಾಗಬೇಕಾಗಿದೆ. ಆದರೆ ಅವರನ್ನು ರೆಸಾರ್ಟಿನಲ್ಲಿ ಕೂಡಿ ಹಾಕಬೇಕಾದ ಪರಿಸ್ಥಿತಿ ಇತ್ತು ಎಂಬುದೇ ಆತಂಕಕಾರಿ. ಸಂಪುಟ ರಚನೆಯ ನಂತರವಷ್ಟೇ ಅವರ ಜವಾಬ್ದಾರಿ ಬಗ್ಗೆ ನಿಜವಾಗಿಯೂ ತಿಳಿಯಲಿದೆ. ಆಗಲೇ ಎರಡೂ ಪಕ್ಷದ ಶಾಸಕರು ಮತ್ತು ನಾಯಕರು ಮಂತ್ರಿ ಪದವಿಗೆ, ಮಂತ್ರಿಯಾಗುವ ಅವಕಾಶದ ಬಗ್ಗೆ ಖಚಿತವಿರುವವರೂ 'ಫಲವತ್ತಾದ' ಇಲಾಖೆಗಳಿಗೆ ಲಾಬಿ ಆರಂಭಿಸಿದ್ದಾರೆ. ಅದಕ್ಕಾಗಿ ಧರ್ಮ, ಜಾತಿ, ಉಪಜಾತಿ, ಪ್ರದೇಶ, ಇತ್ಯಾದಿ ಎಲ್ಲಾ ಕಾರ್ಡುಗಳನ್ನು ಬಳಸುತ್ತಿದ್ದಾರೆ. ಸಂಪುಟ ರಚನೆ ಮತ್ತು ಆ ಮೇಲಿನ ಅತೃಪ್ತಿಯನ್ನು ಎರಡೂ ಪಕ್ಷಗಳು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಬಿಜೆಪಿ ಮಾತ್ರವಲ್ಲ, ಜನತೆ ಸಹ ನೋಡುತ್ತಿದ್ದಾರೆ. ಇದು ಪಕ್ಷಗಳಿಗೂ ಶಾಸಕರಿಗೂ ಅಗ್ನಿಪರೀಕ್ಷೆಯ ಕಾಲ. ಅದೂ 6 ತಿಂಗಳಿನ ಗಡುವು ಹತ್ತಿರವಾದಂತೆ ಬಿಜೆಪಿ ಇನ್ನೊಂದು ಸುತ್ತಿನ 'ಕುದುರೆ ವ್ಯಾಪಾರ" ಮತ್ತು ಎರಡೂ ಪಕ್ಷವನ್ನೇ ಒಡೆಯುವ ಪ್ರಯತ್ನವನ್ನೇ ಮಾಡಲಿದೆ. ವಿಶ್ವಾಸಮತದ ಸಮಯದಲ್ಲಿ ಯಡಿಯೂರಪ್ಪನವರ ಭಾಷಣ ಮತ್ತು ಸಾರ್ವಜನಿಕ ಹೇಳಿಕೆಗಳನ್ನು ನೋಡಿದರೆ ಇದು ಸ್ಪಷ್ಟ. ಇಂತಹ ಪ್ರಯತ್ನವನ್ನು ತಡೆಯಲು ಮತ್ತು ತಮ್ಮ ಸ್ಥಿತಿ ಭದ್ರಪಡಿಸಿಕೊಳ್ಳಲು ಜೆಡಿ-ಎಸ್ ಮತ್ತು ಕಾಂಗ್ರೆಸುಗಳು ಸಹ ಬಿಜೆಪಿ ಶಾಸಕರ ಮೇಲೆ ಆಮಿಷ-ಬೆದರಿಕೆಗಳ ಅಸ್ತ್ರ ಬಳಸುತ್ತಾರಾ ಎಂಬುದನ್ನು ಕಾದು ನೋಡಬೇಕಾಗಿದೆ.

ಎರಡೂ ಪಕ್ಷಗಳ ನಡುವಿನ ಮೈತ್ರಿ ಎಷ್ಟು ಗಟ್ಟಿಯಾದ್ದು ಎಂದು ಸದ್ಯದಲ್ಲೇ ನಡೆಯಲಿರುವ ಮೂರು ಉಪಚುನಾವಣೆಗಳು ತಿಳಿಸಲಿವೆ. ಇನ್ನೂ ಈ ಬಗ್ಗೆ ಯಾವುದೇ ಒಪ್ಪಂದವಾಗಿಲ್ಲ ಎಂದು ಹೇಳಲಾಗಿದೆ. ಸಚಿವ ಸಂಪುಟ ಇತ್ಯಾದಿ ಚೌಕಾಶಿ ಆರಂಭವಾಗಿದ್ದರೂ ಈ ವರೆಗೆ ಮೈತ್ರಿಕೂಟದ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಏನು ಎಂಬುದರ ಬಗ್ಗೆ ಯಾರೂ ಚಕಾರವೆತ್ತಿಲ್ಲ. ಮುಖ್ಯಮಂತ್ರಿಗಳ ಆಯ್ಕೆಗಿಂತಲೂ ಮೊದಲು ಆಗಬೇಕಾಗಿದ್ದ ಕೆಲಸವಿದು. ಕನಿಷ್ಟ ಸಾಮಾನ್ಯ ಕಾರ್ಯಕ್ರಮ ರೂಪಿಸಲು ಕೂಡಲೇ ಎರಡೂ ಪಕ್ಷಗಳು ಕೆಲಸ ಆರಂಭಿಸಬೇಕಾಗಿದೆ. ಸಾಲಮನ್ನಾದ ಬಗ್ಗೆ ಕೇಳಿದಾಗ ಕುಮಾರಸ್ವಾಮಿ ತಮಗೆ ಬಹುಮತ ಬರದ್ದರಿಂದ ಕಾಂಗ್ರೆಸಿನ ಜತೆ ಚರ್ಚೆ ಮಾಡಬೇಕಾಗಿದೆ ಎಂದು ಹೇಳಿದ್ದು ಆತಂಕಕಾರಿ. ಇಂತಹ ಆಟ ಹೆಚ್ಚು ದಿನ ನಡೆಯದು. ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಇಂತಹ ಎಲ್ಲಾ ಅಂಶಗಳನ್ನು ಬೇಗನೇ ಸ್ಪಷ್ಟಪಡಿಸಬೇಕಾಗಿದೆ.

ಈಗ ಎರಡೂ ಪಕ್ಷಗಳು ಹೇಳಿರುವ ಸಾಲಮನ್ನಾ ಆಂಶಿಕ ಮತ್ತು ರೈತರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸುವಂತಹದ್ದಲ್ಲ. ಇದಕ್ಕಾಗಿ ಕೇರಳ ಎಲ್.ಡಿ.ಎಫ್. ಸರಕಾರ ಮಾಡಿದ್ದ ಋಣಮುಕ್ತ ಕಾಯಿದೆ ಮಾದರಿ ಪಾಲಿಸುವುದು ಬಿಟ್ಟರೆ ಬೇರೆ ದಾರಿಯಿಲ್ಲ. ಇದೇ ರೀತಿ ಕೃಷಿ ಬೆಳೆಗಳಿಗೆ ಸ್ವಾಮಿನಾಥನ್ ಕಮಿಶನ್ ಶಿಫಾರಸಿನ ಪ್ರಕಾರ ಬೆಂಬಲ ಬೆಲೆ ಜಾರಿ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕಾಗಿದೆ. ಇದೇ ರೀತಿ ಭೂಮಿ, ವಸತಿನಿವೇಶನ ಮತ್ತು ರೇಗಾ ಜಾರಿ ಬಗ್ಗೆ ರೈತ ಮತ್ತು ಗ್ರಾಮೀಣ ಜನತೆಯ ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಕನಿಷ್ಟ ಹಕ್ಕೊತ್ತಾಯಗಳನ್ನು ಈ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಒಳಗೊಳ್ಳಬೇಕು. ಇದೇ ರೀತಿ ಕಾರ್ಮಿಕರಿಗೆ ಪ್ರತಿ ವರ್ಷ ಆಶ್ವಾಸನೆ ಕೊಟ್ಟು ಎಂದೂ ಜಾರಿಯಾಗದ ರೂ. 18 ಸಾವಿರ ಕನಿಷ್ಟ ಕೂಲಿ, ಗುತ್ತಿಗೆ ಹೊರಗುತ್ತಿಗೆ ಸೇರಿದಂತೆ ಹತ್ತಾರು ರೀತಿಯ ಖಾಯಮೇತರ ಉದ್ಯೋಗಗಳನ್ನು ಖಾಯಂಗೊಳಿಸುವುದು, ಸ್ಕೀಂ ಉದ್ಯೋಗಿಗಳನ್ನು ಕಾರ್ಮಿಕರೆಂದು ಪರಿಗಣಿಸುವುದು ಮುಂತಾದ ಕನಿಷ್ಟ ಹಕ್ಕೊತ್ತಾಯಗಳು ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಇರಬೇಕು. ಕೈಗಾರಿಕೀಕರಣ ಮತ್ತು ಉದ್ಯೋಗ ಸೃಷ್ಟಿಯ ಗಟ್ಟಿನೆಲೆಯ ಕಾರ್ಯಕ್ರಮಗಳನ್ನೂ ಒಳಗೊಳ್ಳಬೇಕು. ಇದ್ಯಾವುದೂ ಇಂದಿನ ರಾಜ್ಯದ ಸಂಪನ್ಮೂಲಗಳ ಮಿತಿಯೊಳಗೆ ಸುಲಭಸಾಧ್ಯವಲ್ಲ. ಅದರಲ್ಲೂ ಜಿ.ಎಸ್.ಟಿ ಜಾರಿಯ ನಂತರ, 15ನೇ ಹಣಕಾಸು ಕಮಿಶನ್ ಹೊಸ ಶಿಫಾರಸುಗಳ ತೂಗುಗತ್ತಿಯಡಿಯಲ್ಲಿ ಇನ್ನಷ್ಟು ಜಟಿಲವಾಗಿದೆ. ಈ ಬಗ್ಗೆ ಕೇಂದ್ರದ ಮೇಲೆ ಇತರ ರಾಜ್ಯಗಳ ಜತೆ ಸೇರಿ ಏನು ಮಾಡಬಹುದು ಎಂಬುದರ ಬಗ್ಗೆ ಯೋಚಿಸಬೇಕು. ಚುನಾವಣೆ

ಪುಟ 5 ನೋಡಿ

"ಬೆಂಗಳೂರು ಪದವೀಧರ ಕ್ಷೇತ್ರ: ವಿಧಾನ ಪರಿಷತ್ ಚುನಾವಣೆ-2018 ಮತದಾರರಿಗೊಂದು ಮನವಿ"

ಆತ್ಮೀಯ ಪದವೀಧರರೇ,

'ಬೆಂಗಳೂರು ಪದವೀಧರ ಕ್ಷೇತ್ರ'ದಿಂದ ಕರ್ನಾಟಕ ವಿಧಾನ ಪರಿಷತ್‌ಗೆ 2018 ಜೂನ್ 8 ರಂದು ಚುನಾವಣೆ ನಡೆಯುತ್ತಿದೆ. ಈ ಮಹತ್ವದ ಚುನಾವಣೆಯಲ್ಲಿ ತಾವು, ತಮ್ಮ ಕುಟುಂಬದವರು ಮತದಾರರಾಗಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ.

ನಮ್ಮ ದೇಶದ ಕೆಲವೇ ರಾಜ್ಯಗಳಲ್ಲಿ 'ವಿಧಾನ ಪರಿಷತ್' ಅಸ್ತಿತ್ವದಲ್ಲಿದೆ. ಕರ್ನಾಟಕ ಅಂತಹ ರಾಜ್ಯಗಳ ಪೈಕಿ ಒಂದಾಗಿದೆ.. 'ವಿಧಾನ ಪರಿಷತ್' ಎನ್ನುವುದು ವಿಧಾನ ಸಭೆಯ ಜೊತೆಗೆ ರಾಜ್ಯದ ನೀತಿ, ನಿರೂಪಣಾ ಹಾಗೂ ಶಾಸನ ರಚನೆಯಂತಹ ಅತ್ಯಂತ ಮಹತ್ವದ ಅಧಿಕಾರ ಹೊಂದಿರುವ ಸಂವಿಧಾನ ಬದ್ಧವಾದ ಸಂಸ್ಥೆಯಾಗಿದೆ. ಆ ಕಾರಣದಿಂದಾಗಿಯೇ ಈ ಮಹತ್ವದ ಸಂವಿಧಾನಿಕ ಸಂಸ್ಥೆಗೆ ಸಮಾಜದ ವಿವಿಧ ಕ್ಷೇತ್ರದಿಂದ, ವಿಭಿನ್ನವಾದ ಹಿನ್ನೆಲೆಗಳ ಪ್ರಾತಿನಿಧಿತ್ವವನ್ನು ಹೊಂದಿ ಶಾಸಕಾಂಗದ ಘನತೆವೆತ್ತ ಸಂಸ್ಥೆಯಾಗಿ ಬೆಳೆದಿದೆ. ವಿಧಾನ ಸಭೆಗೆ ಪೂರಕವಾಗಿ ಮತ್ತು ಅಲ್ಲಿ ಕೈಗೊಳ್ಳುವ ಹಲವು ನೀತಿ, ನಿರೂಪಣೆ ಹಾಗೂ ಕಾನೂನುಗಳ ರಚನೆಯ ಕುರಿತಾಗಿ ಅತ್ಯಂತ ಸಕಾಲಿಕ ಮತ್ತು ಗಂಭೀರ ಚರ್ಚೆಯನ್ನು ವಿಧಾನ ಪರಿಷತ್ ನಡೆಸಿರುವ ಇತಿಹಾಸ ಇದೆ.

ಇಂತಹ ವಿಧಾನ ಪರಿಷತ್‌ಗೆ ವಿವಿಧ ಕ್ಷೇತ್ರಗಳಂತೆ 'ಬೆಂಗಳೂರು ಪದವೀಧರ ಕ್ಷೇತ್ರ'ದಿಂದಲೂ ಹಲವಾರು ವರ್ಷಗಳಿಂದ 'ಪ್ರತಿನಿಧಿಗಳು' ಆಯ್ಕೆಯಾಗುತ್ತಾ ಬಂದಿದ್ದಾರೆ. ಬೆಂಗಳೂರು



ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳನ್ನೊಳಗೊಂಡ 'ಬೆಂಗಳೂರು ಪದವೀಧರ ಕ್ಷೇತ್ರವು ಹತ್ತಾರು ಸಮಸ್ಯೆಗಳ ಆಗರವೆಂದರೆ ತಪ್ಪಲ್ಲ. ಮುಖ್ಯವಾಗಿ ಪ್ರತಿವರ್ಷ ಸಾವಿರಾರು ಪದವಿಧರ ಯುವಜನರು ಒಂದೆಡೆಯಾದರೆ, ಪದವಿ ಪಡೆದಿರುವ ಸಾವಿರಾರು ಯುವಜನರು ನಿರುದ್ಯೋಗಿಗಳಾಗಿ, ಅರೆ ಉದ್ಯೋಗಿಗಳಾಗಿ, ಅತಿಥಿ, ಗುತ್ತಿಗೆ, ಗೌರವ ಮೊದಲಾದ ಹೆಸರಿನಲ್ಲಿ ದುಡಿಯುತ್ತಿದ್ದರೂ, ಖಾಯಂಗೊಳ್ಳದೆ ಅತಂತ್ರ ಬದುಕು ಸಾಗಿಸುತ್ತಿದ್ದಾರೆ. ನಮ್ಮನ್ನು ಆಳುವ ಸರಕಾರಗಳು ಜಾರಿ ಮಾಡಿದ ಉದಾರೀಕರಣ ನೀತಿಗಳು ಅವಿಭಜಿತ ಬೆಂಗಳೂರು ನಗರ ಹಾಗೂ ಗ್ರಾಮೀಣ ಪ್ರದೇಶದ ಬದುಕಿನ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮವನ್ನೇ ಬೀರಿವೆ. ಕೃಷಿ ಕ್ಷೇತ್ರದ ಈ ಬಿಕ್ಕಟ್ಟಿಗೆ ಸಿಲುಕಿ ನಿರುದ್ಯೋಗದಿಂದ ಯುವಜನರು ಕೆಲಸಕ್ಕಾಗಿ ನಗರಕ್ಕೆ ವಲಸೆ ಬರುತ್ತಿದ್ದಾರೆ. ವಿವಿಧ ಯೋಜನೆಗಳಿಗಾಗಿ ಇದ್ದ ಅಲ್ಪ ಸ್ವಲ್ಪ ಕೃಷಿ ಭೂಮಿ ಕಳೆದುಕೊಂಡ ರೈತ ಕುಟುಂಬಗಳ ಯುವಜನರು 'ಅರೆಬರೆ ಉದ್ಯೋಗ'ಗಳನ್ನ ಆಶ್ರಯಿಸಬೇಕಾಗಿದೆ. ಇಂತಹ ಎಲ್ಲ ಕಾರಣಗಳಿಂದ ಈ ಯುವಜನರು 'ಸಾಂಸ್ಕೃತಿಕ, ಆರ್ಥಿಕ ಪಲ್ಲಟ'ಗಳಿಗೆ ಬಲಿಯಾಗುತ್ತಿದ್ದಾರೆ.

ಈ ಕ್ಷೇತ್ರದಿಂದ ಚುನಾಯಿತರಾದ 'ಶಾಸಕರುಗಳು' ಈ ಭಾಗದ ಪದವೀಧರರು ಎದುರಿಸುತ್ತಿರುವ ಈ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಮತ್ತು ಬಗೆಹರಿಸುವಲ್ಲಿ ಎಷ್ಟು ಪ್ರಯತ್ನಿಸಿದ್ದಾರೆ ಎಂಬುದನ್ನು ನಿರ್ಧರಿಸುವ ಕಾಲಘಟ್ಟದಲ್ಲಿ ಪ್ರಜ್ಞಾವಂತರಾದ ನೀವಿದ್ದೀರಿ ಎಂದು ಭಾವಿಸುತ್ತೇನೆ. ಇತ್ತೀಚಿಗಷ್ಟೇ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಗೊಂಡಿರುವ 'ಶಾಸಕರು'ಗಳು ಹೇಗೆ ವರ್ತಿಸಿದ್ದಾರೆ, ಜಾತಿ, ಹಣ, ಅಧಿಕಾರ ಬಲಗಳು ಹೇಗೆ ಅವರ ಬುದ್ಧಿ ಮತ್ತು ಮನಸ್ಸುಗಳನ್ನು ನಿಯಂತ್ರಿಸಿದೆ ಎನ್ನುವುದನ್ನು ತಾವು ಚೆನ್ನಾಗಿ ಗಮನಿಸಿದ್ದೀರಿ. ಇಂತಹ ಸಂದರ್ಭದಲ್ಲೇ 'ಬೆಂಗಳೂರು ಪದವೀಧರ ಕ್ಷೇತ್ರ' ದಿಂದ ವಿಧಾನ ಪರಿಷತ್‌ಗೆ 'ಸದಸ್ಯರ ಆಯ್ಕೆ'ಯ ಪ್ರಶ್ನೆ ಎದುರಾಗಿದೆ.

ಈ ಸನ್ನಿವೇಶದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ 'ಸ್ನಾತಕೋತ್ತರ ಪದವಿ' ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ 'ಡಾಕ್ಟರೇಟ್' ಪದವೀಧರನೂ ಆಗಿದ್ದೇನೆ. ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಬದಲಾವಣೆಯ ಹೋರಾಟದಲ್ಲಿ ತೊಡಗಿಸಿಕೊಂಡ ನಾನು 'ಬೆಂಗಳೂರು ಪದವೀಧರ ಕ್ಷೇತ್ರ' ದಿಂದ ವಿಧಾನ ಪರಿಷತ್‌ಗೆ ನಡೆಯುವ 'ದ್ವೈವಾರ್ಷಿಕ' ಚುನಾವಣೆಯಲ್ಲಿ ಆಯ್ಕೆಯಾಗ ಬಯಸಿದ್ದೇನೆ. ಎಡಪಕ್ಷಗಳ, ಪ್ರಗತಿಪರರ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ.

ಆದ್ದರಿಂದ 2018 ಜೂನ್ 8 ರಂದು ನಡೆಯುವ ಈ ಚುನಾವಣೆಯಲ್ಲಿ ತಾವು ಮತದಾನ ಮಾಡುವಾಗ 'ಚುನಾವಣಾ ಅಧಿಕಾರಿಗಳು ನೀಡುವ ಪೆನ್ನಿನಿಂದಲೇ ಪ್ರಕಾಶ್ ಕೆ. ಎನ್ನುವ ಹೆಸರಿನ ಮುಂದೆ 1 ಎಂದು ಬರೆಯುವ ಮೂಲಕ ನನಗೆ 'ಪ್ರಥಮ ಪ್ರಾಶಸ್ತ್ಯ' ಮತ ನೀಡಬೇಕೆಂದು ಕಳಕಳಿಯಿಂದ ಕೋರುತ್ತೇನೆ.

ಕ್ರ.ಸ	ಹೆಸರು	ಗುರುತು
	ಪ್ರಕಾಶ್ ಕೆ.	1

ಕೋರಿಕೆ: ಮತದಾನ ಕೇಂದ್ರಕ್ಕೆ ಬರುವಾಗ Election Voter ID/Ration Card/Aadhar Card/Driving Licence/Passport/Bank Pass Book ಯಾವುದಾದರೂ ಒಂದನ್ನು ತಪ್ಪದೇ ತರಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ

ಡಾ.ಪ್ರಕಾಶ್.ಕೆ

9448574389

ನಂತೂರಿನ ನಿರ್ವಸಿತ ಕೊರಗರಿಗೆ ಮನೆಗಳು ಸಂಭ್ರಮದ ಉದ್ಘಾಟನಾ ಸಮಾರಂಭ

ವಾಸುದೇವ ಉಚ್ಚಿಲ್

ಕರ್ನಾಟಕದ ಪರಿಶಿಷ್ಟ ವರ್ಗದ ಸಮುದಾಯಗಳಲ್ಲಿ ಮೂಲ ನಿವಾಸಿಗಳು ಎನಿಸಿರುವ ಕೊರಗ ಸಮುದಾಯವು ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ವಾಸಿಸುತ್ತಿದೆ. ಕಾಡಿನ ಬೆತ್ತ ಬಿಳಲುಗಳನ್ನು ಬಳಸಿ ಬುಟ್ಟಿ ಹೆಣೆಯುವುದು ಅವರ ಜಾತಿವೃತ್ತಿಯಾಗಿತ್ತು. ಇವತ್ತು ಕಾಡಿನ ಬಿದಿರು ಬೆತ್ತ ಕದಿಯುವುದನ್ನು ಸರಕಾರ ನಿರ್ಬಂಧಿಸಿರುವುದರಿಂದ ಕೊರಗರು ತಮಗೆ ತಿಳಿದಿರುವ ವೃತ್ತಿಯಿಂದಲೂ ದೂರವಾಗುತ್ತಿದ್ದಾರೆ. ನಗರದ ಸಮೀಪಕ್ಕೆ ತಲುಪಿರುವ ಕೊರಗರು ಆಸ್ಪತ್ರೆ, ಪುರಸಭೆಗಳಲ್ಲಿ ಸ್ವಚ್ಛತಾ ವೃತ್ತಿಯಲ್ಲೋ ಅಥವಾ ಕಟ್ಟಡ ನಿರ್ಮಾಣದಲ್ಲಿ ಸಹಾಯಕರಾಗಿಯೋ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹಿಂದೆ ಕಾಡಿನಂಚಿನಲ್ಲಿ ವಾಸವಾಗಿರುತ್ತಿದ್ದ ಕೊರಗರು ಗುಡಿಸಲು ಕಟ್ಟಿಕೊಂಡು ವಾಸವಿರುತ್ತಿದ್ದರು. ಮನೆಗಳಲ್ಲೋ, ಗುಡಿಸಲುಗಳಲ್ಲೋ ಒಂದೇ ಕಡೆ ಸ್ಥಿರವಾಗಿ ವಾಸವಾಗಿರುವ ಪದ್ಧತಿ ಇರಲಿಲ್ಲ. ಐವತ್ತು ವರ್ಷಗಳ ಹಿಂದೆ ಕೇವಲ ಮರದಡಿಗಳಲ್ಲೇ ವಾಸವಾಗಿದ್ದ ಕೊರಗ ಕುಟುಂಬಗಳನ್ನು ಕಾಣಬಹುದಾಗಿತ್ತು. ತುಳುನಾಡಿನ ತುಳು ಸಮುದಾಯಗಳ ಮಧ್ಯೆ ಅವರು ಕಡ್ಡಾಯವಾಗಿ ಮಾಡಬೇಕಾದ 'ಅಜಲು' ಪದ್ಧತಿ ಇತ್ತು. ಈ ಪದ್ಧತಿಯಲ್ಲಿ ಕೆಲವು ಆಚರಣೆಗಳು ಆ ಸಮುದಾಯವನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿತ್ತು. ಬೇರೆ ಜಿಲ್ಲೆಗಳಲ್ಲಿ ಆದಿವಾಸಿಗಳು ಅಸ್ಪೃಶ್ಯರಾಗಿದ್ದರೆ, ಕರಾವಳಿಯಲ್ಲಿ ಕೊರಗರು ಅಸ್ಪೃಶ್ಯರು. ಅಂದು ಅಸ್ಪೃಶ್ಯ ಸಮುದಾಯವೆನಿಸಿದ್ದರೂ, ಮನೆಯಲ್ಲಿ ಪುಟ್ಟ ಮಕ್ಕಳಿಗೆ ಕಾಯಿಲೆ, ಜಾಡ್ಯ ಉಂಟಾದಾಗ ಕೊರಗ ಹೆಂಗಸಿಗೆ ಮಗುವನ್ನು ಕೊಟ್ಟು ಹಿಂದಕ್ಕೆ ಪಡೆಯುವ ಮೂಲಕ ಮಗುವಿನ ಜಾಡ್ಯ ನಿವಾರಣೆಯಾಗುವುದು ಎಂಬ ನಂಬಿಕೆ ಇತ್ತು. ಆದರೂ ಕೊರಗ ಸಮುದಾಯಕ್ಕೆ ನಾಗರಿಕರು ಮತ್ತು ಮೇಲುಜಾತಿ ಸಮಾಜ ಎಂದರೆ ಒಂದು ಭಯ ಕೂಡಾ ಇತ್ತು.

ಕೊರಗ ಕುಟುಂಬಗಳ ಎತ್ತಂಗಡಿ:

2009ರಲ್ಲಿ ಮಂಗಳೂರು ಹೊರವಲಯದ ನಂತೂರು ಹೈಪಾಯಿಂಟಿನಲ್ಲಿ ವಾಸವಾಗಿದ್ದ 8 ಕೊರಗ ಕುಟುಂಬಗಳನ್ನು ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯ ಹೆಸರಿನಲ್ಲಿ ಎತ್ತಂಗಡಿ ಮಾಡಲಾಯಿತು.

ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಮತ್ತು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಡೆಸಿದ ಹೋರಾಟ ಮತ್ತು ಶ್ರಮಸಹಕಾರಿಯಿಂದಾಗಿ ಮೊದಲಿನ ಸ್ಥಳದಿಂದ 2 ಕಿ.ಮೀ. ದೂರದ ಕುಲಶೇಖರ ಕೋಟಿಮುರ ಎಂಬಲ್ಲಿ ಉತ್ತಮವಾದ 8 ಮನೆಗಳನ್ನು ಕಟ್ಟಿಸಿಕೊಡಲಾಗಿದೆ. ತಮಗೂ ಇತರ ನಗರವಾಸಿಗಳಂತೆ 2 ಕೊಠಡಿ, ಹಾಲ್, ಅಡುಗೆ ಮನೆ, ಸ್ನಾನ ಹಾಗೂ ಶೌಚದ ಕೋಣೆ, ವಿದ್ಯುತ್, ನೀರು ಸೌಕರ್ಯವುಳ್ಳ ಗುಣಮಟ್ಟದ ಮನೆ ದೊರಕಿದ್ದಕ್ಕಾಗಿ ಅವರ ಮನಸ್ಸಿನಲ್ಲಿ ಸಂತೋಷ ತುಂಬಿದೆ.

ಆ ಎಂಟೂ ಕುಟುಂಬಗಳ ಕೊರಗರಿಗೆ ಹಿಂದೆ ವಾಸವಾಗಿದ್ದ ಜೋಪಡಿಗಳು ಹೆದ್ದಾರಿ ಪಕ್ಕದ ಸರಕಾರಿ ಜಾಗದಲ್ಲೇ ಇದ್ದುವು. ಅವಕ್ಕೆ ಮನೆ ನಂಬ್ರ ಸಿಕ್ಕಿರಲಿಲ್ಲ. ಆ ಕುಟುಂಬಗಳಿಗೆ ರೇಶನ್ ಕಾರ್ಡು ಇರಲಿಲ್ಲ. ಅವನ್ನು ಪಡೆಯುವ ದಾರಿಯೂ ತಿಳಿದಿರಲಿಲ್ಲ. ಹೆದ್ದಾರಿ ವಿಸ್ತರಣೆಯ ಬುಲ್‌ಡೋಜರನ್ನು ತಡೆದು ನಿಲ್ಲಿಸಿದವರು ಮಂಗಳೂರಿನ ಸಿಪಿಐ(ಎಂ) ಕಾರ್ಯಕರ್ತರು. ಆ ಕೊರಗ ಸಮುದಾಯದ ಕೆಲ ಹಿರಿಯರಾದರೋ, ಇತರ ಸಮುದಾಯವನ್ನು ಕಂಡರೇ ಹಿಂಜರಿಯುವವರು. ಸಿಪಿಐ(ಎಂ) ಕಾರ್ಯಕರ್ತರು ಇವರ ಮನೆಯ ಒಳಕ್ಕೆ ಹೋದರೆ, ಅವರು ಹಿಂದಿನ ಬಾಗಿಲಿನಿಂದ ಓಡಿ ಹೋಗುತ್ತಾರೆ. ಹಿಂದಿನ ಬಾಗಿಲಿನಿಂದ ಇವರು ಒಳಹೋದರೆ ಅವರು ಮುಂದಿನ ಬಾಗಿಲಿನಿಂದ ಓಡಿ ಹೋಗುತ್ತಾರೆ. ನಗರ ಮಧ್ಯೆಯೂ ಇರುವ ಇಂಥ ಅಂಜುಬುರುಕ ಸಮುದಾಯದೊಂದಿಗೆ ಸಂಪರ್ಕ ಸಾಧಿಸುವುದೇ ದೊಡ್ಡ ಸವಾಲಾಗಿತ್ತು. ಅವರಲ್ಲಿ ಹೆಚ್ಚಿನ ಹಿರಿಯರು ಈ 8–9 ವರ್ಷಗಳಲ್ಲಿ ತೀರಿ ಕೊಂಡಿದ್ದಾರೆ. ಆದರೆ ಅವರಲ್ಲಿ ಮಹಿಳೆಯರು ಧೈರ್ಯದಿಂದ ಸಿಪಿಐ(ಎಂ)



ಮಂಗಳೂರು ಹೊರವಲಯದ ನಂತೂರು ಹೈಪಾಯಿಂಟಿನಲ್ಲಿ ವಾಸವಾಗಿದ್ದ 8 ಕೊರಗ ಕುಟುಂಬಗಳನ್ನು 2009ರಲ್ಲಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯ ಹೆಸರಿನಲ್ಲಿ ಎತ್ತಂಗಡಿ ಮಾಡಲಾಯಿತು. ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಮತ್ತು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಡೆಸಿದ ಹೋರಾಟ ಮತ್ತು ಶ್ರಮಸಹಕಾರಿಯಿಂದಾಗಿ ಮೊದಲಿನ ಸ್ಥಳದಿಂದ 2 ಕಿ.ಮೀ.ದೂರದ ಕುಲಶೇಖರ ಕೋಟಿಮುರ ಎಂಬಲ್ಲಿ ಉತ್ತಮವಾದ 8 ಮನೆಗಳನ್ನು ಕಟ್ಟಿಸಿಕೊಡಲಾಗಿದೆ. ತಮಗೂ ಇತರ ನಗರವಾಸಿಗಳಂತೆ 2 ಕೊಟಡಿ, ಹಾಲ್, ಅಡುಗೆ ಮನೆ, ಸ್ನಾನ ಹಾಗೂ ಶೌಚದ ಕೋಣೆ, ವಿದ್ಯುತ್, ನೀರು ಸೌಕರ್ಯವುಳ್ಳ ಗುಣಮಟ್ಟದ ಮನೆ ದೊರಕಿದ್ದಕ್ಕಾಗಿ ಅವರ ಮನಸ್ಸಿನಲ್ಲಿ ಸಂತೋಷ ತುಂಬಿದೆ.

ಕಾರ್ಯಕರ್ತರನ್ನು ಮಾತನಾಡಿಸಿದರು. ಪರಿಣಾಮವಾಗಿ, ಅವರನ್ನು ಒಳಗೊಂಡೇ ನಿರ್ವಸಿತ ಕೊರಗರ ಹೋರಾಟವನ್ನು ಕಟ್ಟಲು ಸಾಧ್ಯವಾಯಿತು.

ಮನೆಕಳಕೊಂಡವರಿಗೆ ವಾಸ್ತವ್ಯದ ವ್ಯವಸ್ಥೆ:

ಮನೆ ನಂಬ್ರ ಇಲ್ಲದವರು, ರೇಶನ್ ಕಾರ್ಡ್ ಇಲ್ಲದವರು ಕರ್ನಾಟಕದಲ್ಲಿ ನಾಗರಿಕರೂ ಅಲ್ಲ. ಸರಕಾರದ ಸವಲತ್ತುಗಳನ್ನು ಪಡೆಯಲು ಅರ್ಹರೂ ಅಲ್ಲ. ಇದೇ ವಾದವನ್ನು ಮುಂದಿಟ್ಟು ಜಿಲ್ಲಾಡಳಿತ ಹಾಗೂ ನಗರಾಡಳಿತ ನಾಡಿನ ಮೂಲನಿವಾಸಿಗಳ ಬಗ್ಗೆ ಕರುಣೆಇಲ್ಲದೆ ವರ್ತಿಸಿತು. ನಿರ್ವಸಿತ ಕೊರಗರ ಹೋರಾಟ ಸಮಿತಿ ಕೊರಗರೂ ನಾಗರಿಕರು ಎಂದು ವಾದವನ್ನು ಮಂಡಿಸಿ, ಅವರಿಗೆ ಮನೆಗಳನ್ನು ನಿರ್ಮಿಸಿ ಕೊಡುವ ಜವಾಬ್ದಾರಿ ಸರಕಾರ ಹಾಗೂ ಜಿಲ್ಲಾಡಳಿತದ್ದೆಂದು ತಕರಾರು ಹೂಡಿತು. ಕೆಲವು ದಿನ ಎಲ್ಲೆಲ್ಲೋ ನೆಂಟರ ಮನೆಯಲ್ಲಿ ವಾಸವಿದ್ದವರು, ಆ ಬಳಿಕ ಯಾರ್‍ಯಾರದ್ದೋ ಮನೆಗಳಲ್ಲಿ ದೂರದಲ್ಲಿ ಬಾಡಿಗೆ ಇದ್ದರು. ಕೊರಗರು, ದಲಿತರು, ಕ್ರೈಸ್ತರು ಬಿಟ್ಟರೆ ಸಾಮಾನ್ಯವಾಗಿ ಇತರರು ಕೊರಗರಿಗೆ ಮನೆ ಬಾಡಿಗೆ ಕೊಡುವುದಿಲ್ಲ. ಅಲ್ಲದೆ ಹೆಚ್ಚಿಗೆ ಬಾಡಿಗೆ ಕೊಡಲು ಈ ಕೊರಗ ಕುಟುಂಬಗಳು ಸಮರ್ಥರಲ್ಲ. ಈ ಮನೆಗಳ ಬಾಡಿಗೆಯನ್ನು ಸರಕಾರ/ಸ್ಥಳಿಯಾಡಳಿತ ನೀಡಬೇಕೆಂದು ಹೋರಾಟ ಸಮಿತಿ ದೆಹಲಿಯ ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಹಕ್ಕೊತ್ತಾಯ ಮಾಡಿತು. ಅದರ ಪರಿಣಾಮ 2013 ರಿಂದ ಜಿಲ್ಲಾಡಳಿತವೇ ಈ ಕುಟುಂಬಗಳು ಈ ತನಕ ವಾಸವಿದ್ದ ಮನೆಗಳ ಬಾಡಿಗೆ ವ್ಯವಸ್ಥೆ ಮಾಡಿದೆ. ಈ ಬಾಡಿಗೆ ಅನುದಾನವೂ ಕಾಲ ಕಾಲಕ್ಕೆ ಬಿಡುಗಡೆಯಾಗದೆ, ಬಾಡಿಗೆದಾರರನ್ನು ಮನೆ ಯಜಮಾನರು ಗದರಿಸುವ ಘಟನೆಗಳೂ ನಡೆದಿದೆ. ಇದಕ್ಕಾಗಿ ಮತ್ತೆ ಪ್ರತಿಭಟನೆಗಳನ್ನು ಮಾಡಬೇಕಾಗಿಯೂ ಬಂತು.

ಮನೆ ನಿವೇಶನ ಮಂಜೂರು ಮಾಡಿ, ಮನೆ ಕಟ್ಟಿಸಿ ಕೊಡಿ:

ನಂತೂರಿನ 8 ನಿರ್ವಸಿತ ಕುಟುಂಬಗಳಿಗೆ ಮನೆ ನಿವೇಶನವನ್ನು ಆದ್ಯತೆಯಾಗಿ ಮಂಜೂರು ಮಾಡಬೇಕೆಂದು ಮಂಗಳೂರು ಪಾಲಿಕೆ ಮುಂದೆ ಒತ್ತಾಯಿಸಲಾಯಿತು. ಇಂಥ ಒಂದು ಹೋರಾಟದ ಸಂದರ್ಭದಲ್ಲಿ ನಿರ್ವಸಿತರು ಹೋರಾಟ ಸಮಿತಿ ಸದಸ್ಯರೊಂದಿಗೆ ನಂತೂರಿನಿಂದ ಪಾಲಿಕೆ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಅಲ್ಲದೆ ಈ ವೇಳೆಗೆ ದ.ಕ.ಜಿಲ್ಲಾ ಮಟ್ಟದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರೂಪುಗೊಂಡಿತು. ಮಹಾನಗರ ಪಾಲಿಕೆ ಒಳಗೆ ಅಲ್ಲಲ್ಲಿ ಸೂಕ್ತ ನಿವೇಶನಗಳಿದ್ದರೂ, ನಗರಾಡಳಿತ ಒಮ್ಮೊಮ್ಮೆ ಒಂದೊಂದು ನಿವೇಶನ ಕಾಣಿಸಿ, ಈಗ ಕೊನೆಯದಾಗಿ 2017ರಲ್ಲಿ ಕುಲಶೇಖರ ಕೋಟಿಮರದಲ್ಲಿ 8 ಕುಟುಂಬಗಳಿಗೆ ಒಟ್ಟಾಗಿ 10 ಸೆಂಟ್ಸ್ ನಿವೇಶನ ಮಂಜೂರು ಮಾಡಿತು. ಅಂದರೆ ಒಂದೊಂದು ಕುಟುಂಬಗಳಿಗೆ 1.25 ಸೆಂಟ್ಸ್ ಅಂದರೆ ಸುಮಾರು 550 ಚದರ ಅಡಿಯ ನಿವೇಶನ ಆ ಸ್ಥಳಕ್ಕೆ ಹೆಸರು ಕೋಟಿಮುರ. ಕಠಿಣವಾದ ಲ್ಯಾಟರೈಟ್(ಮುರ) ಕಲ್ಲು ಪ್ರದೇಶವಾದುದರಿಂದ ಆ ಸ್ಥಳಕ್ಕೆ ಕೋಟಿಮುರ ಎಂದು ಹೆಸರು. ಅದರಲ್ಲೂ ಈಗ ಮಂಜೂರಾಗಿರುವ ಸ್ಥಳ ಏರುತಗ್ಗುಗಳಿಂದ ಕೂಡಿದ ಕಠಿಣ ಮುರಕಲ್ಲು ಪ್ರದೇಶ. ಆದರೂ ಅಲ್ಲಿ ಮನೆ ಕಟ್ಟಿಸಿ ಕೊಡಲು ಹೋರಾಟ ಸಮಿತಿ ಒಪ್ಪಿಕೊಂಡಿತು.

ಸ್ಥಳೀಯಾಡಳಿತಕ್ಕೆ ಗಿರಿಜನ ಉಪಯೋಜನೆಯಲ್ಲಿ ಮನೆ ನಿರ್ಮಾಣಕ್ಕೆ ಅನುದಾನ ಲಭ್ಯವಿರುತ್ತದೆ. ಕಾದಿರಿಸಿದ ಜಮೀನಿನಲ್ಲಿ ಮನೆ ನಿರ್ಮಾಣಕ್ಕೆ ತಲಾ ರೂ.3 ಲಕ್ಷ ಅನುದಾನ ನಗರ ಪಾಲಿಕೆ ನೀಡಬಹುದಾಗಿದೆ. ಪಾಲಿಕೆ ಆಡಳಿದಲ್ಲೋ ಕೊರಗರ ಮನೆಗಳಿಗೆ ಆದ್ಯತೆಯಿಲ್ಲ. ಪಾಲಿಕೆ ಆಡಳಿತದ ಕಾಂಗ್ರೆಸ್ ಸದಸ್ಯರಾಗಲೀ, ವಿರೋಧೀ ಬಿಜೆಪಿ ಸದಸ್ಯರಾಗಲೀ ಇದರಲ್ಲಿ ಆಸಕ್ತರಲ್ಲ. ಗುತ್ತಿಗೆದಾರರ ಮೂಲಕ ಮನೆ ನಿರ್ಮಾಣ ಕಾಮಗಾರಿಯನ್ನು ಮಾಡುವುದು ಕಟ್ಟಡ ನಿರ್ಮಾಣದ ಸರಕಾರಿ ಪದ್ಧತಿ. ಕಟ್ಟಡ ನಿರ್ಮಾಣ ಕಾಮಗಾರಿಯನ್ನು ತಾನೇ ಮಾಡುವುದಾಗಿ ಆದಿವಾಸಿ ಹಕ್ಕುಗಳ ಸಮಿತಿ ಹಟ ಹಿಡಿಯಿತು. ಶ್ರಮದಾನ ಹಾಗೂ ಸಾರ್ವಜನಿಕ ದೇಣಿಗೆ ಪಡೆದು ಉತ್ತಮ ಗುಣಮಟ್ಟದ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಸಮಿತಿ ಹೇಳಿತು. ಕೊನೆಗೂ ಆದಿವಾಸಿ ಮನೆ ನಿರ್ಮಾಣ ಸಮಿತಿಗೆ ಪಾಲಿಕೆ ಪಿಡಬ್ಲ್ಯೂಡಿ ಮೂಲಕ ಶರ್ತಗಳಿಗನುಗುಣವಾಗಿ 8 ಮನೆಗಳ ನಿರ್ಮಾಣದ ಗುತ್ತಿಗೆ ನೀಡಿತು.

ಪ್ರತಿ ಮನೆಗೂ ರೂ.3 ಲಕ್ಷವಲ್ಲ, ರೂ.6 ಲಕ್ಷ ಕೊಡಬೇಕು

ಹೀಗೆಂದವರು ಸಮಾಜ ಸೇವಕ ಹಾಗೂ ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ರಾಯ್ ಕಾಸ್ಟಲಿನೋ ಅವರು. ಅವರು ಬಿಲ್ಡರ್ ಕೂಡಾ. ನಿರ್ಮಾಣಗೊಂಡ ಮನೆಗಳನ್ನು ಕೂಲಂಕುಷ ಪರಿಶೀಲಿಸಿ ಅವರು ಹೇಳಿದ ಮಾತಿದು. ಅವರನ್ನೊಳಗೊಂಡು ಇನ್ನೂ ಅನೇಕರು ಧನ ಸಹಾಯ ನೀಡಿದ್ದಾರೆ.

ಮೊದಲಿನಿಂದಲೂ ನಿರ್ವಸಿತ ಕೊರಗರ ಹೋರಾಟಕ್ಕೆ ನೇತೃತ್ವ ನೀಡಿದ ಡಾ.ಕೃಷ್ಣಪ್ಪ ಕೊಂಚಾಡಿ, ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು ಅವರೇ ಮನೆ ನಿರ್ಮಾಣ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿ. ಬೆಂಬಿಡದೆ ಅವರ ಛಲದಿಂದ 8 ಕೊರಗ ಆದಿವಾಸಿ ಕುಟುಂಬಗಳ ಕನಸು ನನಸಾಗಿದೆ. 15 ತಿಂಗಳ ಅವಧಿಯಲ್ಲಿ ಮನೆಗಳ ಕಾಮಗಾರಿ ಮುಗಿದಿದೆ. 500 ಚದರ ಅಡಿಯ ಮನೆಗಳು. ಸರಕಾರ ಗುತ್ತಿಗೆಯಲ್ಲಿ ಮಾಡಿದ್ದಿದ್ದರೆ ಒಂದೆರಡು ವರ್ಷಗಳಲ್ಲಿ ಹಾಳಾಗುತ್ತಿದ್ದ ಮನೆಗಳಾಗಿರುತ್ತಿದ್ದವು. ಮುಖ್ಯ ಕಟ್ಟಡ ನಿರ್ಮಾಣಕಾರರು ವಾರದ ಎಲ್ಲಾ ದಿನಗಳಲ್ಲಿ ಕೆಲಸ ಮಾಡುತ್ತಿದ್ದರೆ, ಆದಿತ್ಯವಾರದಂದು ಸರದಿಯಲ್ಲಿ ಉರ್ವಸ್ಟೋರ್, ಶಕ್ತಿನಗರ, ಕೊಂಚಾಡಿ ಮತ್ತು ಜಪ್ಪಿನಮೊಗರು ಸಿಪಿಐ(ಎಂ) ಹಾಗೂ ಡಿವೈಎಫ್ಐ ಕಾರ್ಯಕರ್ತರು ಅದರಲ್ಲೂ ಕಟ್ಟಡ ಕಾರ್ಮಿಕರಾಗಿ ವೃತ್ತಿ ಮಾಡುವವರು–ಮನೆ ನಿರ್ಮಾಣದಲ್ಲಿ ಭಾಗವಹಿಸಿದರು. ಗುಣಮಟ್ಟದ ಸಾಮಾಗ್ರಿಗಳು ಅಗ್ಗವಾಗಿ ಲಭಿಸುವ ಮಾರಾಟ ಮಳಿಗೆಗಳನ್ನು ಪತ್ತೆ ಮಾಡಿ ಅಂಥವನ್ನು ಮನೆ ನಿರ್ಮಾಣದಲ್ಲಿ ಬಳಸಲಾಯಿತು. ಯಾರೋ ಖಾಸಗಿ ಸಿವಿಲ್ ಗುತ್ತಿಗೆದಾರರು ಈ ಮನೆಗಳನ್ನು ಮಾಡಿದ್ದಿರಬೇಕೆಂದು ಊಹಿಸಿ, ಅನೇಕರು ಕಡಿಮೆ ದುಡ್ಡಲ್ಲಿ ಮನೆ ಕಟ್ಟಿಸಬಯಸುವವರು ಗುತ್ತಿಗೆದಾರರನ್ನು ಹುಡುಕಿಕೊಂಡು ಸಿಪಿಐ(ಎಂ) ಮಂಗಳೂರು ನಗರ ಕಚೇರಿಗೆ ಬಂದರು. ದ.ಕ. ಜಿಲ್ಲಾ ದಲಿತ ಹಕ್ಕುಗಳ ಸಮಿತಿ ಅಧ್ಯಕ್ಷರಾದ

ಪುಟ 6 ಕ್ಕೆ





ಸೆಪ್ಟೆಂಬರ್ 5 : 'ಮಜ್ದೂರ್-ಕಿಸಾನ್ ಸಂಘರ್ಷ ರ್‍ಯಾಲಿ'ಗೆ ದೆಹಲಿ ಚಲೋಗೆ ಕರೆ

ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ತೀರ್ಮಾನದಂತೆ ಸೆಪ್ಟೆಂಬರ್ 5, 2018ರಂದು ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು, ಪ್ರಾಂತ ರೈತ ಸಂಘ ಹಾಗು ಪ್ರಾಂತ ಕೃಷಿಕೂಲಿಗಾರರ ಸಂಘಗಳು ಜಂಟಿಯಾಗಿ ಮಜ್ದೂರ್-ಕಿಸಾನ್ ಸಂಘರ್ಷ ರ್‍ಯಾಲಿಯನ್ನು ದೆಹಲಿಯಲ್ಲಿ ನಡೆಸಲು ತೀರ್ಮಾನಿಸಿದೆ. ಕೇಂದ್ರ ಸರ್ಕಾರದ ಆಕ್ರಮಣಕಾರಿ ಹಾಗು ಜನವಿರೋಧಿ ಆರ್ಥಿಕ ನೀತಿಗಳಿಂದ ನೊಂದ ಜನವಿಭಾಗಗಳನ್ನು ಒಂದುಗೂಡಿಸಲು ಹಾಗೂ ಜನಪರ ಬೇಡಿಕೆಗಳಿಗೆ ಪ್ರಬಲ ಪ್ರಚಾರ ನೀಡಲು ಪ್ರಚಾರಾಂದೋಳನಗಳನ್ನು ಮಾಡಲು ತೀರ್ಮಾನಿಸಲಾಗಿದೆ. ಅಖಿಲ ಭಾರತ ಮಟ್ಟದಲ್ಲಿ 5 ವಲಯವಾರು ಜಾಥಗಳನ್ನು ರೂಪಿಸಲಾಗುವುದು. ಎಲ್ಲಾ ರಾಜ್ಯಗಳನ್ನು ಈ ಜಾಥಗಳು ತಲುಪಲಿವೆ. ಸೆಪ್ಟೆಂಬರ್ 5ರ ದೆಹಲಿ ಹೋರಾಟಕ್ಕೆ ರಾಜ್ಯದಿಂದ ಅತಿಹೆಚ್ಚು ಸಂಗಾತಿಗಳನ್ನು ಕರೆದೊಯ್ಯಲು ಈಗಿಂದಲೇ ಪ್ರಯತ್ನಗಳನ್ನು ಮಾಡಬೇಕು, ಎಂದು ಮೇ 19 ಮತ್ತು 20, 2018ರಂದು ಬೆಂಗಳೂರಿನಲ್ಲಿ ಸಿಐಟಿಯು ರಾಜ್ಯ ಪದಾಧಿಕಾರಿಗಳ ಸಭೆಯು ಕರೆ ಕೊಟ್ಟಿದೆ.

ಇದಕ್ಕೆ ಪೂರ್ವಭಾವಿ ತಯಾರಿಯಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ತನ್ನ ಘಟಕಗಳಿಗೆ ಕರೆ ನೀಡಿದೆ

ಜಿಲ್ಲಾ ಜಾಥಾಗಳು

(ಜುಲೈ 2ನೇ ವಾರ – ಅಗಸ್ಟ್ 1ನೇ ವಾರ) :

ಜಿಲ್ಲಾಮಟ್ಟದ ಪ್ರಚಾರ ಜಾಥಾಗಳನ್ನು ಜುಲೈ ಎರಡನೇ ವಾರದಿಂದ ಆಗಸ್ಟ್ ಮೊದಲನೇ ವಾರದ ಒಳಗೆ ಮಾಡಬೇಕು. ಎಐಕೆಎಸ್, ಪ್ರಾಂತ ಕೃಷಿ ಕೂಲಿಗಾರರ ಸಂಘಗಳ ಜತೆ ಜಂಟಿಯಾಗಿ ಈ ಜಾಥಾಗಳನ್ನು ರೂಪಿಸುವುದು.

ರೈತರ ಅಖಿಲ ಭಾರತ ಮಟ್ಟದ ಜೈಲು ಭರೋ (ಆಗಸ್ಟ್ 9)ಗೆ ಬೆಂಬಲ :

ಆಗಸ್ಟ್ 9 ರಂದು ರೈತರ ಅಖಿಲ ಭಾರತ ಮಟ್ಟದ ಜೈಲು ಭರೋ ಹೋರಾಟಕ್ಕೆ ಬೆಂಬಲ : ಸ್ವಾತಂತ್ರ ಹೋರಾಟಕ್ಕೆ ಸ್ಪೂರ್ತಿ ನೀಡಿದ ಚಲೇಜಾವ್ ಚಳುವಳಿಯು ನಡೆದ ಆಗಸ್ಟ್ 9ರಂದು ರಾಷ್ಟ್ರವ್ಯಂತ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಂಬಲ ಬೆಲೆ ನಿಗದಿ ಒಳಗೊಂಡಂತೆ ಹಲವು ಬೇಡಿಕೆಗಳಿಗಾಗಿ ರೈತ-ಕೃಷಿಕೂಲಿಗಾರರ ಸಂಘಟನೆಗಳು ನಡೆಸಲು ಉದ್ದೇಶಿಸಿರುವ ಜೈಲು ಭರೋ ಹೋರಾಟಕ್ಕೆ ಸಿಐಟಿಯು ಸಂಘಟನೆಗಳು ಸಂಪೂರ್ಣ ಬೆಂಬಲ ನೀಡಬೇಕು ಹಾಗು ಅತಿ ಹೆಚ್ಚು ಕಾರ್ಮಿಕರನ್ನು ಅಣಿನೆರಸಿ ಸಾಮೂಹಿಕ ಬೆಂಬಲ ನೀಡಲು ಪ್ರಯತ್ನಿಸಬೇಕು.

ಆಗಸ್ಟ್ 14 ರಂದು ಪೂರ್ತಿ ರಾತ್ರಿ ಸಾಮೂಹಿಕ ಜಾಗರಣೆ :

ಸ್ವಾತಂತ್ರ ದಿನಾಚರಣೆಯಂದು ದೇಶದ ಐಕ್ಯತೆ, ಸ್ವಾತಂತ್ರ ಹಾಗು ಪ್ರಜಾಪ್ರಭುತ್ವದ ಉಳಿವಿಗಾಗಿ, ಕಾರ್ಮಿಕರ ಹಕ್ಕುಗಳಿಗಾಗಿ, ಯೋಗ್ಯ ಕನಿಷ್ಟವೇತನ, ಕೆಲಸದ ಭದ್ರತೆ, ಸಾಮೂಹಿಕ ರಕ್ಷಣಾ ಯೋಜನೆಗಳ ಜಾರಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ವಿರುದ್ಧ ಆಗಸ್ಟ್ 14 ಸಂಜೆಯಿಂದ ಆಗಸ್ಟ್ 15ರ ಬೆಳಿಗ್ಗೆವರೆಗೆ ಎಲ್ಲಾ ತಾಲೂಕು ಕೇಂದ್ರಗಳಲ್ಲಿಯು ಸಾಮೂಹಿಕ ಜಾಗರಣಾ ಪ್ರದರ್ಶನ ನಡೆಸಬೇಕು.

ಸಂಘಟನಾ ಕಾರ್ಯಾಗಾರಗಳು

ಇವಲ್ಲದೆ ಸಂಘಟನೆಯನ್ನು ಬಲಪಡಿಸಲು ರಾಜ್ಯ ಮತು ಜಿಲ್ಲಾ ಕಾರ್ಯಾಗಾರಗಳನ್ನು ಸಂಘಟಿಸಲೂ ಸಭೆ ನಿರ್ಧರಿಸಿತು. ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯಲ್ಲಿ ಅಂತಿಮಗೊಳಿಸಲಾದ ಸಮಕಾಲೀನಗೊಳಿಸಿ ಸಂಘಟನಾ ದಸ್ತಾವೇಜಿನ ಸಮರ್ಪಕ ಜಾರಿಗಾಗಿ ಸಿದ್ಧತೆಗಳನ್ನು ಮಾಡಲು ಕಾರ್ಯಾಗಾರಗಳನ್ನು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ರಾಜ್ಯ ಮಟ್ಟದ ಕಾರ್ಯಾಗಾರವನ್ನು ದಿನಾಂಕ 13, 14 & 15 ಜೂನ್, 2018 ರಲ್ಲಿ ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಜಿಲ್ಲಾ ಮಟ್ಟದ ಕಾರ್ಯಾಗಾರಗಳು: ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಜೂನ್ 20ರಿಂದ ಜುಲೈ 21, 2018ರ ಒಳಗಾಗಿ ಪ್ರತಿ ಜಿಲ್ಲೆಗಳಲ್ಲಿಯು ನಡೆಸಲು ಸಿದ್ಧತೆಗಳನ್ನು ಮಾಡಬೇಕು.

ವಿಧಾನ ಸಭೆ ಚುನಾವಣೆಗಳು:

ವಿಧಾನಸಭೆ ಚುನಾವಣೆಗಳಲ್ಲಿ ಯಾರಿಗೂ ಬಹುಮತ ಸಿಗದೆ ಇದ್ದ ಕಾರಣ, ಜೆಡಿ(ಎಸ್) ಕಾಂಗ್ರೆಸ್ ಮೈತ್ರಿ ಸರ್ಕಾರ ಮೂಡಿಬರುವುದು, ಜಾತ್ಯಾತೀತ ಮೌಲ್ಯಗಳನ್ನು ರಕ್ಷಿಸಲು ಅಗತ್ಯ ಕ್ರಮವಾಗಿರುತ್ತದೆ. ಕಾರ್ಮಿಕ ವರ್ಗದ ಐಕ್ಯತೆಗೆ ದಕ್ಕೆ ತರುವ ಕೋಮುವಾದದ ವಿರುದ್ಧ ಹಾಗು ಬಂಡವಾಳಶಾಹಿ ಪರ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ನಿರ್ಣಾಯಕ ಹೋರಾಟಗಳನ್ನು ರೂಪಿಸುವುದು ಸಿಐಟಿಯುವಿನ ಕರ್ತವ್ಯವಾಗಿದೆ. ಈ ಚುನಾವಣಾ ಪ್ರಕ್ರಿಯೆಯಲ್ಲಿ ಬೆಳೆಯುತ್ತಿರುವ ಜಾತಿ ಆಧಾರದ ಕ್ರೋಢೀಕರಣ ಕಾರ್ಮಿಕ ಚಳುವಳಿಗೆ ಮುಂದಿನ ದಿನಗಳಲ್ಲಿ ದೊಡ್ಡ ಸವಾಲಾಗುವಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ವ್ಯಾಪಕ ಹಾಗು ಐಕ್ಯ ಕಾರ್ಮಿಕ ವರ್ಗದ ಚಳುವಳಿಯನ್ನು ಮುನ್ನಡೆಸಲು ಸಿಐಟಿಯು ಕ್ರಿಯಾಶೀಲವಾಗಬೇಕು.

ವಿಧಾನ ಪರಿಷತ್ ಬೆಂಗಳೂರು ಪದವೀಧರರ ಕ್ಷೇತ್ರದ ಚುನಾವಣೆ :

ದಿನಾಂಕ 8.06.2018ರಂದು ನಡೆಯಲಿರುವ ಈ ಚುನಾವಣೆಯಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕಾಂ. ಕೆ.ಪ್ರಕಾಶ್ ರವರು ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧೆಮಾಡಲಿದ್ದಾರೆ. ಪ್ರಚಾರ ನಡೆಸಲು ಸಿಐಟಿಯು ಸಂಘಟನೆಗಳ ಸದಸ್ಯರುಗಳನ್ನು ತೊಡಗಿಸಲು ತೀರ್ಮಾನಿಸಲಾಗಿದೆ.

ಕಾಂ.ಸುಬಾಶ್ ಕೊಪ್ಪಿಕರ್‌ರವರ ಕುಟುಂಬಕ್ಕೆ ನೆರವು :

ಚಳುವಳಿಯ ಪೂರ್ಣಕಾಲ ಕಾರ್ಯಕರ್ತರಿಗೆ ನೆರವಾಗಲು ಪ್ರತಿ ಸಂಘಟನೆ ಹಾಗು ಜಿಲ್ಲಾ ಸಮಿತಿಗಳು ಉದಾರವಾದ ಧನಸಹಾಯವನ್ನು ರಾಜ್ಯ ಸಮಿತಿಗೆ ಕಳುಹಿಸಿಕೊಡಲು ವಿನಂತಿ ಮಾಡಲಾಗಿದೆ.

10 ಕೋಟಿ ಸಹಿ ಸಂಗ್ರಹಕ್ಕೆ ರೈತ ಸಂಘ ಕರೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ಸಭೆಯು ದಿನಾಂಕ 19.05.2018 ರಂದು ಬೆಂಗಳೂರಿನಲ್ಲಿ ನಡೆದಿದ್ದು, ದೇಶದಾದ್ಯಂತ ಕಿಸಾನ್ ಸಭಾದ 10 ಕೋಟಿ ಸಂಗ್ರಹ ಚಳುವಳಿಯ ಭಾಗವಾಗಿ, ರಾಜ್ಯದಲ್ಲಿ 5 ಕನಿಷ್ಟ 5 ಲಕ್ಷ ಸಹಿ ಸಂಗ್ರಹ ಮಾಡಲು ಘಟಕಗಳಿಗೆ ಕರೆ ನೀಡಿದೆ.

ರಾಜ್ಯದಲ್ಲಿ 5 ಲಕ್ಷ ಸಹಿ ಸಂಗ್ರಹಕ್ಕೆ ಕರೆ

ಅಖಿಲ ಭಾರತ ಕಿಸಾನ್ ಸಭಾವು ಮುಖ್ಯವಾಗಿ, ರೈತ- ಕೂಲಿಕಾರರ ಸಾಲಮನ್ನಾ, ಬೆಂಬಲಿತ ಬೆಲೆ ಕಾಯ್ದೆ, ಬೆಳೆ ವಿಮೆ ಹಾಗೂ ತಲಾ 5,000 ಪಿಂಚಣಿಗಾಗಿ ಕೇಂದ್ರ ಸರಕಾರವನ್ನು ಒತ್ತಾಯಿಸಿ ದೇಶದಾದ್ಯಂತ ರೈತ- ಕೂಲಿಕಾರರ ನಡುವೆ 10 ಕೋಟಿ ಸಹಿ ಸಂಗ್ರಹಿಸಿ, ಕೇಂದ್ರ ಸರಕಾರಕ್ಕೆ ಸಲ್ಲಿಸಲು ಕರೆ ನೀಡಿದೆ. ಈ ಕುರಿತು ಚರ್ಚಿಸಿದ ರಾಜ್ಯ ಸಮಿತಿಯು, ಕೇಂದ್ರ ಸಮಿತಿ ಗುರುತಿಸಿದ ನಾಲ್ಕು ಹಕ್ಕೊತ್ತಾಯಗಳ ಜೊತೆ, ಇನ್ನೆರಡು ಭೂಮಿ ಹಾಗೂ ಉದ್ಯೋಗ ಖಾತ್ರಿ ಪ್ರಶ್ನೆಗಳನ್ನು ಸೇರಿಸಿ, ಒಟ್ಟು ಆರು ಹಕ್ಕೊತ್ತಾಯಗಳ ಮನವಿಯನ್ನು ತಯಾರಿಸಿ, ರಾಜ್ಯದಾದ್ಯಂತ ಕನಿಷ್ಟ 5 ಲಕ್ಷ ಸಹಿ ಸಂಗ್ರಹಿಸಲು ನಿರ್ಧರಿಸಿದೆ. (ಹಕಕ್ಕೊತ್ತಾಯಗಳ ಪಟ್ಟಿ ಬಾಕ್ಸಿನಲ್ಲಿದೆ) ಜಿಲ್ಲಾ ಸಮಿತಿಗಳು ತಮ್ಮ ವ್ಯಾಪ್ತಿಯ ಗ್ರಾಮ ಘಟಕಗಳ ಮೂಲಕ ಮನೆಮನೆಗೆ ತೆರಳಿ ನೂರಾರು ಕುಟುಂಬಗಳ ಸಂಪರ್ಕಿಸಿ, ಸಹಿಸಂಗ್ರಹಕ್ಕೆ ಕ್ರಮವಹಿಸಲು ಮತ್ತು ಇದೇ ಸಂದರ್ಭವನ್ನು ಸದಸ್ಯತ್ವ ನೊಂದಾವಣೆಗೆ ಬಳಸಿಕೊಳ್ಳಲು ಕರೆ ನೀಡಿದೆ.

ಜಂಟಿ ಜೈಲ್ ಭರೋ ಚಳುವಳಿ:ಆಗಸ್ಟ್ 09, 2018

ಮೇಲೆ ಹೇಳಲಾದ ಹಕ್ಕೊತ್ತಾಯಗಳನ್ನು ಕೇಂದ್ರ ಸರಕಾರದ ಮುಂದೆ ಆಗಸ್ಟ್ 9, 2018ರಂದು ಮಂಡಿಸಿ ಒತ್ತಾಯಿಸಲು ಮತ್ತು ಅದೇ ದಿನ ಜಂಟಿಯಾಗಿ ಜೈಲ್ ಭರೋ ಚಳುವಳಿಯನ್ನು ದೇಶ ವ್ಯಾಪ್ತಿಯಾಗಿ ಕನಿಷ್ಟ 10 ಲಕ್ಷ ಜನರನ್ನು ಸಂಘಟಿಸಲು ಕರೆ ನೀಡಿದೆ. ಈ ಕುರಿತು ಚರ್ಚಿಸಿದ ರಾಜ್ಯ ಸಮಿತಿಯು, ಕರ್ನಾಟಕದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಸಿಐಟಿಯು, ದಲಿತ ಹಕ್ಕುಗಳ ಸಮಿತಿ- ಕರ್ನಾಟಕ, ಕರ್ನಾಟಕ ರಾಜ್ಯ ಆದಿವಾಸಿಹಕ್ಕುಗಳ ಸಮನ್ವಯ ಸಮಿತಿ ಮತ್ತು ಕರ್ಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಗಳೊಂದಿಗೆ ಸೇರಿ, ಈ ಜಂಟಿ ಚಳುವಳಿಯನ್ನು ಯಶಸ್ವಿಗೊಳಿಸಲು ನಿರ್ಧರಿಸಿದೆ.

ರಾಜ್ಯದಾದ್ಯಂತ 50 ಸಾವಿರ ಜನರನ್ನು ಜಿಲ್ಲಾದಿಕಾರಿಗಳ ಕಚೇರಿ ಮುಂದೆ ಸೇರಿಸಿ, ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗುವಂತೆ ಕ್ರಮ ವಹಿಸಲು ನಿರ್ಧರಿಸಿದೆ. ಪ್ರತಿಯೊಂದು ಜಿಲ್ಲಾ ಸಮಿತಿಗಳು ಕನಿಷ್ಠ ಒಂದು ಸಾವಿರಕ್ಕೆ ಕಡಿಮೆ ಇಲ್ಲದಂತೆ ಗರಿಷ್ಠ 2,000 ದಿಂದ 5,000 ಇರುವಂತೆ ಜನರನ್ನು ಅಣಿ ನೆರಸಲು ಯೋಜಿಸಬೇಕೆಂದು ಕರೆ ನೀಡಿದೆ.

ಇದಕ್ಕೆ ಪೂರ್ವದಲ್ಲಿ, ಈ ಎಲ್ಲ ಸಂಘಟನೆಗಳ ಜಂಟಿ ಸಭೆಗಳನ್ನು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಘಟಿಸಲು ನಿರ್ಧರಿಸಿದೆ ಹಾಗೂ ಆ ಜಂಟಿ ವೇದಿಕೆಯ ಮೂಲಕ ಜಿಲ್ಲಾ ಮಟ್ಟದಲ್ಲಿ ಇಲ್ಲವೇ ವಿಭಾಗ ಮಟ್ಟದಲ್ಲಿ ಜಂಟಿ ವಾಹನ ಜಾಥಾಗಳನ್ನು ಸಂಘಟಿಸಿ ಜುಲೈ-15ರಿಂದ ಜುಲೈ-30ರವರೆಗೆ ಪ್ರಚಾರಾಂದೋಳನಗಳನ್ನು ಸಂಘಟಿಸಲು ನಿರ್ಧರಿಸಿದೆ.

ಭೂ ಆಕ್ರಮಣ ಚಳುವಳಿಗಳು :

ಬೆಂಗಳೂರು ನಗರ ಜಿಲ್ಲಾ ಸಮಿತಿಯು, ಮನೆ ನಿವೇಶನಕ್ಕಾಗಿ ಬೆಂಗಳೂರು ನಗರದಲ್ಲಿ 3000ಜನರಿಂದ ಎರಡು ಕಡೆ ಭೂ ಆಕ್ರಮಣ ಚಳುವಳಿಯನ್ನು ಸಂಘಟಿಸಲು ಉದ್ದೇಶಿಸಿದೆ. ಅದೇ ರೀತಿ, ತುಮುಕೂರು ಜಿಲ್ಲಾ ಸಮಿತಿಯು ಬಗರ್ ಹುಕುಂ ಜಮೀನಿನಲ್ಲಿ ಪ್ರವೇಶಿಸುವ ಚಳುವಳಿಯನ್ನು ಸಂಘಟಿಸಲು ಉದ್ದೇಶಿಸಿದ್ದು ಅವುಗಳನ್ನು ರಾಜ್ಯ ಸಮಿತಿಯು ಬೆಂಬಲಿಸಿದೆ.

ಸಹಿ ಸಂಗ್ರಹದ ಹಕ್ಕೊತ್ತಾಯಗಳ ಪಟ್ಟಿ

ಹಕ್ಕೊತ್ತಾಯಗಳು :

1). ಡಾ. ಎಂ.ಎಸ್. ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸೇರಿದಂತೆ ನಿಗದಿಸುವ ಬೆಂಬಲ ಬೆಲೆಯನ್ನು ಕಾಯ್ದೆಯನ್ನಾಗಿಸಬೇಕು.

2) ತಕ್ಷಣವೇ ರೈತರು ಹಾಗೂ ಕೂಲಿಕಾರರ ಸಾಲ ಮನ್ನಾ ಮಾಡಬೇಕು ಮತ್ತು ಕೇರಳದ ಮಾದರಿಯಲ್ಲಿ ಋಣ ಮುಕ್ತ ಕಾಯ್ದೆಯನ್ನು ಜಾರಿಗೊಳಿಸಬೇಕು.

3) ಎಲ್ಲಾ ಬಡವರಿಗೆ ಹಿತ್ತಲು ಸಹಿತ ಉಚಿತ ಮನೆಯನ್ನು ಕಟ್ಟಿಕೊಡಬೇಕು. ವ್ಯವಸಾಯದಲ್ಲಿ ತೊಡಗಲು ಇಚ್ಛಿಸುವ ಎಲ್ಲಾ ಬಡವರಿಗೆ ತಲಾ 5 ಎಕರೆ ಭೂಮಿಯನ್ನು ಒದಗಿಸಬೇಕು.

4) ಉದ್ಯೋಗ ಖಾತ್ರಿ ಕೆಲಸವನ್ನು 100 ದಿನಗಳ ಕಾಲ ಕಡ್ಡಾಯವಾಗಿ ಒದಗಿಸಬೇಕು ಮತ್ತು 200 ದಿನಗಳಿಗೆ, ನಗರ ಪ್ರದೇಶಕ್ಕೆ ವಿಸ್ತರಿಸಬೇಕು. ಕೂಲಿಯನ್ನು 600 ರೂ.ಗಳಿಗೆ ಹೆಚ್ಚಿಸಬೇಕು.

5) ಬೆಳೆ ವಿಮೆ ಯೋಜನೆಯನ್ನು ರೈತ-ಸ್ನೇಹಿಯಾಗಿ ಬದಲಾಯಿಸಬೇಕು

6) ರೈತರು-ಕೂಲಿಕಾರರಿಗೆ ತಲಾ 5,000 ರೂಗಳ ಮಾಸಿಕ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು.

ಬಿಜೆಪಿಯನ್ನು 2019ರಲ್ಲಿ ಸೋಲಿಸಲು........ ಪುಟ 3 ರಿಂದ

ಮುಗಿದಿರುವುದರಿಂದ ಉಚಿತ ಲ್ಯಾಪ್ ಟಾಪ್, ಸ್ಮಾರ್ಟ ಫೋನ್ ಮುಂತಾದ ಆಮಿಷಗಳನ್ನು ಬಿಟ್ಟು ಗಟ್ಟಿಯಾದ ಕ್ರಮಗಳ ಬಗ್ಗೆ ಯೋಚಿಸಬೇಕಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಸಹ ವಿರೋಧಿ ರಂಗ ಹೇಗೆ ಬಿಜೆಪಿಗಿಂತ ನೀತಿಗಳಲ್ಲಿ ಭಿನ್ನ ಎಂದು ರುಜುವಾತು ಮಾಡುವ ಹೊಣೆ ಕರ್ನಾಟಕದ ಸಮ್ಮಿಶ್ರ ಸರಕಾರದ ಮೇಲೆ ಬೀಳಲಿದೆ.

ಬಿಜೆಪಿಗೆ ಬಹುಮತ ಬಂದಿಲ್ಲ, ನಿಜ. ಆದರೆ ಅದರ ಕೋಮುವಾದಿ ರಾಜಕೀಯ ಸೋತಿದೆ ಎನ್ನುವಂತಿಲ್ಲ. ಅದರಿಂದಲೇ ತನ್ನ ಸೀಟು ಮತ್ತು ಮತಗಳಿಕೆಯನ್ನು ಹಲವು ಪ್ರದೇಶಗಳಲ್ಲಿ ಹೆಚ್ಚಿಸಿಕೊಂಡಿದೆ. ಆದ್ದರಿಂದ ಬಿಜೆಪಿ-ಸಂಘಪರಿವಾರದ ಕೋಮುವಾದಿ ಅಜೆಂಡಾದ ವಿರುದ್ಧ ಇತರ ಪ್ರಜಾಪ್ರಭುತ್ವ ಶಕ್ತಿಗಳ ಜತೆಸೇರಿ ಹೋರಾಟ ಮಾಡದೆ 2019ಕ್ಕೆ ಬರಿಯ (1+1=2) ಅಂಕಗಣಿತ ತಮ್ಮ ನೆರವಿಗೆ ಬರುತ್ತದೆ ಎಂದು ನೆಚ್ಚಿಕೊಳ್ಳುವುದು ಮೂರ್ಖತನವಾಗುತ್ತದೆ. ಎರಡೂ ಪಕ್ಷಗಳ ಕೂಟವಾದಾಗ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಲವು ಕ್ಷೇತ್ರಗಳಲ್ಲಿ ಪ್ರಯೋಜನವೂ ಆಗುವ ಸಾಧ್ಯತೆಯಿದೆ. ಅದರ ಕೋಮುವಾದಿ ರಾಜಕಾರಣ ಮತ್ತು ಆರ್ಥಿಕ ನೀತಿಗಳ ಬಗ್ಗೆ ಸಮಗ್ರ ದಾಳಿ ಮಾಡದೆ ಇದು ಸುಲಭಸಾಧ್ಯವಲ್ಲ. ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮಿಯೂ ಅಧಿಕಾರ ಸಿಗದ ಬಿಜೆಪಿಗೆ ಒಂದು ವಿಭಾಗದಿಂದ ಅನುಕಂಪ ಸಹ ಸಿಗುವ ಸಾಧ್ಯತೆಯಿದೆ.

ಇವೆಲ್ಲ 'ಉಪದೇಶ'ಗಳನ್ನು ಜೆಡಿ-ಎಸ್ ಕಾಂಗ್ರೆಸುಗಳು ಕೇಳುತ್ತವೆ ಎಂಬುದನ್ನು ನಂಬುವುದು ಅವುಗಳ ವರ್ಗಸ್ವಭಾವ ಗೊತ್ತಿರುವವರಿಗೆ ಕಷ್ಟ. ಆದ್ದರಿಂದ ಎಡ-ಪ್ರಜಾಸತ್ತಾತ್ಮ ಶಕ್ತಿಗಳು ಬಿಜೆಪಿಯ ನೀತಿಗಳ ಮೇಲೆ ನೇರ ಪ್ರಹಾರ ಮಾಡಬೇಕು. ಸಮ್ಮಿಶ್ರ ಸರಕಾರದ ಅಸ್ತಿತ್ವದಿಂದ ಇಂತಹ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಅವಕಾಶ ಸಿಗುವುದಷ್ಟೇ ಎರಡು ಆಡಳಿತಗಳ ನಡುವೆ ಭಿನ್ನತೆ ಎಂಬುದನ್ನು ಅರಿತುಕೊಳ್ಳಬೇಕು. ಜನಪರ ಕಾರ್ಯಕ್ರಮಗಳ ಜಾರಿಗೆ ಅದರ ಮೇಲೆ ಒತ್ತಡ ತರಬೇಕು.



ಕರ್ನಾಟಕದಲ್ಲಿ ಅನೈತಿಕ ರಾಜಕಾರಣ

ಉಗ್ರ ಬಲಪಂಥೀಯ ಸರ್ಕಾರಕ್ಕಿಂತ ಇಂದು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೇಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಒಂದು ರೀತಿಯಲ್ಲಿ ಜನರಿಗೆ ಸಮಾಧಾನ ತಂದಿದೆ. ಮುಖ್ಯಮಂತ್ರಿಯಾಗಿ ಘೋಷಣೆಯಾದ ಮೇಲೆ ಕುಮಾರಸ್ವಾಮಿ ಅವರು ಎಷ್ಟೊಂದು ದೇವಾಲಯಗಳನ್ನು ಸಂದರ್ಶಿಸಿದರು, ಎಷ್ಟು ಯಾಗ, ಯಜ್ಞ, ಪೂಜೆ ಮಾಡಿದರು ಎಂಬುದು ಯಾವ ಬಗೆಯ ಸೂಚನೆಯನ್ನು ನೀಡುತ್ತಿದೆ? ಪ್ರಮಾಣ ವಚನ ಸಮಾರಂಭವು ಒಂದು ರೀತಿಯಲ್ಲಿ ಕುಟುಂಬವೊಂದರ ವ್ಯವಹಾರದಂತೆ ಅದರ ವ್ಯಕ್ತಿಯೊಬ್ಬರ ಪಟ್ಟಾಭಿಷೇಕದಂತಿತ್ತು. ಅದು ಪ್ರಜಾಪ್ರಭುತ್ವದ ಮಾದರಿಯಲ್ಲಿರಲಿಲ್ಲ. ಕೌಟುಂಬಿಕ ರಾಜಕಾರಣವನ್ನು ನಾವು ಬಿಜೆಪಿಯ ಕೋಮುವಾದಿ–ಅನೈತಿಕ ರಾಜಕಾರಣಕ್ಕೆ ಪ್ರತಿಯಾಗಿ ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆ. ಸಮ್ಮಿಶ್ರ ಸರ್ಕಾರವು ಕೌಟುಂಬಿಕ ರಾಜಕಾರಣವನ್ನು ಮೀರಬೇಕು. ಕೋಮುವಾದಿ ರಾಜಕಾರಣವನ್ನು ಸದೆಬಡಿಯಬೇಕು. ಎಚ್.ಡಿ. ಕುಮಾರಸ್ವಾಮಿ ಅವರು ಕುಟುಂಬ ರಾಜಕಾರಣವನ್ನು ಮೀರಿದ ಸರ್ಕಾರವನ್ನು ನೀಡಬೇಕು.

ಪ್ರೊ. ಟಿ.ಆರ್. ಚಂದ್ರಶೇಖರ

ಕರ್ನಾಟಕದಲ್ಲಿ ಮೇ 12 ರಂದು ನಡೆದ ಚುನಾವಣೆ ಮತ್ತು 15 ರಂದು ಪ್ರಕಟವಾದ ಚುನಾವಣೆ ಫಲಿತಾಂಶ ಹಾಗೂ ಅದರ ನಂತರ ನಡೆದ ರಾಜಕೀಯ ನಡೆಗಳು, ಒಬ್ಬ ಮುಖ್ಯಮಂತ್ರಿಯ ಪ್ರಮಾಣ ವಚನ, ಅವರ ರಾಜೀನಾಮೆ ಮತ್ತು ಈಗ ಸಮ್ಮಿಶ್ರ ಸರ್ಕಾರದ ರಚನೆ ಇವೆಲ್ಲ ರಾಷ್ಟ್ರೀಯ ಪಕ್ಷವೊಂದರ ನೈತಿಕ ದಿವಾಳಿತನವನ್ನು ಸ್ಪಷ್ಟವಾಗಿ ತೋರಿಸುತ್ತಿವೆ. ಚುನಾವಣೆಯ ಪ್ರಚಾರದ ನೇತೃತ್ವ ವಹಿಸಿದ್ದ ಮತ್ತು ಮುಂಚೂಣಿಯಲ್ಲಿ ನಿಂತು ಭಾಷಣಗಳ ಮೇಲೆ ಭಾಷಣ ಮಾಡಿದ ಮೋದಿ–ಶಹಾ ಜೋಡಿ ಫಲಿತಾಂಶ ಬಂದ ನಂತರ ಕರ್ನಾಟಕಕ್ಕೆ ಕಾಲಿಡಲಿಲ್ಲ. ಅವರಿಗೆ ತಮ್ಮ ನೇತೃತ್ವದಲ್ಲಿ ನಡೆದ ಚುನಾವಣೆಯ ಫಲಿತಾಂಶದ ಪರಿಣಾಮವು ವಿರುದ್ಧವಾದುದು ಇದಕ್ಕೆ ಕಾರಣವಿದ್ದಿರಬೇಕು. ಬಹುಮತವಿಲ್ಲದ ಒಂದು (104 ಸ್ಥಾನಗಳು) ರಾಷ್ಟ್ರೀಯ ಪಕ್ಷವು ಸರ್ಕಾರ ರಚಿಸುವುದಕ್ಕೆ ರಾಜ್ಯಪಾಲರ ಮೂಲಕ ಹೇಗೆ ನಡೆದುಕೊಂಡಿತು ಎಂಬುದು ವಿಶ್ಲೇಷಿಸಬೇಕಾದ ಸಂಗತಿಯಾಗಿದೆ. ಯಾವ ಆಧಾರದ ಮೇಲೆ 104 ಸ್ಥಾನವನ್ನು ಬಹುಮತವಾಗಿ 113ಕ್ಕೆ ಏರಿಸಿಕೊಳ್ಳುತ್ತದೆ ಎಂಬುದಕ್ಕೆ ಅದು ಸ್ಪಷ್ಟ ವಿವರಣೆಯನ್ನು ನೀಡಲಿಲ್ಲ. ಈ ಪಕ್ಷದ ರಾಷ್ಟ್ರೀಯ ವಕ್ತಾರರೊಬ್ಬರು ಈ ಪ್ರಶ್ನೆಯನ್ನು ಪತ್ರಕರ್ತರು ಕೇಳಿದಾಗ ಅವರು 'ಅಮಿತ್ ಸಹಾ ಇದ್ದಾರಲ್ಲ' ಎಂಬ ಮಾರ್ಮಿಕ ಉತ್ತರದ ಮೂಲಕ ಸತ್ಯವಾದ ಸಂಗತಿಯನ್ನು ಪ್ರಕಟಿಸಿದ್ದಾರೆ. ಇದರ ಅರ್ಥವನ್ನು ಬಿಡಿಸುವ ಅಗತ್ಯವಿಲ್ಲ. ಹಣ, ಜಾತಿ, ಒತ್ತಡ, ಬೆದರಿಕೆ ಮುಂತಾದವುಗಳನ್ನು ಬಳಸುವುದಕ್ಕೆ ಹಿಂಜರಿಕೆಯೇನು ಅದಕ್ಕಿರಲಿಲ್ಲ. ಒಟ್ಟಾರೆ ಬಿಜೆಪಿಗೆ ಕರ್ನಾಟಕದಲ್ಲಿ ಸರ್ಕಾರ ರಚಿಸುವುದು ಸಾಧ್ಯವಾಗಲಿಲ್ಲ ಮತ್ತು ಕರ್ನಾಕಸ್ಥರು ಇದರಿಂದ ನಿರುಮ್ಮಳಾದರು.



ಕೃಪೆ: ಪಿ. ಮಹಮ್ಮದ್, ವಿ.ಕ.

ಆದರೆ ಮತದಾರರಿಗೆ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳಿಂದಾಗಿ ಇಂದು ಬಾಣಲೆಯಿಂದ ಬೆಂಕಿಗೆ ಬಿದ್ದಂಥಾಗಿದೆ. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿರುವುದು ಸ್ವಾಗತಾರ್ಹವೇ. ಉಗ್ರ ಬಲಪಂಥೀಯ ಸರ್ಕಾರಕ್ಕಿಂತ ಇಂದು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೇಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಒಂದು ರೀತಿಯಲ್ಲಿ ಜನರಿಗೆ ಸಮಾಧಾನ ತಂದಿದೆ. ಮುಖ್ಯಮಂತ್ರಿಯಾಗಿ ಘೋಷಣೆಯಾದ ಮೇಲೆ ಕುಮಾರಸ್ವಾಮಿ ಅವರು ಎಷ್ಟೊಂದು ದೇವಾಲಯಗಳನ್ನು ಸಂದರ್ಶಿಸಿದರು, ಎಷ್ಟು ಯಾಗ, ಯಜ್ಞ,ಪೂಜೆ ಮಾಡಿದರು ಎಂಬುದು ಯಾವ ಬಗೆಯ ಸೂಚನೆಯನ್ನು ನೀಡುತ್ತಿದೆ? ಪ್ರಮಾಣ ವಚನ ಸಮಾರಂಭವು ಒಂದು ರೀತಿಯಲ್ಲಿ ಕುಟುಂಬವೊಂದರ ವ್ಯವಹಾರದಂತೆ ಅದರ ವ್ಯಕ್ತಿಯೊಬ್ಬರ ಪಟ್ಟಾಭಿಷೇಕದಂತಿತ್ತು. ಅದು ಪ್ರಜಾಪ್ರಭುತ್ವದ ಮಾದರಿಯಲ್ಲಿರಲಿಲ್ಲ. ಕೌಟುಂಬಿಕ ರಾಜಕಾರಣವನ್ನು ನಾವು ಬಿಜೆಪಿಯ ಕೋಮುವಾದಿ–ಅನೈತಿಕ ರಾಜಕಾರಣಕ್ಕೆ ಪ್ರತಿಯಾಗಿ ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದೇವೆ. ಇಲ್ಲಿ ಈಗ ಸಹಜವಾಗಿ ಸರ್ಕಾರ ರಚಿಸಿರುವ ಕ್ರಮವು ಅನೈತಿಕವಲ್ಲವೇ ಎಂಬ ಪ್ರಶ್ನೆಯನ್ನು ಯಾರೂ ಕೇಳಬಹುದು. ಇದೇ ಕುಮಾರಸ್ವಾಮಿ ಅವರು 2006–2008ರ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಯಾವ ಬಗೆಯ ಸರ್ಕಾರ ನೀಡಿದರು ಎಂಬುದ ನಮ್ಮ ಮುಂದಿದೆ. ಇವರ ಸರ್ಕಾರದ ಅವಧಿಯಲ್ಲಿ ಕೆ.ಪಿ.ಎಸ್.ಸಿ ಯಲ್ಲಿ ನಡೆದ ಅದ್ವಾನಗಳನ್ನು ಇಂದಿಗೂ ಸರಿಪಡಿಸಿಕೊಳ್ಳುವುದು ಸಾಧ್ಯವಾಗಿಲ್ಲ. ನೇಮಕಾತಿಗಳಲ್ಲಿ ಎಲ್ಲ ಬಗೆಯ ನಿಯಮಗಳ ಉಲ್ಲಂಘನೆ ನಡೆದು ಹೋಯಿತು.

ಜೆಡಿಎಸ್ ಪಕ್ಷ ಪ್ರತಿಪಾದಿಸುತ್ತಿರುವ ಅಭಿವೃದ್ಧಿ ಸಿದ್ಧಾಂತ ಯಾವುದು? ವಿವೇಚನಾರಹಿತವಾಗಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಏನೆಲ್ಲ ಆಶ್ವಾಸನೆಗಳನ್ನು ಅವರು ನೀಡಿದ್ದಾರೆ. ಅವುಗಳಲ್ಲಿ ಏನಾದರೂ ಒಂದು ತರ್ಕಬದ್ಧತೆ, ಹಣಕಾಸಿನ ಬಗ್ಗೆ ಯೋಜನೆ ಯಾವುದು ಇದ್ದಂತೆ ಕಂಡು ಬರಲಿಲ್ಲ. ತಮ್ಮ ಪ್ರಣಾಳಿಕೆಯ ತುಂಬಾ ಜೆಡಿಎಸ್ ಆಶ್ವಾಸನೆಗಳನ್ನು ನೀಡಿದೆ. ಆದರೆ ಅದಕ್ಕೆ ಅಗತ್ಯವಾದ ಸಂಪನ್ಮೂಲವನ್ನು ಹೇಗೆ ಸಂಗ್ರಹಿಸಿಕೊಳ್ಳಲಾಗುತ್ತದೆ ಎಂಬುದರ ಬಗ್ಗೆ ಪ್ರಣಾಳಿಕೆಯಲ್ಲಿ ಯಾವ ಸೂಚನೆಯೂ ಇಲ್ಲ. ಇದು ಎಲ್ಲ ಮೂರು ಪಕ್ಷಗಳ ಪ್ರಣಾಳಿಕೆಗಳಿಗೂ ಅನ್ವಯಿಸುತ್ತದೆ.

ಸಮ್ಮಿಶ್ರ ಸರ್ಕಾರದ ಬಿಕ್ಕಟ್ಟುಗಳು

ಪ್ರಾದೇಶಿಕ ಪಕ್ಷಗಳ ರಾಜಕಾರಣಕ್ಕೆ ಇಂದು ಅವಕಾಶ ಅಧಿಕವಾದಂತೆ ಕಾಣುತ್ತದೆ. ಇದು ಒಕ್ಕೂಟ ವ್ಯವಸ್ಥೆಯ ದೃಷ್ಟಿಯಿಂದ ಸ್ವಾಗತಾರ್ಹವೇ. ಪ್ರಾದೇಶಿಕ ಪಕ್ಷಗಳು ನಮ್ಮಲ್ಲಿ ಯಾವತ್ತೂ ರಾಷ್ಟ್ರೀಯ ಏಕತೆಗೆ, ಸಮಗ್ರತೆಗೆ ಅಪಾಯ ತಂದಿಲ್ಲ. ಅದು ಡಿ ಎಂ ಕೆ ಇರಬಹುದು, ಅಕಾಲಿದಳವಿರಬಹುದು, ಟಿ ಎಂ ಸಿ ಇರಬಹುದು–ಇವೆ ತಮ್ಮ ತಮ್ಮ ರಾಜ್ಯಗಳಲ್ಲಿ ಆಡಳಿತ ನೀಡಿವೆ. ಇಂದು ಕೇಂದ್ರದಲ್ಲಿ ಸರ್ಕಾರ ರಚಿಸಿರುವ ಪಕ್ಷವು ನಡೆದುಕೊಳ್ಳುತ್ತಿರುವ ರೀತಿಯು ಪ್ರಾದೇಶಿಕ ಪಕ್ಷಗಳ ಬೆಳವಣಿಗೆಗೆ ಫಲವತ್ತಾದ ಭೂಮಿಕೆಯನ್ನು ಒದಗಿಸುತ್ತಿದೆ. ಕೇಂದ್ರೀಕರಣದ ಕ್ರಮಗಳನ್ನು ಅದು ಒಂದಾದ ಮೇಲೆ ಒಂದರಂತೆ ಜಾರಿಗೊಳಿಸುತ್ತಿದೆ. ನೀಟ್ ಪರೀಕ್ಷೆಯು ಅಂಥಹ ಒಂದು ಕ್ರಮವಾಗಿದೆ. ಹದಿನೈದನೇಯ ಕೇಂದ್ರದ ಹಣಕಾಸು ಆಯೋಗಕ್ಕೆ ಅದು ವಹಿಸಿಕೊಟ್ಟಿರುವ ಪರಿಶೀಲನಾರ್ಹ ಅಂಶಗಳು ರಾಜ್ಯಗಳ ಹಣಕಾಸು ನಿರ್ವಹಣೆಯ ಅಧಿಕಾರವನ್ನು ಮೊಟಕುಗೊಳಿಸುವ ರೀತಿಯಲ್ಲಿವೆ ಎಂದು ದಕ್ಷಿಣ ಭಾರತದ ರಾಜ್ಯಗಳು ಟೀಕಿಸುತ್ತಿವೆ. ಹಿಂದಿ ಭಾಷೆಯನ್ನು ವ್ಯವಸ್ಥಿತವಾಗಿ ರಾಜ್ಯಗಳ ಮೇಲೆ ಹೇರಲಾಗುತ್ತಿದೆ. ದೇಶಿಭಾಷೆಗಳ ಬೆಳವಣಿಗೆಗೆ ಅದು ಪ್ರೋತ್ಸಾಹ ನೀಡುತ್ತಿಲ್ಲ. ಸಂಸ್ಕೃತ ಭಾಷೆಯ ಅಭಿವೃದ್ಧಿಗೆ ಸಾವಿರಾರು ಕೋಟಿ ಹಣ ವಿನಿಯೋಗಿಸುತ್ತಿದೆ. ಇಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಸಂಸ್ಕೃತವು ನಮ್ಮಲ್ಲಿ ಶೇ. 1 ರಷ್ಟು ಜನರೂ ಮಾತನಾಡುತ್ತಿಲ್ಲ. 'ಒಂದು ಭಾಷೆ, ಒಂದು ಪಕ್ಷ, ಒಂದು ದೇಶ' ಅನ್ನುವ ಅದರ ಧೋರಣೆಯು ರಾಷ್ಟ್ರೀಯ ಏಕತೆಗೆ ದಕ್ಕೆ ಉಂಟು ಮಾಡುತ್ತಿದೆ. ಅದು ಬಡತನ ಮುಕ್ತ ಭಾತರದ ಬಗ್ಗೆ, ಹಸಿವು ಮುಕ್ತ ಭಾರತದ ಬಗ್ಗೆ, ಅಸಮಾನತೆ ಮುಕ್ತ ಭಾರತದ ಬಗ್ಗೆ ಮಾತನಾಡುವುದಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳನ್ನು ನಾಶ ಮಾಡುವ ದಿಶೆಯಲ್ಲಿ ಕೆಲಸ ಮಾಡುತ್ತಿದೆ.

ಕರ್ನಾಟಕದಲ್ಲಿ ಅದು ಯಾವ ಸಂಕೋಚವೂ ಇಲ್ಲದೆ ರಾಜ್ಯಪಾಲರನ್ನು ದುರುಪಯೋಗಪಡಿಸಿಕೊಂಡಿತು. ಐದು ವರ್ಷಗಳ ಕಾಲ (2013–2018) ಎಲ್ಲ ಇತಿಮಿತಿಗಳ ನಡುವೆ ಸಿದ್ದರಾಮಯ್ಯ ಅವರು ಜನಪರ ಸರ್ಕಾರವನ್ನು ನೀಡಿದರು. ಅವರ ಐದು ವರ್ಷಗಳ ಆಡಳಿತವನ್ನು 2008 ರಿಂದ 2013ರ ವರೆಗಿನ ಬಿ ಜೆ ಪಿ ಪಕ್ಷದ ಆಡಳಿತವನ್ನು ತುಲನೆ ಮಾಡಿದರೆ ನಮಗೆ ಸಿದ್ದರಾಮಯ್ಯ ಅವರ ಸರ್ಕಾರದ ಕೊಡುಗೆ ಅರ್ಥವಾದೀತು. ಅಂತಹ ಸಿದ್ದರಾಮಯ್ಯ ಅವರ ಮೇಲೆ ಮೋದಿ–ಶಹಾ ಇಲ್ಲದ ಸಲ್ಲದ ಗೂಬೆ ಕೂರಿಸುವ ಕೆಲಸವನ್ನು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನಡೆಸಿದರು.

ಈ ಬಗೆಯ ಅನೈತಿಕ ರಾಜಕಾರಣದ ವಿರುದ್ಧ ರಾಷ್ಟ್ರೀಯ ಮಟ್ಟದಲ್ಲಿ ಜನರ ಸಂಘಟನೆ ನಡೆಯುತ್ತಿದೆ. ಆದರೆ ಕೌಟುಂಬಿಕ ರಾಜಕಾರಣ ಇದಕ್ಕೆ ಪ್ರತಿಯಾಗಬಾರದು. ಸಮ್ಮಿಶ್ರ ಸರ್ಕಾರವು ಕೌಟುಂಬಿಕ ರಾಜಕಾರಣವನ್ನು ಮೀರಬೇಕು. ಕೋಮುವಾದಿ ರಾಜಕಾರಣವನ್ನು ಸದೆಬಡಿಯಬೇಕು. ಎಚ್. ಡಿ. ಕುಮಾರಸ್ವಾಮಿ ಅವರು ಕುಟುಂಬ ರಾಜಕಾರಣವನ್ನು ಮೀರಿದ ಸರ್ಕಾರವನ್ನು ನೀಡಬೇಕು.

ಬಿಜೆಪಿ ಯನ್ನು 2019ರಲ್ಲಿ ಎದುರಿಸಲು ನಮಗಿರುವ ಏಕೈಕ ಮಾರ್ಗವೆಂದರೆ ವಿರೋಧ ಪಕ್ಷಗಲು ಒಂದಾಗಿ ಚುನಾವಣೆಯನ್ನು ಎದುರಿಸುವುದು. ಕಮ್ಯೂನಿಷ್ಟ ಮಾಕ್ಸಿಸ್ಟ್ ಪಕ್ಷದ ಸೀತಾರಾಮ್ ಯಚೂರಿ ಅವರು ತೆಗೆದುಕೊಂಡಿರುವ ನಿಲುವು ಅತ್ಯಂತ ಸೂಕ್ತವಾದುದಾಗಿದೆ. ಈ ಪಕ್ಷಗಳು ಒಂದಾಗದಿದ್ದರೆ ಬಿಜೆಪಿ ವಿರೋಧಿ ಮತಗಳೆಲ್ಲ ಹರಿದು ಹಂಚಿ ಹೋಗಿ ಅದು ಅಧಿಕಾರಕ್ಕೆ ಬರುವುದು ಸುಲಭವಾಗುತ್ತದೆ. ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ಪ್ರಯೋಗ ಅಧ್ಯಯನಯೋಗ್ಯವಾಗಿದೆ. ಅದು ಸೂಕ್ತ ರೀತಿಯಲ್ಲಿ ಬಿಜೆಪಿ ಯ ಅನೈತಿಕ ರಾಜಕಾರಣವನ್ನು ತಡೆಗಟ್ಟಿತು. ಇದೇ ರೀರಿಯಲ್ಲಿ 2019ರ ಚುನಾವಣೆಯಲ್ಲಿ ಬಿಜೆಪಿ ವಿರುದ್ಧದ ಮತಗಳು ಒಡೆದು ಹರಿದು ಹಂಚಿ ಹೋಗದಂತೆ ಮಾಡಲು ಪ್ರಾದೇಶಿಕ ಪಕ್ಷಗಳ ಸಂಘಟನೆ ಅಗತ್ಯವಾಗಿದೆ. ಇಂದು ನಾವು ಹೋರಾಟ ಮಾಡಬೇಕಾಗಿರುವುದು ಕೋಮುವಾದಿ ರಾಜಕಾರಣದ ತಾಯಿಯಂತಿರುವ ಆರ್ಎಸ್ಎಸ್ ವಿರುದ್ಧವೇ ವಿನಾ ಅದರ ಮುಖವಾಡವಾದ ಬಿಜೆಪಿ ವಿರುದ್ಧವಲ್ಲ. ರಾಷ್ಟ್ರಮಟ್ಟದಲ್ಲಿ ಎಲ್ಲ ರಾಜಕೀಯ, ಆರ್ಥಿಕ, ಸಾಮಾಜಿಕ ಸಂಸ್ಥೆಗಳೆಲ್ಲವುಗಳ ಕೋಮುವಾದೀಕರಣಕ್ಕೆ ಆರ್ಎಸ್ಎಸ್ ಮುಂದಾಗಿದೆ. ಸಂವಿಧಾನವನ್ನು ಬದಲಾಯಿಸುವುದೇ ನಮ್ಮ ಅಜೆಂಡ ಎಂದು ರಾಜರೋಷವಾಗಿ ಹೇಳುತ್ತಿದೆ. ಮೀಸಲಾತಿ ವಿರುದ್ಧ ಪ್ರಚ್ಛನ್ನವಾಗಿ ಪ್ರಚಾರ ನಡೆಸುತ್ತಿದೆ. ಮುಗ್ಧ ದಲಿತರನ್ನು ಬಳಸಿಕೊಳ್ಳುತ್ತಿದೆ.

ಕರ್ನಾಟಕದ ಪ್ರಯೋಗದಿಂದ ನಾವು ಪಾಠ ಕಲಿಯಬೇಕಾಗಿದೆ. ಆದರೆ ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಆಂತರಿಕ ಕಿತ್ತಾಟ ಮುಂತಾದವುಗಳನ್ನು ಮೀರದಿದ್ದರೆ ಕರ್ನಾಟಕ ಪ್ರಯೋಗ ಯಶಸ್ವಿಯಾಗುವುದು ಸಾಧ್ಯವಿಲ್ಲ. ನಾವು ಇದರಿಂದ 2019ರಲ್ಲಿ ಹೇಗೆ ಬಿಜೆಪಿ ಯನ್ನು ಎದುರಿಸಬೇಕು ಎಂಬುದಕ್ಕೆ ತಕ್ಕ ಪಾಠ ಕರ್ನಾಟಕ ಪ್ರಯೋಗದಲ್ಲಿದೆ. ●

ನಂತೂರಿನ ನಿರ್ವಸಿತ ಕೊರಗರಿಗೆ ಮನೆಗಳು....... ಪುಟ 4 ರಿಂದ

ತಿಮ್ಮಯ್ಯ ಕೊಂಚಾಡಿಯವರು ಇಡೀ ಕಾಮಗಾರಿಯ ಉಸ್ತುವಾರಿ ನೋಡಿಕೊಂಡರು. ನಿವೇಶನ ರಹಿತ ಕೊರಗರ ಹೋರಾಟಕ್ಕೆ ಆರಂಭದಿಂದಲೂ ವಸಂತ ಆಚಾರಿ ನೇತೃತ್ವದಲ್ಲಿ ಸಿಪಿಐ(ಎಂ), ಕೃಷ್ಣಪ್ಪ ಕೊಂಚಾಡಿ ನೇತೃತ್ವದಲ್ಲಿ ಆದಿವಾಸಿ ಹಕ್ಕುಗಳ ಸಮಿತಿ ಹಾಗೂ ಲಿಂಗಪ್ಪ ನಂತೂರು ನೇತೃತ್ವದಲ್ಲಿ ದಲಿತ ಹಕ್ಕುಗಳ ಸಮಿತಿ ಮಾರ್ಗದರ್ಶನ ನೀಡಿತ್ತು.

8 ಕೊರಗ ಕುಟುಂಬಗಳವರೂ ಆದಿತ್ಯವಾರದ ದಿನಗಳಲ್ಲಿ ಕೆಲವೊಮ್ಮೆ ವಾರದ ದಿನಗಳಲ್ಲೂ ತಮ್ಮ ಪಾಲಿನ ಶ್ರಮದಾನ ಮಾಡಿದರು. ತಮ್ಮದೇ ಮನೆಗಳ ರಚನಾ ವಿನ್ಯಾಸ ಸ್ವಲ್ಪ ಬದಲಿಸಿಕೊಂಡರು. ತಮ್ಮ ಪಾಲಿನ ಹಣದ ಕೊಡುಗೆಯನ್ನು ನೀಡಿದರು. ಇದೆಲ್ಲದರ ಪರಿಣಾಮವೇ ಮೊನ್ನೆ ಮೇ 12ರಂದು ಉದ್ಘಾಟನೆಗೊಂಡಿರುವ 8 ಸುಂದರ ಮನೆಗಳು. ಮನೆ ಒಕ್ಕಲಿನ ಸಂಭ್ರಮ – ಹೊರ ಜಿಲ್ಲೆಗಳಿಂದಲೂ ಆದಿವಾಸಿಗಳ ಆಗಮನ.

ಮನೆ ಒಕ್ಕಲಿನ ಸಂಭ್ರಮ
– ಹೊರ ಜಿಲ್ಲೆಗಳಿಂದಲೂ ಆದಿವಾಸಿಗಳ ಆಗಮನ

ನಿರ್ವಸಿತ 8 ಕೊರಗ ಕುಟುಂಬದವರಿಗೆ ಮಾತ್ರವಲ್ಲ, ನಿರ್ವಸಿತರ ಪುನರ್ವಸತಿ ಹೋರಾಟದಲ್ಲಿ ಭಾಗವಹಿಸಿದ ಸಮಿತಿ ಕಾರ್ಯಕರ್ತರೂ ಹಿತೈಷಿಗಳಿಗೂ ಮೇ 20 ಸಂಭ್ರಮದ ದಿನ. ಕೋಟಿಮುರದ ಹೊಸ ಮನೆಗಳ ಎದುರುಗಡೆ ವಿಶಾಲ ಶಾಮಿಯಾನ ಹಾಕಲಾಗಿತ್ತು. ಎಲ್ಲ ಮನೆಗಳವರೂ ಬೆಳಗ್ಗೆನೇ ತಮ್ಮ ತಮ್ಮ ಮನೆಗಳಲ್ಲಿ ಹಾಲು ಕುದಿಸಿ ಒಕ್ಕೇಲು ಕಾರ್ಯಕ್ರಮ ನಡೆಸಿದ್ದರು. ಬಂದವರೆಲ್ಲರಿಗೂ ಎಲ್ಲರೂ ಮನೆಗಳಲ್ಲಿ ಹಾಲು ನೀಡುವವರೇ.

ವಿಧಾನ ಪರಿಷತ್ತಿನ ಚುನಾವಣೆ ನಡೆಯಲಿದ್ದು, ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಮಂಗಳೂರು ಮೇಯರ್, ಜಿಲ್ಲಾಧಿಕಾರಿ ಹಾಗೂ ಆದಿವಾಸಿ ಅಧಿಕಾರ ಮಂಚ್‌ನ ರಾಷ್ಟ್ರೀಯ ಸಂಚಾಲಕರಾಗಿರುವ ಸಂಸದ ಜಿತೇಂದ್ರ ಚೌಧುರಿ ಭಾಗವಹಿಸಿರಲಿಲ್ಲ. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಗೃಹ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿದರು. ಅತಿಥಿಗಳು ಒಬ್ಬೊಬ್ಬರು ಒಂದೊಂದು ಮನೆಯವರಿಗೆ ಮನೆಯ ಕೀಲಿಕೈ ಹಸ್ತಾಂತರಿಸಿದರು. ಡಾ.ಕೃಷ್ಣಪ್ಪ ಕೊಂಚಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದಾನಿಗಳಾದ ರಾಯ್ ಕ್ಯಾಸ್ಟಲಿನೋ, ದಲಿತ ಚಿಂತಕ ಸೀತಾರಾಮ ಎಸ್, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಹಸಂಚಾಲಕರಾದ ಎಸ್.ವೈ.ಗುರುಶಾಂತ್, ಸಂಚಾಲಕರಾದ ವೈ. ಕೆ.ಗಣೇಶ್, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಸಮುದಾಯದ ವಾಸುದೇವ ಉಚ್ಚಿಲ, ದಲಿತ ಹಕ್ಕುಗಳ ಸಮಿತಿ ಜಿಲ್ಲಾಧ್ಯಕ್ಷರಾದ ತಿಮ್ಮಯ್ಯ ಕೊಂಚಾಡಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮಂಗಳೂರು ಸಹಸಂಚಾಲಕರಾದ ಶಶಿಕಲಾ ನಂತೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಚಾಲಕರಾದ ಜಯಕುಮಾರ್ ಸ್ವಾಗತಿಸಿದರು. ಆದಿವಾಸಿ ಮನೆ ನಿರ್ಮಾಣ ಸಮಿತಿ ಖಜಾಂಚಿ ಯೋಗೀಶ್ ಜಪ್ಪಿನಮೊಗರು ಪ್ರಸ್ತಾವನೆ ಮಾಡಿದರು.

ಹಲವು ಆದಿವಾಸಿ ಬಣಗಳ 54 ಮಂದಿ ಸದಸ್ಯರು ಕೊಡಗಿನಿಂದ ಬಸ್ಸು ಮಾಡಿಕೊಂಡು ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸಭಾ ಸಮಾರಂಭದ ಬಳಿಕ ಮನೆ ಒಕ್ಕಲಿನ ಔತಣದಲ್ಲಿ ಬಂದವರು ಸಂಭ್ರಮದಿಂದ ಭಾಗವಹಿಸಿದರು. ●



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಕರ್ನಾಟಕ ಚುನಾವಣೆಯ ನಂತರ 2019ರ ಸಾರ್ವತ್ರಿಕ ಚುನಾವಣೆಯತ್ತ

ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಚುನಾವಣಾ ನಂತರದ ಮೈತ್ರಿ ಕರ್ನಾಟಕದಲ್ಲಿ ಬಿಜೆಪಿಯನ್ನು ತಡೆಯುವಲ್ಲಿ ಯಶಸ್ವಿಯಾಗುವುದರೊಂದಿಗೆ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಪ್ರತಿಪಕ್ಷಗಳು ಐಕ್ಯತೆಯಿಂದ ಎದುರಿಸುವ ಮಾತುಗಳು ಮತ್ತೆ ಕೇಳಬರಲಾರಂಭಿಸಿದೆ. ಆದ್ದರಿಂದ ಈಗಿನ ಸನ್ನಿವೇಶವನ್ನು ವಿಮರ್ಶಿಸುವುದು ಮತ್ತು ಬಿಜೆಪಿ-ಅರೆಸ್ಸೆಸ್ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದೊಯ್ಯಬಹುದಾದ ರೀತಿಯ ಬಗ್ಗೆ ಒಂದು ಸುಸ್ಪಷ್ಟ ಕಣ್ಣೋಟವನ್ನು ಹೊಂದಿರುವುದು ಅಗತ್ಯವಾಗಿದೆ.



ಪ್ರಕಾಶ ಕಾರಟ್

ಮೋದಿ ಸರಕಾರ ತನ್ನ ಅಧಿಕಾರದ ನಾಲ್ಕನೇ ವರ್ಷವನ್ನು ಕರ್ನಾಟಕದಲ್ಲಿ ಅನುಭವಿಸಿದ ಪರಾಭವದ ನೆರಳಲ್ಲಿ ಪೂರ್ಣಗೊಳಿಸುತ್ತಿದೆ. ಇದು ಈ ನಾಲ್ಕನೇ ವಾರ್ಷಿಕೋತ್ಸವಕ್ಕೆ ತನ್ನದೇ ಅದ ರಾಜಕೀಯ ಮಹತ್ವವನ್ನು ತುಂಬಿಕೊಂಡಿದೆ.

ಬಿಜೆಪಿಯ ಮತ್ತು ಅದರ ಉನ್ನತ ಮುಖಂಡರಾದ ನರೇಂದ್ರ ಮೋದಿ ಮತ್ತು ಅಮಿತ್ ಷಾ ಪ್ರತಿಷ್ಠೆಗೆ ಕರ್ನಾಟಕದಲ್ಲಿ ಅವರು ಸರಕಾರ ರಚಿಸಲು ಪ್ರಯತ್ನಿಸಿದ ರೀತಿ, ರಾಜ್ಯಪಾಲರನ್ನು ಚಿತಾಯಿಸಿದ್ದು, ಹಾಗೂ ಕಾಂಗ್ರೆಸ್ ಮತ್ತು ಜನತಾದಳ(ಜಾತ್ಯತೀತ)ದಿಂದ ಶಾಸಕರನ್ನು ಪಕ್ಷಾಂತರ ಮಾಡಿಸಿ ಸೆಳೆದುಕೊಳ್ಳಲು ಅನೀತಿಯುತ ವಿಧಾನಗಳನ್ನು ಅನುಸರಿಸಿದ್ದು ಇವೆಲ್ಲವುಗಳಿಂದಾಗಿ ಅತೀವ ಕುಂದು ಬಂದಿದೆ. ಸುಪ್ರಿಂ ಕೋರ್ಟ್‌ನಿಂದ ಸರಿಯಾದ ಸಮಯದಲ್ಲಿ ಮಧ್ಯಪ್ರವೇಶ ಮತ್ತು ಪ್ರತಿಪಕ್ಷಗಳ ಐಕ್ಯ ನಿರ್ಧಾರ ಈ ನಡೆಗಳಿಗೆ ತಡೆ ಹಾಕಿದವು.

ಮೋದಿ-ಷಾ ಜೋಡಿ ತಮ್ಮ ಸಂಪೂರ್ಣ ಪಾರಮ್ಯವನ್ನು ಸ್ಥಾಪಿಸುವ ಭರದಲ್ಲಿ ಹೇಗೆ ಎಲ್ಲ ಸಂಸ್ಥೆಗಳನ್ನೂ ಬುಡಮೇಲು ಮಾಡಲು ಹಿಂದೆ-ಮುಂದೆ ನೋಡುವುದಿಲ್ಲ ಎಂಬುದರ ಒಂದು ಪ್ರತ್ಯಕ್ಷ ಪಾಟ ಇಡೀ ದೇಶಕ್ಕೆ ದೊರಕಿದೆ. ಜನಗಳು ಈಗ ನ್ಯಾಯಾಂಗದ ಸ್ವತಂತ್ರತೆಯನ್ನು ಶಿಥಿಲಗೊಳಿಸುವ ಲೆಕ್ಕಾಚಾರದಿಂದ ನಡೆಸಿರುವ ಪ್ರಯತ್ನಗಳನ್ನೂ ಅರ್ಥಮಾಡಿಕೊಳ್ಳಬಲ್ಲರು. ವ್ಯಂಗ್ಯದ ಸಂಗತಿಯೆಂದರೆ, ನ್ಯಾಯಮೂರ್ತಿ ಕೆ.ಎಂ.ಜೋಸೆಫ್‌ರವರನ್ನು ಸುಪ್ರಿಂ ಕೋರ್ಟಿಗೆ ನೇಮಿಸುವುದನ್ನು ತಡೆಯುವ ಮೋದಿ ಸರಕಾರದ ಪ್ರಯುತ್ನಗಳು ಉತ್ತರಾಖಂಡದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ನಿರ್ಧಾರವನ್ನು ರದ್ದುಗೊಳಿಸಿದ ಅವರ ಉತ್ತರಾಖಂಡ ಹೈಕೋರ್ಟಿನ ತೀರ್ಪಿನಿಂದ ಹೊಮ್ಮಿದ್ದು.

ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಚುನಾವಣಾ ನಂತರದ ಮೈತ್ರಿ ಕರ್ನಾಟಕದಲ್ಲಿ ಬಿಜೆಪಿಯನ್ನು ತಡೆಯುವಲ್ಲಿ ಯಶಸ್ವಿಯಾಗುವುದರೊಂದಿಗೆ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಪ್ರತಿಪಕ್ಷಗಳು ಐಕ್ಯತೆಯಿಂದ ಎದುರಿಸುವ ಮಾತುಗಳು ಮತ್ತೆ ಕೇಳಬರಲಾರಂಭಿಸಿದೆ. ಆದ್ದರಿಂದ ಈಗಿನ ಸನ್ನಿವೇಶವನ್ನು ವಿಮರ್ಶಿಸುವುದು ಮತ್ತು ಬಿಜೆಪಿ-ಅರೆಸ್ಸೆಸ್ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದೊಯ್ಯಬಹುದಾದ ರೀತಿಯ ಬಗ್ಗೆ ಒಂದು ಸುಸ್ಪಷ್ಟ ಕಣ್ಣೋಟವನ್ನು ಹೊಂದಿರುವುದು ಅಗತ್ಯವಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ರಾಷ್ಟ್ರಮಟ್ಟದಲ್ಲಿ ಪ್ರಾಬಲ್ಯ ಹೊಂದಿದ ರಾಜಕೀಯ ಪಕ್ಷವಾಗಿ ಮೂಡಿ ಬಂದಿದೆ ಎಂಬುದು ನಿಜ. ಈ ಅವಧಿಯಲ್ಲಿ ನಡೆದ ಹೆಚ್ಚಿನ ವಿಧಾನಸಭಾ ಚುನಾವಣೆಗಳಲ್ಲಿ ಅದು ಚುನಾವಣಾ ಯಶಸ್ಸುಗಳನ್ನು ದಾಖಲಿಸಿದೆ. ಅದೇ ರೀತಿಯಲ್ಲಿ 2017ರಲ್ಲಿ ನಡೆದ ಗುಜರಾತ್ ವಿಧಾನಸಭಾ ಚುನಾವಣೆಗಳು ಮತ್ತು ಈಗ ಕರ್ನಾಟಕ ವಿಧಾನಸಭಾ ಚುನಾವಣೆಗಳು ಅದರ ದೌರ್ಬಲ್ಯಗಳನ್ನು, ಯಾವುದಕ್ಕೆ ಅದು ಪಕ್ಕಾಗುತ್ತದೆ ಎಂಬುದನ್ನು ಕೂಡ ತೋರಿಸಿಕೊಟ್ಟಿವೆ.

ಗುಜರಾತಿನ ಸಂದರ್ಭದಲ್ಲಿ ಅದಕ್ಕೆ ತಾನು ಈಹಿಂದೆ ಗೆದ್ದಿದ್ದ 115 ಸ್ಥಾನಗಳ ಬದಲು ಕೇವಲ 99ನ್ನು ಮಾತ್ರ ಪಡೆಯಲು ಸಾಧ್ಯವಾಯಿತು. ಕರ್ನಾಟಕದಲ್ಲಿ ಅದು ಸೀಟುಗಳ ಪ್ರಮಾಣದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದರೂ ಅದರ 36.2% ಮತಗಳಿಕೆ, ಕಾಂಗ್ರೆಸಿನ 38% ಮತಗಳಿಕೆಗಿಂತ ಕಡಿಮೆ ಇದೆ.

ಆದರೂ, ಬಿಜೆಪಿಯ ದೇಶವ್ಯಾಪಿ ಶಕ್ತಿಯನ್ನು ಕೀಳಂದಾಜು ಮಾಡುವುದು ಮತ್ತು ಅದನ್ನು ಸೋಲಿಸಲು ಚುನಾವಣಾ ತಂತ್ರಗಳಷ್ಟೇ ಸಾಕು ಎಂದು ಯೋಚಿಸುವುದು ತಪ್ಪಾಗುತ್ತದೆ. ಈಗಿನ ಸಂದರ್ಭದಲ್ಲಿ, ವಿಶೇಷವಾಗಿ ಜನಗಳ ಪರಿಸ್ಥಿತಿಗಳು ಹದಗೆಡುತ್ತಿದ್ದು, ಅವರ ಜೀವನೋಪಾಯಗಳಿಗೆ ಬೆದರಿಕೆಗಳು ಬರುತ್ತಿರುವುದರಿಂದ ‘ಬಿಜೆಪಿ ಆಳ್ವಿಕೆಯ ವಿರುದ್ಧ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಒಟ್ಟುಗೂಡಿಸುವುದು ಮುಖ್ಯ ಕೊಂಡಿಯಾಗುತ್ತದೆ.

ಬಿಜೆಪಿಯ ನಾಲ್ಕು ವರ್ಷಗಳ ಆಳ್ವಿಕೆಯ ನಂತರ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ಬೆಳೆಗಳಿಗೆ ಬೆಲೆಗಳು ಬಿದ್ದು ಹೋಗುತ್ತಿರುವುದು ಮತ್ತು ಹೆಚ್ಚುತ್ತಿರುವ ಸಾಲಹೊರೆಗಳಿಂದ ರೈತರ ಸಂಕಟಗಳು ಹೆಚ್ಚಿವೆ; ಕೃಷಿ ಕೂಲಿಕಾರರ ನಿಜಕೂಲಿಗಳು ಕೆಳಗಿಳಿಯುತ್ತಿವೆ; ಕೈಗಾರಿಕಾ ಉತ್ಪಾದನೆಯ ದರ ಇಳಿಯುತ್ತಲೇ ಇದೆ; ಉದ್ಯೋಗದ ನಿರೀಕ್ಷೆಗಳು ಕುಂಠಿತಗೊಳ್ಳುತ್ತಿವೆ, ಇವೆಲ್ಲರ ಮೇಲೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ತೀವ್ರವಾಗಿ ಏರುತ್ತಿವೆ, ಅದರಿಂದಾಗಿ, ಎಲ್ಲ ಸರಕುಗಳ ಬೆಲೆಗಳು ಏರುತ್ತಿವೆ.

ಇಂತಹ ಒಂದು ಸಮಯದಲ್ಲಿ, ಮೋದಿ ಸರಕಾರ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ತೀವ್ರವಾಗಿ ಕಡಿತ ಮಾಡಿದೆ. ಮತ್ತು ಆರೋಗ್ಯ ಹಾಗೂ ಸಾಮಾಜಿಕ ವಲಯಗಳಿಗೆ ಹಣನೀಡಿಕೆಯಲ್ಲೂ ತೀವ್ರ ಕಡಿತ ಮಾಡಿದೆ. ಆದ್ದರಿಂದ ವಿವಿಧ ಜನವಿಭಾಗಗಳ, ಕಾರ್ಮಿಕರು, ರೈತರು, ಕೃಷಿಕೂಲಿಕಾರರು, ದಲಿತರು, ಆದಿವಾಸಿಗಳು, ಮಹಿಳೆಯರು, ಯುವಜನ, ವಿದ್ಯಾರ್ಥಿಗಳು ಈ ಎಲ್ಲ ವಿಭಾಗಗಳ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಸನ್ನಿವೇಶ ಪಕ್ವವಾಗಿದೆ. ಬಿಜೆಪಿ ಕಲೆಹಾಕಿದ ಬೆಂಬಲವನ್ನು ಒಳಗಿಂದಲೇ ಕೊರೆದು ಹಾಕುತ್ತಿರುವುದು ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳೆದಿರುವ ಹೋರಾಟಗಳು.

ಸಿಪಿಐ(ಎಂ) ಮತ್ತು ಎಡಶಕ್ತಿಗಳು ಪ್ರಚಾರ, ಆಂದೋಲನಗಳನ್ನು ಹೆಚ್ಚಿಸುತ್ತಿವೆ. ಹತ್ತಾರು ಸಾಮೂಹಿಕ ಸಂಘಟನೆಗಳು ಮತ್ತು ಸಾಮಾಜಿಕ ಆಂದೋಲನಗಳ ವೇದಿಕೆಯಾದ ಜನ ಏಕತಾ ಜನ ಅಧಿಕಾರ್ ಆಂದೋಲನ ಸರಕಾರ ನಾಲ್ಕು ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಪ್ರತಿಭಟನಾ ದಿನಾಚರಣೆಗೆ ಕರೆ ನೀಡಿದೆ. ರೈತರು ಮತ್ತು ಕಾರ್ಮಿಕರ ಸಂಘಟನೆಗಳು ಸಂಘಟಿಸುತ್ತಿರುವ ಹೋರಾಟ ಸಪ್ಟಂಬರ್ 5ರಂದು ದಿಲ್ಲಿಯಲ್ಲಿ ಸಮಾರೋಪಗೊಳ್ಳುತ್ತಿದೆ.

ಮುಂಬರುವ ಅವಧಿಯಲ್ಲಿ ದುಡಿಯುವ ಜನಗಳ ಬಲಿಷ್ಟ ಐಕ್ಯ ಕಾರ್ಯಾಚರಣೆಗಳು ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಐಕ್ಯ ಅಣಿನೆರಿಕೆಗಳು ಕಂಡು ಬರಬೇಕು. ಇಂತಹ ಐಕ್ಯ ಹೋರಾಟಗಳು ಮತ್ತು ಚಳುವಳಿಗಳು ಜನಗಳಲ್ಲಿನ ಅಸಂತೃಪ್ತಿಯನ್ನು ಕ್ರೋಡೀಕರಿಸಿ ಅವನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ಕಾರ್ಯಕ್ರಮದತ್ತ ತಿರುಗಿಸಲು ಶಕ್ತವಾಗಬೇಕು.

ನಾವು ಈ ಪ್ರಯತ್ನದಲ್ಲಿ ಯಶಸ್ವಿಯಾದರೆ, ಲೋಕಸಭಾ ಚುನಾವಣೆಗಳಲ್ಲಿ ಪ್ರತಿಯೊಂದು ರಾಜ್ಯದಲ್ಲಿ ಗರಿಷ್ಟ ಬಿಜೆಪಿ-ವಿರೋಧಿ ಮತಗಳನ್ನು ಕಲೆಹಾಕಲು ನೆರವಾಗಬಹುದಾದ ಚುನಾವಣಾ ತಂತ್ರಗಳನ್ನು ರೂಪಿಸಲು ರಂಗ ಸಜ್ಜಾಗುತ್ತದೆ.



ಐಕ್ಯ ಹೋರಾಟಗಳು ಮತ್ತು ಚಳುವಳಗಳು ಜನಗಳಲ್ಲಿನ ಅಸಂತೃಪ್ತಿಯನ್ನು ಕ್ರೋಡೀಕರಿಸಿ ಅವನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ಕಾರ್ಯಕ್ರಮದತ್ತ ತಿರುಗಿಸಲು ಶಕ್ತವಾಗಬೇಕು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ

ಪುಟ 2 ರಿಂದ

ಅಡಿಯಲ್ಲಿ, ಪಶ್ಚಿಮ ಬಂಗಾಲದಲ್ಲಿ ಆಳುವ ಪಕ್ಷ, ರಾಜ್ಯ ಆಡಳಿತ ಮತ್ತು ರಾಜ್ಯ ಚುನಾವಣಾ ಆಯೋಗದ ನಡುವೆ ಇರುವ ವ್ಯತ್ಯಾಸಗಳನ್ನೆಲ್ಲ ಸಂಪೂರ್ಣ ಅಳಿಸಿ ಹಾಕಿ, ಆಮೂಲಕ ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ನಾಶ ಮಾಡಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ಅಸ್ಸಾಂ-ಈಶಾನ್ಯದಲ್ಲಿ ಅಸಂವಿಧಾನಿಕ ಕೃತ್ಯ

ಅಸ್ಸಾಂ ಮತ್ತು ದೇಶದ ಇತರ ಈಶಾನ್ಯ ಪ್ರದೇಶದಲ್ಲಿನ ಬೆಳವಣಿಗೆಗಳ ಬಗ್ಗೆ ಪೊಲಿಟ್‌ಬ್ಯುರೊ ಗಂಭಿರ ಆತಂಕವನ್ನು ವ್ಯಕ್ತಪಡಿಸಿದೆ. ಅಪಾರ ವೈವಿಧ್ಯತೆಗಳ ಈ ಪ್ರದೇಶದಲ್ಲಿ ಜನಗಳ ನಡುವಿನ ಸೂಕ್ಷ್ಮ ಐಕ್ಯತೆಯ ಮೇಲೆ ಓಂದು ಅಧಿಕ ಹೊಡೆತ ಬಂದಿದೆ. ಇದಕ್ಕೆ ಕಾರಣ ನಾಗರಿಕತ್ವ ಕಾಯ್ದೆಯನ್ನು ಧಾರ್ಮಿಕ ಸಾಮೀಪ್ಯದ ಆಧಾರದಲ್ಲಿ ತಿದ್ದುಪಡಿ ಮಾಡುವ ಕೇಂದ್ರ ಸರಕಾರದ ಪ್ರಯತ್ನಗಳು. ನಾಗರಿಕರ ರಾಷ್ಟ್ರೀಯ ದಾಖಲೆ(ಎನ್‌ಆರ್ಸಿ)ಯನ್ನು ಮತ್ತು ಸಂದೇಹಾಸ್ಪದ ಮತದಾರರ ವಿಧವನ್ನು ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಅಸಂಪೂರ್ಣ ಮತ್ತು ಉದ್ದೇಪೂರ್ವಕವಾದ ಪಕ್ಷಪಾತದಿಂದಾಗಿ ಭಾಷಾ ಅಲ್ಪಸಂಖ್ಯಾತರ ಮೇಲೆ ತೀವ್ರ ಒತ್ತಡ ಬಿದ್ದಿದೆ.

ವಿವಿಧ ಧರ್ಮಗಳು, ಭಾಷೆಗಳು ಮತ್ತು ಜನಾಂಗಗಳಿಗೆ ಸೇರಿದ ಜನಗಳ ಐಕ್ಯತೆ ಇಲ್ಲಿ ಎಲ್ಲಕ್ಕಿಂತ ಮುಖ್ಯವಾದ ಗುರಿಯಾಗಬೇಕು. ಇದರ ಬದಲು ಬಿಜೆಪಿ/ಆರೆಸ್ಸೆಸ್ ಚುನಾವಣಾ ಪ್ರಯೋಜನಕ್ಕಾಗಿ ಭಾವನಾತ್ಮಕ ಪ್ರಶ್ನೆಗಳಲ್ಲಿ ಆಟವಾಡುತ್ತಿರುವುದು ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಸ್ಸಾಂ ಒಪ್ಪಂದಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು, ಮತ್ತು ಅದರಿಂದ ಸಾಧಿಸಿರುವುದನ್ನು ಕ್ರೋಡೀಕರಿಸಬೇಕು ಎಂಬ ಪಕ್ಷದ ಅಭಿಪ್ರಾಯವನ್ನು ಪುನರುಚ್ಚರಿಸಿದೆ. ಪ್ರಸ್ತಾವಿತ ನಾಗರಿಕತ್ವ(ತಿದ್ದುಪಡಿ) ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ, ಜನಗಳ ನಾಗರಿಕತ್ವವನ್ನು ಅವರ ಧಾರ್ಮಿಕ ನೆಲೆಯಲ್ಲಿ ನಿರ್ಧರಿಸುವ ಯಾವುದೇ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಸಿಪಿಐ(ಎಂ) ವಿರೋಧಿಸುತ್ತದೆ, ಏಕೆಂದರೆ ಇದು ಸಂಪೂರ್ಣವಾಗಿ ಅಸಂವಿಧಾನಿಕ ಎಂದು ಅದು ಹೇಳಿದೆ.

ಜಮ್ಮು ಮತ್ತು ಕಾಶ್ಮೀರ-ಪರಿಸ್ಥಿತಿ ಹದಗೆಡಲು ಬಿಡಬಾರದು

ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ ಮತ್ತು ಕಾಶ್ಮೀರ ಕಣಿವೆಯಲ್ಲಿ ಜನಗಳ ನಡುವೆ ಪರಕೀಯ ಭಾವ ಸಂಪೂರ್ಣವಾಗಿ ಉಂಟಾಗಿರುವ ಬಗ್ಗೆ ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ಪ್ರಧಾನ ಮಂತ್ರಿಗಳು ರಮಝಾನ್ ತಿಂಗಳಲ್ಲಿ ಒಂದು ಕದನ ವಿರಾಮವನ್ನು ಪ್ರಕಟಿಸಿದ್ದರೂ, ಅದರೊಂದಿಗೆ ವಿಧಿಸಿರುವ ಶರತ್ತುಗಳೇ ಈ ಕದನವಿರಾಮ ಮುರಿದು ಬೀಳಲು ಕಾರಣವಾಗಬಹದು ಎಂದು ಹೇಳಿದೆ.

ಈ ಹಿಂದೆ ಕೇಂದ್ರ ಸರಕಾರ ವಿಶ್ವಾಸ ಕುದುರಿಸುವ ಕ್ರಮಗಳನ್ನು ತುರ್ತಾಗಿ ಜಾರಿಗೊಳಿಸಲಾಗುವುದು ಮತ್ತು ಸಂಬಂಧಪಟ್ಟ ಎಲ್ಲರೊಂದಿಗೂ ಸಂವಾದದ ಮೂಲಕ ಒಂದು ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂದು ಆಶ್ವಾಸನೆ ನೀಡಿತ್ತು. ಇದನ್ನು ಜಾರಿಗೆ ತರಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಹತೋಟಿ ರೇಖೆಯ ಗುಂಟ ಒಂದು ಪರಸ್ಪರ ಒಪ್ಪಿತ ಕದನವಿರಾಮದ ಮೂಲಕ ಗಡಿಯಾಚೆಗಿನ ಭಯೋತ್ಪಾದನೆ ನಿಲ್ಲುವಂತೆ ಕೇಂದ್ರ ಸರಕಾರ ಪಾಕಿಸ್ತಾನದೊಡನೆ ಮಾತುಕತೆಗಳನ್ನು ಆರಂಭಿಸಬೇಕು. ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿ ಮತ್ತಷ್ಟು ಹದಗೆಡಲು ಬಿಡಬಾರದು ಎಂದು ಅದು ಆಗ್ರಹ ಪಡಿಸಿದೆ.

ಜೆಎನ್‌ಯು ಮೇಲೆ ಮತ್ತೊಂದು ದಾಳಿ

ಬಿಜೆಪಿ ಸರಕಾರ ಭಾರತೀಯ ಇತಿಹಾಸದ ಅಧ್ಯಯನದ ಬದಲು ಹಿಂದೂ ಪುರಾಣಗಳ ಅಧ್ಯಯನವನ್ನು ತರುವ ತನ್ನ ಸೈದ್ಧಾಂತಿಕ ಯೋಜನೆಯೊಂದಿಗೆ ದೇಶದಲ್ಲಿನ ಉನ್ನತ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳ ಮೇಲೆ ದಾಳಿಗಳನ್ನು ಮುಂದುವರೆಸುತ್ತಿದೆ. ಈಗ ಕೇಂದ್ರೀಯ ವಿಶ್ವದ್ಯಾಲಯದ ಪಠ್ಯಕ್ರಮವನ್ನು ಕೋಮುವಾದಗ್ರಸ್ತಗೊಳಿಸುವ ಪ್ರಯತ್ನಗಳು ನಡೆದಿವೆ. ಜೆಎನ್‌ಯು ಅಕಡೆಮಿಕ್ ಕೌನ್ಸಿಲ್ ವ್ಯಾಪಕ ವಿರೋಧದ ನಡುವೆಯೂ “ಇಸ್ಲಾಮೀ ಭಯೋತ್ಪಾದನೆ’ ಎಂಬ ದು ಕೋರ್ಸನ್ನು ಆರಂಭಿಸಬೇಕೆಂಬ ಪ್ರಸ್ತಾವ ಮುಂದಿಟ್ಟಿದೆ. ಇದು ದೇಶದ ಕ್ಯತೆ ಮತ್ತು ಸಮಗ್ರತೆಗೆ ಭಾರೀ ಧಕ್ಕೆ ಉಂಟುಮಾಡುವಂತದ್ದು. ಇಂತಹ ಕೋರ್ಸನ್ನೇನಾದರೂ ಆರಂಭಿಸಬೇಕಾಗಿದ್ದರೆ ಅದು ‘ಧಾರ್ಮಿಕ ಮೂಲಭೂತವಾದ’ ಎಂಬುದರ ಮೇಲೆ ಇರಬೇಕೇ ಹೊರತು, ನಿರ್ದಿಷ್ಟವಾಗಿ ಯಾವುದೇ ಒಂದು ದರ್ಮವನ್ನು ಗುರಿಯಿಟ್ಟು ಮಾಡಬಾರದು ಎಂಬುದು ವ್ಯಾಪಕವಾಗಿ ಇರುವ ಅಭಿಪ್ರಾಯ. ಆದ್ದರಿಂದ ಜೆನ್‌ಯು ಅಕಡೆಮಿಕ್ ಕೌನ್ಸಿಲ್‌ನ ಪ್ರಸ್ತಾವವನ್ನು ತಕ್ಷಣವೇ ಹಿಂತೆಗೆದಕೊಳ್ಳಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಹೊಣೆಗಳ-ಕೆಲಸಗಳ ವಿಭಜನೆ

22ನೇ ಮಹಾಧಿವೇಶನದ ನಂತರ ರಚನೆಗೊಂಡ ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿಯ ಸದಸ್ಯರ ಹೊಣೆಗಳು ಮತ್ತು ಕೆಲಸದ ಹಂಚಿಕೆಯ ಬಗ್ಗೆ ಸಭೆ ಚರ್ಚಿಸಿತು. ಈ ಕುರಿತ ಪ್ರಸ್ತಾವಗಳನ್ನು ಜೂನ್ 22ರಿಂದ24 ರ ವರೆಗೆ ನಡೆಯಲಿರುವ ಕೇಂದ್ರ ಸಮಿತಿಯ ಸಭೆಯ ಮುಂದೆ ಮಂಡಿಸಿ ಅಂತಿಮ ಗೊಳಿಸಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.



ವಿಶ್ವಾಸದ್ರೋಹದ ನಾಲ್ಕು ವರ್ಷಗಳು



ಈ ಬಿಜೆಪಿ ಸರಕಾರ ತೊಲಗಲೇ ಬೇಕು. ಪ್ರತಿಯೊಂದು ಆಶ್ವಾಸನೆ ವಿಚಾರದಲ್ಲಿ ವಿಶ್ವಾಸದ್ರೋಹ ಮಾಡಿದ್ದಲ್ಲದೆ ಸಂಸದೀಯ ಪ್ರಜಾಪ್ರಭುತ್ವ ಮತ್ತು ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದ ಪರಿಣಾಮಕತೆಯನ್ನು ತುಚ್ಛೀಕರಿಸುತ್ತಿದೆ. ಜನತೆಯ ಜೀವನೊಪಾಯದ ಮೇಲೆ ಅಭೂತಪೂರ್ವ ರೀತಿಯಲ್ಲಿ ಆಕ್ರಮಣ ಮಾಡುತ್ತಿದೆ. ಈ ಕಾರಣಗಳಿಂದಾಗಿ ಮೋದಿ ಸರಕಾರ ತಾನು ಜನ–ವಿರೋಧಿಯೂ ಹೌದು, ಸಂವಿಧಾನ–ವಿರೋಧಿಯೂ ಹೌದು ಎನ್ನುವುದನ್ನು ತಾನಾಗಿಯೇ ತೋರಿಸಿಕೊಟ್ಟಿದೆ. ಈ ಎಲ್ಲಾ ಅಂಶಗಳಲ್ಲದೆ ಇನ್ನೂ ಅನೇಕ ಕಾರಣಗಳಿಗಾಗಿ, ಈ ಸರಕಾರದ ಉಳಿದಿರುವ ಅಂತಿಮ ವರ್ಷದಲ್ಲಿ ಈ ಎಲ್ಲಾ ಆಕ್ರಮಣಗಳ ವಿರುದ್ಧ ಜನತಾ ಚಳವಳಿಗಳನ್ನು ನಡೆಸಿ ಈ ಸರಕಾರವನ್ನು ಪದಚ್ಯುತಗೊಳಿಸುವುದನ್ನು ಖಾತರಿಪಡಿಸುವುದು ಭಾರತೀಯ ಜನತೆಯ ಮುಂದಿರುವ ಪ್ರಧಾನ ಕಾರ್ಯಭಾರವಾಗಿದೆ.



ಸೀತಾರಾಮ್ ಯೆಚುರಿ

ಅನು: ವಿಶ್ವ

2014ರ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಜನರಿಗೆ ನೀಡಿದ್ದ ಆಶ್ವಾಸನೆಗಳ ಆಧಾರದಲ್ಲಿ ಸಂಪೂರ್ಣ ಬಹುಮತದೊಂದಿಗೆ ಕೇಂದ್ರದಲ್ಲಿ ಬಿಜೆಪಿ ಸರಕಾರಕ್ಕೆ ಅಧಿಕಾರಕ್ಕೆ ಬಂದಿತ್ತು. ಆ ಆಶ್ವಾಸನೆಗಳನ್ನು ಹೆಚ್ಚುಕಮ್ಮಿ ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೇ ನಾಲ್ಕು ವರ್ಷ ಪೂರೈಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರದ ಏಕೈಕ ಪ್ರಮುಖ ಲಕ್ಷಣವಾಗಿದೆ.

ದೇಶಕ್ಕೆ 'ಅಚ್ಛೇ ದಿನ್'ನ (ಒಳ್ಳೆ ದಿನಗಳು) ಭರವಸೆಯನ್ನು ನೀಡಲಾಗಿತ್ತು. ದೇಶಕ್ಕೆ ಅಭಿವೃದ್ಧಿ ಮತ್ತು ಸಮೃದ್ಧಿಯ ಭರವಸೆಯನ್ನು ನೀಡಲಾಗಿತ್ತು. ಸ್ವಾತಂತ್ರ್ಯ ಬಂದಾಗಿನಿಂದ ಏಳು ದಶಕಗಳಲ್ಲಿ ಊಹಿಸಲೂ ಆಗದ ಎತ್ತರಕ್ಕೆ ಮುಟ್ಟುವ ರೀತಿಯಲ್ಲಿ ದೇಶವನ್ನು ಬಲಪಡಿಸಲಾಗುವುದು ಎಂದು ಆಶ್ವಾಸನೆ ನೀಡಲಾಯಿತು. 'ಸಬ್ ಕೆ ಸಾಥ್ ಸಬ್ ಕೆ ವಿಕಾಸ್'ನ ಆಶ್ವಾಸನೆಯನ್ನು ನೀಡಲಾಯಿತು. ಈ ಎಲ್ಲಾ ಘೋಷಣೆಗಳು ಬರೀ ಪೊಳ್ಳು ಎಂಬುದು ಈಗ ಸಾಬೀತಾಗಿದೆ. ಯಾವೊಂದು ಆಶ್ವಾಸನೆಯೂ ಈಡೇರದೆ ವಿಶ್ವಾಸದ್ರೋಹ ಬಗೆಯಲಾಗಿದೆ.

ಒಂದು ದೇಶವಾಗಿ ಭಾರತದ ಮೇಲೆ ಮತ್ತು ನಮ್ಮ ಜನತೆಯ ಜೀವನೋಪಾಯದ ಮೇಲೆ ಈ ನಾಲ್ಕು ವರ್ಷಗಳಲ್ಲಿ ಅಭೂತಪೂರ್ವವಾದ ಹಲ್ಲೆ ನಡೆದಿದೆ. ನಾಲ್ಕು ರೀತಿಯ ಆಕ್ರಮಣ ನಡೆಯುತ್ತಿದ್ದು ಈ ನಾಲ್ಕು ವರ್ಷಗಳಲ್ಲಿ ಅದು ತೀವ್ರಗೊಂಡು ಮುಂದುವರಿಯುತ್ತಿದೆ: (1). ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ಆಕ್ರಾಮಕ ಅನುಸರಣೆಯಿಂದಾಗಿ ನಮ್ಮ ಜನತೆಯ ಬಹುಭಾಗದ ಜನರ ಜೀವನ ನಾಶ. (2). ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಂಡಿದ್ದು ನಮ್ಮ ದೇಶದ ಸಾಮಾಜಿಕ ಹಂದರವನ್ನು ಚಿಂದಿಚೂರು ಮಾಡಲಾಗುತ್ತಿದೆ. (3). ಸಂಸದೀಯ ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಸಂಸ್ಥೆಗಳು ಮತ್ತು ಅಧಿಕಾರಗಳ ಮೇಲೆ ಎಲ್ಲಾ ಬಗೆಯ ಆಕ್ರಮಣ. (4). ಭಾರತದ ಸ್ವತಂತ್ರ ವಿದೇಶಾಂಗ ನೀತಿ ಮತ್ತು ಸಾರ್ವಭೌಮತೆಯನ್ನು ಅಮೆರಿಕ ಸಾಮ್ರಾಜ್ಯಶಾಹಿಯ ಆದೇಶಗಳಿಗೆ ಸಂಪೂರ್ಣವಾಗಿ ಶರಣುಗೊಳಿಸಲಾಗಿದೆ. ಈ ನಾಲ್ಕೂ ಅಂಶಗಳು ಸೇರಿದರೆ ನಮ್ಮ ದೇಶ ಹಾಗೂ ನಮ್ಮ ಜನತೆಯ ಮೇಲೆ ಅತ್ಯಂತ ಗಂಭೀರ ದಾಳಿ ಎನಿಸುತ್ತದೆ.

ಈ ಸರಕಾರವನ್ನು ಕಿತ್ತೊಗೆಯುವುದರಿಂದ ಮಾತ್ರವೇ ನಮ್ಮ ದೇಶ ಮತ್ತು ಜನತೆಯ ಭವಿಷ್ಯವನ್ನು ರಕ್ಷಿಸಬಹುದಾಗಿದೆ ಎನ್ನುವುದನ್ನು ಈ ನಾಲ್ಕು ವರ್ಷಗಳು ದೃಢಪಡಿಸಿವೆ.

ಜನತೆಯ ಮೇಲೆ ಆರ್ಥಿಕ ಪ್ರಹಾರಗಳು

ನೋಟುರದ್ಧತಿ ಮತ್ತು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ)ಗಳೆಂಬ ಎರಡು ಪ್ರಹಾರಗಳ ಮೂಲಕ ಭಾರತದ ಆರ್ಥಿಕತೆಯ ಮೂಲಬೂತ ಅಂಶಗಳ ಬಲವನ್ನೇ ಸುಮಾರಾಗಿ ನುಚ್ಚು ನೂರು ಮಾಡಿತು. ಈ ಎರಡು ಪ್ರಹಾರಗಳು ಒಟ್ಟಾಗಿ ಆರ್ಥಿಕತೆಯನ್ನು ಯಾವ ಮಟ್ಟಿಗೆ ನಾಶ ಮಾಡಿವೆಯೆಂದರೆ ಅವುಗಳ ಪರಿಣಾಮವಾಗಿ ಕಳೆದುಹೋದ ಆರ್ಥಿಕ ಚಟುವಟಿಕೆಗಳನ್ನು ಮರಳಿ ಗಳಿಸಲು ನಮಗೆ ಇನ್ನೂ ಸಾಧ್ಯವಾಗಿಲ್ಲ. ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ಕ್ಕೆ ಅರ್ಧಕ್ಕಿಂತ ಹೆಚ್ಚು ಪಾಲನ್ನು ನೀಡುವ ಮತ್ತು ಕೃಷಿ ಬಿಟ್ಟರೆ ಉಳಿದಂತೆ ಅತಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸುವ ಅನೌಪಚಾರಿಕ ಕ್ಷೇತ್ರ ಇಂದು ವಸ್ತುಶಃ ಬಿಕ್ಕಟ್ಟಿನಲ್ಲಿದೆ. ಜಿಎಸ್‌ಟಿ ಮತ್ತು ಅದನ್ನು ಜಾರಿಗೊಳಿಸುತ್ತಿರುವ ರೀತಿಯು ನಮ್ಮ ಕೋಟ್ಯಂತರ ಜನರಿಗೆ ಜೀವನೋಪಾಯ ಒದಗಿಸಿದ ಭಾರತದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ಅಕ್ಷರಶಃ ನಿಷ್ಕ್ರಿಯಗೊಳಿಸಿದೆ. ನಮ್ಮ ಆರ್ಥಿಕತೆಯ ಪ್ರತಿಯೊಂದು ರಂಗದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ)ಗೆ ಅವಕಾಶ ನೀಡಲಾಗುತ್ತಿದೆ. ನಮ್ಮ ಚಿಲ್ಲರೆ ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳಲು ಎಫ್‌ಡಿಐ ವಸ್ತುಶಃ ಹಿಂಬಾಗಿಲಿನಿಂದ ಪ್ರವೇಶಿಸಿದೆ. ಭಾರತದಲ್ಲಿ ಚಿಲ್ಲರೆ ವ್ಯಾಪಾರ ರಂಗ ನಾಲ್ಕು ಕೋಟಿಗಿಂತ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಿದೆ. ಅಂದರೆ, ಬೃಹತ್ ಬಹುರಾಷ್ಟ್ರೀಯ ಕಂಪೆನಿಗಳು ಭಾರತದ ದೇಶೀಯ ವ್ಯಾಪಾರವನ್ನು ತೆಕ್ಕೆಗೆ ತೆಗೆದುಕೊಳ್ಳುವುದರಿಂದ ದೇಶದ ಐದನೇ ಒಂದರಷ್ಟು ಜನರು ತೊಂದರೆಗೆ ಒಳಗಾಗುತ್ತಾರೆ. ಚಿಲ್ಲರೆ ಮಾರಾಟ ಕ್ಷೇತ್ರದ ಅಂತಾರಾಷ್ಟ್ರೀಯ ದೈತ್ಯ ವಾಲ್‌ಮಾರ್ಟ್ ಕಂಪೆನಿಯು ಇತ್ತೀಚೆಗೆ ಫ್ಲಿಪ್‌ಕಾರ್ಟ್ ಅನ್ನು ಖರೀದಿಸಿರುವ ಪ್ರಕ್ರಿಯೆ ಚಿಲ್ಲರೆ ವ್ಯಾಪಾರ ಕ್ಷೇತ್ರಕ್ಕೆ ವಿದೇಶಿ ಬಂಡವಾಳದ ಪ್ರವೇಶವನ್ನು ಕಾನೂನುಬದ್ಧಗೊಳಿಸಿದೆ.

ದೇಶದ ಕೃಷಿ ಸಂಕಟ ಆತಂಕಕಾರಿ ರೀತಿಯಲ್ಲಿ ಹದಗೆಡುತ್ತಿದೆ. ಗ್ರಾಮೀಣ ಭಾರತದಲ್ಲಿ ನಿಜಕೂಲಿಯು ಬದುಕುಳಿಯುವ ಮಟ್ಟಕ್ಕಿಂತ ಕೆಳಗೆ ಕುಸಿದಿದೆ. ನಮ್ಮ ಕೃಷಿಕರಿಗೆ **ಪುಟ 13 ನೋಡಿ**

"ಧೋರಣೆಗಳನ್ನು ಬದಲಿಸಿ, ಇಲ್ಲವೇ ಜನ ಸರಕಾರವನ್ನು ಬದಲಿಸುತ್ತಾರೆ"

'ಪೋಲ್ ಖೋಲ್, ಹಲ್ಲಾ ಬೋಲ್" ಪ್ರತಿಭಟನೆಯಲ್ಲಿ ಎಚ್ಚರಿಕೆ

ಮೋದಿ ನೇತೃತ್ವದ ಎನ್‌ಡಿಎ ಸರಕಾರ ನಾಲ್ಕು ವರ್ಷಗಳನ್ನು ಪೂರೈಸುತ್ತಿರುವಂತೆ, ಮೇ 23ರಂದು ದೇಶಾದ್ಯಂತ 23 ರಾಜ್ಯ ಕೇಂದ್ರಗಳಲ್ಲಿ ಮತ್ತು ಹಲವಾರು ಜಿಲ್ಲೆಗಳಲ್ಲೂ ಸಾವಿರಾರು ಜನರು ಈ ಸರಕಾರದ ನಿಜ ಬಣ್ಣವನ್ನು ಬಯಲು ಮಾಡಿ ಸವಾಲು ಹಾಕಿದ್ದಾರೆ. ಜನ ಏಕತಾ ಜನ ಅಧಿಕಾರ್ ಆಂದೋಲನ'(ಜೆಇಜೆಎ) ಬಾವುಟದಡಿಯಲ್ಲಿ ಈ 'ಪೋಲ್ ಖೋಲ್ ಹಲ್ಲಾ ಬೋಲ್' ಪ್ರತಿಭಟನೆ ನಡೆದ ವರದಿಗಳು ಬಂದಿವೆ. ನಾಲ್ಕುವರ್ಷಗಳ ನಿಜ ಬಣ್ಣವನ್ನು ಬಯಲು ಮಾಡಿ, ಈ ಸರಕಾರಕ್ಕೆ ಸವಾಲು ಹಾಕಿ ಎಂದು ಜೆಇಜೆಎ ಕರೆ ನೀಡಿತ್ತು.

ನವದೆಹಲಿಯಲ್ಲಿ, ದಿಲ್ಲಿ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದ ಸಾವಿರಾರು ಜನರು ಮಂಡಿ ಹೌಸ್‌ನಿಂದ ಸಂಸದ್ ಭವನದ ವರೆಗೆ ಸುಡುಬಿಸಿಲಿನಲ್ಲಿ ಮೆರವಣಿಗೆ ನಡೆಸಿದರು.

" ಅಚ್ಛೇ ದಿನ್ ಕೀ ಲೂಟ್ ಹೈ ಜಾರಿ,
ದಂಗಾ, ಮಹಂಗಾಯಿ ಔರ್ ಬೇರೋಜ್‌ಗಾರಿ,
ಬಹುತ್ ಹುಯೀ ಜನತಾಕೀ ಲೂಟ್
ಬದ್ಲೋ ಅಬ್ ಮೋದಿ ಸರ್ಕಾರ್"

(ಸಾಗಿದೆ ಅಚ್ಛೇ ದಿನ್ ಲೂಟಿ
ಗಲಭೆ, ನಿರುದ್ಯೋಗ, ಬೆಲೆ ಚೂಟಿ
ಜನತೆಯ ಲೂಟಿ ಇನ್ನು ಸಾಕೋಸಾಕು
ಈ ಮೋದಿ ಸರಕಾರ ಬದಲಾಗಬೇಕು)

ಎಂಬ ಘೋಷಣೆಗಳು ಮೆರವಣಿಗೆಯುದ್ದಕ್ಕೂ ಮೊಳಗಿದವು.

ಪುಟ 16 ನೋಡಿ









“ಮಾರ್ಕ್ಸ್200–ಕ್ಯಾಪಿಟಲ್150”ರ ಸಂಭ್ರಮಾಚರಣೆ ಆರಂಭ

ಮೇ 20, 2018 ರಂದು ಬೆಂಗಳೂರಿನ ಗಾಂಧಿಭವನದಲ್ಲಿ “ಮಾರ್ಕ್ಸ್200–ಕ್ಯಾಪಿಟಲ್ 150 ಮಾಲಿಕೆ”ಯ ಮೊದಲ ಕಂತಿನ ಪುಸ್ತಕ ಬಿಡುಗಡೆ ಮತ್ತು “‘“ಜಾತಿದಮನ–ಅಸ್ಪೃಶ್ಯತೆಗಳ ವಿನಾಶ ಮತ್ತು ವರ್ಗ ಹೋರಾಟ – ಒಂದು ಮಾರ್ಕ್ಸ್ ವಾದಿ ಕಣ್ಣೋಟ” ಎಂಬ ವಿಷಯದ ಬಗೆಗಿನ ವಿಚಾರಸಂಕಿರಣ ಅತ್ಯಂತ ಸ್ಫೂರ್ತಿದಾಯಕವಾಗಿ ಮತ್ತು ಯಶಸ್ವಿಯಾಗಿ ನಡೆದಿದೆ. ಇಡೀ ದಿನದ ಸಮಾರಂಭದೊಂದಿಗೆ ಮಾರ್ಕ್ಸ್–200 ಸಂಭ್ರಮಾಚರಣೆ ಕರ್ನಾಟಕದಲ್ಲಿ ಆರಂಭವಾಗಿದೆ. ಪುಸ್ತಕ ಬಿಡುಗಡೆಯ ಗೋಷ್ಟಿಯ ವರದಿ ಇಲ್ಲಿದೆ. ವಿಚಾರಸಂಕಿರಣದ ವರದಿ ಮುಂದಿನ ಸಂಚಿಕೆಯಲ್ಲಿ.

ವಸಂತರಾಜ ಎನ್.ಕೆ.

“ಮಾರ್ಕ್ಸ್200–ಕ್ಯಾಪಿಟಲ್150 ಮಾಲಿಕೆ” ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ಕಾರ್ಲ್ ಮಾರ್ಕ್ಸ್ ಅವರ ಮೇರುಗ್ರಂಥ ಕ್ಯಾಪಿಟಲ್ ಸಂಪುಟ–1 ಮತ್ತು ಇತರ 6 ಮಹತ್ವದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಯೋಜನೆ. ಈ ಯೋಜನೆಯನ್ನು ನಾಡಿನ ಎರಡು ಪ್ರಮುಖ ಪ್ರಗತಿಪರ ಪ್ರಕಾಶನ ಸಂಸ್ಥೆಗಳಾದ ನವಕರ್ನಾಟಕ ಮತ್ತು ಕ್ರಿಯಾ ಹಮ್ಮಿಕೊಂಡಿವೆ. ಇದರ ಮೊದಲ ಕಂತಾಗಿ ಮಾರ್ಕ್ಸ್ ಕೃತಿಗಳಾದ “ಫ್ರಾನ್ಸಿನಲ್ಲಿ ಅಂತರ್ಯುದ್ಧ (ಪ್ಯಾರಿಸ್ ಕಮ್ಯೂನ್)” ಮತ್ತು “ತತ್ವಶಾಸ್ತ್ರದಲ್ಲಿ ದಾರಿದ್ರ್ಯ” ಬಿಡುಗಡೆ ಮಾಡಲಾಯಿತು. ಸಮಾರಂಭದ ಮೊದಲ ಭಾಗ ಪುಸ್ತಕದ ಬಿಡುಗಡೆಗೆ ಮೀಸಲಾಗಿತ್ತು. ಪುಸ್ತಕದ ಬಿಡುಗಡೆಯನ್ನು ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಕೆ. ಮರುಳಸಿದ್ದಪ್ಪನವರು ನೆರವೇರಿಸಿದರು.

ಪುಸ್ತಕದ ಬಿಡುಗಡೆ ಮತ್ತು ವಿಚಾರಸಂಕಿರಣವನ್ನು ಸಂಘಟಿಸುವಲ್ಲಿ ನವಕರ್ನಾಟಕ ಮತ್ತು ಕ್ರಿಯಾ ಜತೆ ಇ.ಎಂ.ಎಸ್. ಸ್ಟಡಿ ಸೆಂಟರ್, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ ಮತ್ತು ಎಂ.ಎಸ್. ಕೃಷ್ಣನ್ ಟ್ರಸ್ಟ್ ಕೈಜೋಡಿಸಿದ್ದವು.

ಮಾರ್ಕ್ಸ್ ಸಮಗ್ರ ಕೃತಿಗಳು ಎಲ್ಲಾ ಲೈಬ್ರರಿಗಳಲ್ಲಿ ಲಭ್ಯವಾಗಬೇಕು

ಪುಸ್ತಕದ ಬಿಡುಗಡೆ ಮಾಡಿ ಮಾತನಾಡಿದ ಡಾ. ಕೆ. ಮರುಳಸಿದ್ದಪ್ಪನವರು ರಾಜ್ಯದಲ್ಲಿ ನಡೆಯುತ್ತಿರುವ ಪ್ರಹಸನ ನೋಡಿದರೆ ಭಾರತದ ಪ್ರಜಾಪ್ರಭುತ್ವ ಅಂತಿಮ ಹಂತಕ್ಕೆ ತಲುಪಿದೆಯೇ ಎನ್ನುವ ಪ್ರಶ್ನೆ ಮೂಡಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕೋಮುವಾದ, ಜಾತಿವಾದ, ಕಪ್ಪುಹಣ, ವಂಶವಾದಗಳು ಪ್ರಜಾಪ್ರಭುತ್ವ ಮತ್ತು ಚುನಾವಣೆಯನ್ನು ನಿಯಂತ್ರಿಸುತ್ತಿವೆ. ಸಮಕಾಲೀನ ಭಾರತದ ಪ್ರಜಾಪ್ರಭುತ್ವದ ಅವನತಿಯ ದುಸ್ಥಿತಿಯನ್ನು ಚಿತ್ರಣವನ್ನು ಕಣ್ಣಾರೆ ಕಾಣುತ್ತಿದ್ದೇವೆ, ಎಂದು ಹೇಳಿದರು.

ಭಾರತದಂತಹ ಜಾತಿನಿಷ್ಠ ಸಮಾಜದಲ್ಲಿ ಮಾರ್ಕ್ಸ್‌ವಾದ ಹೊಂದುವುದಿಲ್ಲ ಎಂಬ ಮಾತಿದೆ. ಆದರೆ, ದೇಶದ ಅನಿಷ್ಟಗಳಿಗೆ ಪುನರ್ಜನ್ಮ, ಧರ್ಮಸಿದ್ಧಾಂತ ಸೇರಿದಂತೆ ಪ್ರಚಲಿತ ಸಾವಿರಾರು ನಂಬಿಕೆಗಳು ಕಾರಣವಾಗಿವೆ. ಹುಸಿನಂಬಿಕೆಗಳನ್ನು ಜನರ ಮನಸ್ಸಿನಲ್ಲಿ ಬಿತ್ತಿ ಶೋಷಿಸಲಾಗುತ್ತಿದೆ. ಬಿಜೆಪಿ ಅಪಾಯಕಾರಿ ಪಕ್ಷ. ಹಾಗೆಂದ ಮಾತ್ರಕ್ಕೆ ಉಳಿದವರೆಲ್ಲರೂ ಸಾಚಾ ಎಂದು ತಿಳಿದುಕೊಳ್ಳುವಂತಿಲ್ಲ. ಪ್ರಜಾಪ್ರಭುತ್ವ ಅವನತಿಯ ಸ್ಥಿತಿ ತಲುಪಲು ಎಡಪಕ್ಷಗಳನ್ನು ಬಿಟ್ಟು ಎಲ್ಲರೂ ಸಮಾನವಾದ ಹೊಣೆ ಹೊರಬೇಕಾಗುತ್ತದೆ. ಪ್ರಸ್ತುತ ದಿನಗಳಲ್ಲಿ ಟ್ರಂಪ್, ಮೋದಿ, ಪುಟಿನ್ ಇವರೆಲ್ಲಾ ಪ್ರಜಾಪ್ರಭುತ್ವದ ಫಲಗಳು ಎನ್ನುವುದಾದರೆ ಅಂಥ ವ್ಯವಸ್ಥೆಯಿಂದ ಪಾರಾಗುವ ದಾರಿಯನ್ನು ಹುಡುಕಬೇಕಾಗಿದೆ. ಹಾಗಾಗಿ ಪ್ರಜಾಪ್ರಭುತ್ವ ಮತ್ತು ಮಾರ್ಕ್ಸ್‌ವಾದ ಎರಡೂ ಒಗ್ಗೂಡಿ ಭವಿಷ್ಯದ ಜಗತ್ತನ್ನು ರೂಪಿಸಬೇಕಿದೆ. ಎಂದು ಅವರು ಹೇಳಿದರು.



ಡಾ. ಕೆ. ಮರುಳಸಿದ್ದಪ್ಪ

ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ಅವರ ಸಮಗ್ರ ಕೃತಿಗಳು ಕನ್ನಡದಲ್ಲಿ ಬಂದಿವೆ. ಅದೇ ರೀತಿ, ಮಾರ್ಕ್ಸ್ ಸಮಗ್ರ ಕೃತಿಗಳೂ ಬರಬೇಕು. ಹಾಗೂ ಬಿಡುಗಡೆಯಾದ ಕೃತಿಗಳನ್ನು ಎಲ್ಲಾ ಲೈಬ್ರರಿಗಳಲ್ಲಿ ಲಭ್ಯವಾಗುವಂತೆ ಮಾಡುವುದು ಸರ್ಕಾರದ ಜವಾಬ್ದಾರಿ ಆಗಬೇಕು. ಎಂದು ಡಾ. ಕೆ. ಮರುಳಸಿದ್ದಪ್ಪನವರು ಹೇಳಿದರು.

ಇದಕ್ಕಿಂತ ಮೊದಲು ನವಕರ್ನಾಟಕದ ಮುಖ್ಯಸ್ಥ ಡಾ. ಸಿದ್ದನಗೌಡ ಪಾಟೀಲರು “ಮಾರ್ಕ್ಸ್200–ಕ್ಯಾಪಿಟಲ್150 ಮಾಲಿಕೆ” ಯೋಜನೆಯ ಹಿನ್ನೆಲೆ ಮತ್ತು ವ್ಯಾಪ್ತಿ ಬಗ್ಗೆ ವಿವರಿಸಿ, ಮುಂದಿನ ಕಂತುಗಳ ಪುಸ್ತಕ ಬಿಡುಗಡೆ ಮತ್ತು ವಿಚಾರಸಂಕಿರಣಗಳನ್ನು ರಾಜ್ಯದ ಇತರ ನಗರಗಳಲ್ಲಿ ಸಂಘಟಿಸುವುದಾಗಿ ಘೋಷಿಸಿದರು.

“ಸ್ವರ್ಗಕ್ಕೆ ಲಗ್ಗೆ ಹಾಕಿದ” ಪ್ಯಾರಿಸ್ ಕಮ್ಯೂನಿನ ಕತೆ

“ಫ್ರಾನ್ಸಿನಲ್ಲಿ ಅಂತರ್ಯುದ್ಧ (ಪ್ಯಾರಿಸ್ ಕಮ್ಯೂನ್)” ಪುಸ್ತಕದ ಪರಿಚಯವನ್ನು ಡಾ. ಬಿ.ಆರ್. ಮಂಜುನಾಥ ಆಸಕ್ತಿಕಾರಕವಾಗಿ ಮಾಡಿದರು.

ಪುಟ 10 ನೋಡಿ




ಡಾ. ಬಿ.ಆರ್. ಮಂಜುನಾಥ

ಪುಸ್ತಕಗಳೊಂದಿಗೆ ಜನರನ್ನೂ ಓದಬೇಕು: ಜಿ.ವಿ.ಎಸ್.

ಕನ್ನಡದಲ್ಲಿ ಸಾಕಷ್ಟು ಮಾರ್ಕ್ಸ್‌ವಾದದ ವಿಮರ್ಶೆ ಬಂದಿದೆ. ಇವುಗಳಲ್ಲಿ ಹೆಚ್ಚಿನವು ಮಾರ್ಕ್ಸ್‌ವಾದದ ಅಧ್ಯಯನ ಮಾಡದೆ ಅದರ ವಿಮರ್ಶೆಯ ಅಧ್ಯಯನ ಮಾತ್ರ ಮಾಡಿದವರದ್ದೇ ಹೆಚ್ಚು. ಇದಕ್ಕೆ ಕಾರಣ ಹಲವು. ಮಾರ್ಕ್ಸ್‌ವಾದದ ಕೃತಿಗಳು ಕನ್ನಡದಲ್ಲಿ ಲಭ್ಯವಿಲ್ಲದಿರುವುದು ಖಂಡಿತ ಒಂದು ಕಾರಣ. ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.

ಎಡಪಂಥೀಯ ಚಳುವಳಿಯ ಮುಂಚೂಣಿ ಯಲ್ಲಿದ್ದೇವೆ ಎಂದು ಹೇಳಿಕೊಳ್ಳುವ ನಾವು ಮಾರ್ಕ್ಸ್‌ವಾದಿ ಚಿಂತನೆಯನ್ನು ಜನತೆಯ ಬಳಿ ತೆಗೆದುಕೊಂಡು ಹೋಗುವಲ್ಲಿ ವಿಫಲರಾಗಿದ್ದೇವೆ. ಜನರ ಭಾಷೆ ನಮಗೆ ಅರ್ಥವಾಗುತ್ತಿಲ್ಲ. ನಮ್ಮ ಭಾಷೆ ಅವರಿಗೆ ಅರ್ಥವಾಗುತ್ತಿಲ್ಲ. ನಾವೇ ಶ್ರೇಷ್ಠರೆಂಬ ಭಾವನೆ ಜನರೊಂದಿಗೆ ಕಂದಕ ನಿರ್ಮಿಸುತ್ತಿದೆ. ಜನರಿಗೆ ಜೀವನ ಪಾಠ ಕಲಿಸಿದೆ. ನಮಗೆ ಪುಸ್ತಕ ಪಾಠ ಕಲಿಸಿದೆ. ಪುಸ್ತಕಗಳೊಂದಿಗೆ ಜನರನ್ನೂ ಓದಿದಾಗ ಮಾತ್ರ ನಾವು ಯಶಸ್ಸು ಕಾಣಲು ಸಾಧ್ಯ.



ಜಿ.ವಿ.ಶ್ರೀರಾಮರೆಡ್ಡಿ

ಕಮ್ಯೂನಿನಿಂದ ಜಂಟಿ ಹೋರಾಟದ ಪಾಠ ಕಲಿಯಬೇಕು : ಡಾ. ಜಿ.ಆರ್.

ಪ್ಯಾರಿಸ್ ಕಮ್ಯೂನಿನಿಂದ ಇಂದು ಕೆಲವು ಪ್ರಮುಖ ಪಾಠಗಳನ್ನು ಕಲಿಯಬೇಕಾಗಿದೆ. ಪ್ರೂಧೋನ್ ರನ್ನು ಸೈದ್ಧಾಂತಿಕವಾಗಿ ಮಾರ್ಕ್ಸ್ ವಿರೋಧಿಸಿದ್ದರೂ, ಮಾರ್ಕ್ಸ್ ನಾಯಕತ್ವದ ಅಂತರ್ರಾಷ್ಟ್ರೀಯ ಕಾರ್ಮಿಕರ ಸಂಘಟನೆ (ಆಗಿನ ಕಮ್ಯುನಿಸ್ಟರು) ಕ್ರಾಂತಿಯ ಬೆನ್ನೆಲುಬಾಗಿದ್ದರೂ, ಪ್ರೂಧೋನ್ ಮತ್ತು ಬ್ಲಾಂಕಿವಾದಿಗಳ ಜತೆಗೂಡಿ ಅವರು ಜಂಟಿ ಹೋರಾಟ ಮಾಡುತ್ತಾರೆ. ಜೈಲಿನಲ್ಲಿದ್ದ ಬ್ಲಾಂಕಿಯನ್ನು ಬಿಡುಗಡೆ ಮಾಡಲು ಕಮ್ಯೂನಿನ ವಶದಲ್ಲಿ ಒತ್ತೆಯಾಗಿಟ್ಟಿದ್ದ ಆರ್ಚಿಬಿಷಪನನ್ನೂ ಬಿಡುಗಡೆ ಮಾಡಲೂ ಸಿದ್ಧವಾಗುತ್ತಾರೆ. ಇಂತಹ ಜಂಟಿ ಹೋರಾಟ ಇವತ್ತು ಅಗತ್ಯವಿಲ್ಲವೇ? ಸಾಧ್ಯವಿಲ್ಲವೇ? ಎಂದು ಅಧ್ಯಕ್ಷೀಯ ಭಾಷಣ ಮಾಡುತ್ತಾ ಡಾ. ಜಿ. ರಾಮಕೃಷ್ಣ ಅವರು ಕೇಳಿದರು.

ಮಾರ್ಕ್ಸ್ ಕಮ್ಯೂನ್ ಸ್ಥಾಪಿತವಾದಾಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತಾ ಆಗಿನ ಆಳ್ವಿಕೆಯ ನಾಲ್ಕು ಅಂಶಗಳ ಬಗ್ಗೆ ಗಮನ ಸೆಳೆಯುತ್ತಾನೆ. ಬ್ಯಾರಕುಗಳು (ಮಿಲಿಟರಿವಾದ ಮತ್ತು ಪ್ರಭುತ್ವ ಹಿಂಸಾಚಾರ), ಚರ್ಚುಗಳು (ಮತಧರ್ಮದ ಅಫೀಮು), ಗ್ರಾಮೀಣ ಗೊಡ್ಡು ಸಂಪ್ರದಾಯಶರಣತೆ ಮತ್ತು ಅಸಂಸ್ಕೃತತೆ. ಇವೆಲ್ಲವೂ ನಮ್ಮಲ್ಲಿ ಈಗ ತಾಂಡವವಾಡುತ್ತಿವೆ. ಥೀಯರ್ಸ್ (ಫ್ರಾನ್ಸಿನ ನಾಯಕ) ಮತ್ತು ಬಿಸ್ಮಾರ್ಕ್ (ಜರ್ಮನಿಯ ನಾಯಕರ) ಜಂಟಿ–ಬಲದ ವಿರುದ್ಧ, ಕಮ್ಯೂನ್ ಎದುರಿಸಿ ಹೋರಾಡಿತ್ತು. ಥೀಯರ್ಸ್+ಬಿಸ್ಮಾರ್ಕ್=ಹಿಟ್ಲರ್ ಎಂದುಕೊಳ್ಳಬಹುದು. ನಾವು ಈಗ ಸರಿಸುಮಾರು ಅದೇ ಸ್ಥಿತಿಯಲ್ಲಿದ್ದೇವೆ. ಇದರ ವಿರುದ್ಧ ಹೋರಾಟದಲ್ಲಿ ನಾವು ಜಂಟಿ ಹೋರಾಟದ ಬಗ್ಗೆ ಕಲಿಯಬೇಕಿದೆ, ಎಂದು ಜಿ.ಆರ್. ಒತ್ತಿ ಹೇಳಿದರು.

ರಶ್ಯದ ಕ್ರಾಂತಿಯ ನಂತರ ದೇಶದೊಳಗೆ ಜರ್ಮನಿ ಸೇರಿದಂತೆ 14 ದೇಶಗಳ ಮಿಲಿಟರಿ ಮಧ್ಯಪ್ರವೇಶ ಮಾಡಿದ್ದವು. ಈ ಮಿಲಿಟರಿ ದಾಳಿ ವಿರುದ್ಧ ಹೋರಾಡುತ್ತಿದ್ದ ಬೊಲ್ಶೆವಿಕ್ ಸರ್ಕಾರ 73 ದಿನಗಳು ಕಳೆದ ನಂತರ ‘ನಮ್ಮ ಸರಕಾರ ಪ್ಯಾರಿಸ್ ಕಮ್ಯೂನಿಗಿಂತ 1 ದಿನ ಹೆಚ್ಚು ಬದುಕಿದೆ ಎಂದು ಲೆನಿನ್ ಉದ್ಗರಿಸುತ್ತಾರೆ. ಪ್ಯಾರಿಸ್ ಕಮ್ಯೂನ್ ಎಂದೆಂದಿಗೂ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯ ಸೆಲೆಯಾಗಿರುತ್ತದೆ ಎಂದರು.



ಡಾ. ಜಿ. ರಾಮಕೃಷ್ಣ

ತತ್ವಶಾಸ್ತ್ರದ ಸ್ವರೂಪ ಮತ್ತು ಕರ್ತವ್ಯದ ಬಗ್ಗೆ ‘ತತ್ವಶಾಸ್ತ್ರದ ದಾರಿದ್ರ್ಯ’ ಹೆಚ್ಚು ಬೆಳಕು ಚೆಲ್ಲುತ್ತದೆ. ಅಮೂರ್ತವಾದ ನಿಗೂಢ ಅಧ್ಯಾತ್ಮವೇ ಅದರ ವ್ಯಾಪ್ತಿ ಅಲ್ಲ. ನಮ್ಮಲ್ಲಿ ತತ್ವಶಾಸ್ತ್ರ ಮತ್ತು ಮತಧರ್ಮದ ಕಲಸುಮೆಲೋಗರ ಮಾಡಿ ಒಂದೇ ಎನ್ನುವಂತೆ ಮಾಡಲಾಗಿದೆ. ದ್ವೈತ ಸಿದ್ಧಾಂತ ಮಂಡಿಸುವ

ಪುಟ 10 ನೋಡಿ

"ಮಾರ್ಕ್ಸ್ 200–ಕ್ಯಾಪಿಟಲ್ 150"ರ ಸಂಭ್ರಮಾಚರಣೆ ಆರಂಭ......... ಪುಟ 9 ರಿಂದ

ಮಾರ್ಕ್ಸ್ ಅವರ ಕ್ಲಾಸಿಕ್ ಕೃತಿಗಳನ್ನು ಒಂದುವರೆ ಶತಕದ ನಂತರ ಇಂದು ಕನ್ನಡಕ್ಕೆ ಅನುವಾದಿಸುವ ಸವಾಲುಗಳ ಬಗ್ಗೆ ಮಾತನಾಡಿದ ಅವರು, ಈ ಹಿನ್ನೆಲೆಯಲ್ಲಿ ವಿಶ್ವ ಕುಂದಾಪುರ ಅವರು ಅದನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ ಎಂದರು.

ಪ್ಯಾರಿಸ್ ಸಾಹಿತ್ಯ–ಕಲೆ, ರಾಜಕೀಯ ಚಿಂತನೆಗಳ ವಾಗ್ವಾದಗಳ ಕ್ರಾಂತಿಗಳ ನಗರ ಎಂದು ಬಣ್ಣಿಸಿದ ಅವರು 1789ರ ಫ್ರೆಂಚ್ ಮಹಾಕ್ರಾಂತಿಯಿಂದ ಆರಂಭಿಸಿ ಪ್ಯಾರಿಸ್ ಕಮ್ಯೂನಿಗೆ ಹಿನ್ನೆಲೆ ಒದಗಿಸಿದ ಅದರ ಮೊದಲು ನಡೆದ ಹಲವು ಅಂತರ್ಯುದ್ಧಗಳ ಕ್ರಾಂತಿಯ ಪ್ರಯತ್ನಗಳ ಚಾರಿತ್ರಿಕ ಹಿನ್ನೆಲೆಯನ್ನು ಪರಿಚಯಿಸಿದರು.

ನಮ್ಮ ಪಠ್ಯಪುಸ್ತಕಗಳಲ್ಲಿ ಬರುವ ಜರ್ಮನಿಯನ್ನು ಒಗ್ಗೂಡಿಸಿದ ಬಿಸ್ಮಾರ್ಕಿನ ಹೀರೋ ಬಿಂಬಕ್ಕೆ ಪ್ರತಿಯಾಗಿ, ಜರ್ಮನಿಯ ಕಾರ್ಮಿಕ ವರ್ಗದ ಹಕ್ಕುಗಳನ್ನು ದಮನಿಸುವ ಇತರ ದೇಶಗಳ ಮೇಲೆ ಆಕ್ರಮಣ ಮಾಡುವ ಬಿಸ್ಮಾರ್ಕಿನ ನಿರೂಪಣೆಯನ್ನು ಕಾರ್ಮಿಕ ವರ್ಗದೃಷ್ಟಿಯಿಂದ ಮಾರ್ಕ್ಸ್ ಈ ಪುಸ್ತಕದಲ್ಲಿ ಮಾಡುವುದನ್ನು ಕಾಣಬಹುದು. ಆಗಿನ ಫ್ರೆಂಚ್ ಪಾರ್ಲಿಮೆಂಟು ಸದಸ್ಯರ ಬಗ್ಗೆ ಮಾರ್ಕ್ಸ್ ಮಾಡುವ ನಿರೂಪಣೆ ಇಂದಿನ ಕರ್ನಾಟಕದ ವಿಧಾನಸಭೆ ಸದಸ್ಯರನ್ನು ನೋಡಿ ಬರೆದಂತೆ ಅನಿಸುತ್ತದೆ! ಅದೇ ರೀತಿ ಫ್ರೆಂಚ್ ಆಡಳಿತಗಾರನಾಗಿದ್ದ ಥೀಯರ್ಸ್ ನನ್ನು ವ್ಯಂಗ್ಯವಾಗಿ ಬಣ್ಣಿಸುತ್ತಾ ಆತನ ಗುಣಲಕ್ಷಣಗಳ ಮುಖ್ಯ ಭಾಗವೆಂದರೆ "ಸಂಪತ್ತಿನ ಬಗ್ಗೆ ಅತಿಯಾದ ದುರಾಸೆ ಮತ್ತು ಸಂಪತ್ತಿನ ಉತ್ಪಾದಕರ ಬಗ್ಗೆ ದ್ವೇಷ' ಎಂದು ಹೇಳುತ್ತಾನೆ. ಪುಸ್ತಕದಲ್ಲಿ ಬರುವ ಇಂತಹ ಹಲವು ಆಸಕ್ತಿಕಾರಕ ಭಾಗಗಳತ್ತ ಡಾ. ಮಂಜುನಾಥ ಗಮನ ಸೆಳೆದರು.

ಒಂದು ಕಡೆ ತಾಯ್ನಾಡನ್ನು ಆಕ್ರಮಿಸಿಕೊಂಡ ಪ್ಯಾರಿಸನ್ನು ಸುತ್ತುವರಿದ ಜರ್ಮನ್ ಸೈನ್ಯ, ಇನ್ನೊಂದು ಕಡೆ ಜರ್ಮನಿಗೆ ಶರಣಾದ ಫ್ರೆಂಚ್ ರಾಷ್ಟ್ರೀಯ ಸೈನ್ಯ ಮತ್ತು ಸರಕಾರ ಪ್ಯಾರಿಸಿನ ರಕ್ಷಣೆಗೆ ಸಶಸ್ತ್ರಗೊಳಿಸಲಾಗಿದ್ದ ಕಾರ್ಮಿಕರನ್ನು ರಾಷ್ಟ್ರೀಯ ಐಕ್ಯತೆಯ ಹೆಸರಲ್ಲಿ ಶಸ್ತ್ರ ವಾಪಸು ಮಾಡುವಂತೆ ಕೇಳುವ ಸನ್ನಿವೇಶದಲ್ಲಿ ಪ್ಯಾರಿಸ್ ಕಮ್ಯೂನ್ ನಡೆಯಿತು. ಸಶಸ್ತ್ರ ಕಾರ್ಮಿಕರು ಶಸ್ತ್ರ ವಾಪಸು ಮಾಡಲು ನಿರಾಕರಿಸಿದರು. ಅದನ್ನು ಬಲವಂತವಾಗಿ ಮಾಡಲು ಯತ್ನಿಸಿದ ಫ್ರೆಂಚ್ ಸೈನ್ಯವನ್ನು ಎದುರಿಸಿ ಸೋಲಿಸಿ ವಾರ್ಸಲೆಸ್ ಗೆ ಅಟ್ಟಿ, ಜಗತ್ತಿನ ಮೊದಲ ಕಾರ್ಮಿಕರ ಪ್ರಭುತ್ವ ಸ್ಥಾಪಿಸಿದರು. ಸೈನಿಕ ದಿಗ್ಬಂಧನದಿಂದ ಅಗತ್ಯ ವಸ್ತುಗಳ ತೀವ್ರ ಅಭಾವ, ಹಸಿವು, ಬಡತನಗಳ ಹತಾಶೆಯ ಸ್ಥಿತಿಯಲ್ಲಿಯೂ ಪ್ಯಾರಿಸಿನ ಕಾರ್ಮಿಕರು ಮಾರ್ಕ್ಸ್ ಹೇಳಿದಂತೆ "ಸ್ವರ್ಗಕ್ಕೆ ಲಗ್ಗೆ ಹಾಕಿದ್ದರು" ಎಂದು ಪ್ಯಾರಿಸ್ ಕಮ್ಯೂನಿನ ಹುಟ್ಟಿನ ಬಗೆ ವಿವರಿಸಿದರು.

ಕೇವಲ 72 ದಿನ ಬಾಳಿದ್ದ ಕಮ್ಯೂನ್ ಈ ವರೆಗೂ ಯಾವುದೇ ಬೂರ್ಜ್ವಾ ಗಣತಂತ್ರ ಸಾಧಿಸದ್ದನ್ನು ಸಾಧಿಸಿತು. ಕಮ್ಯೂನ್ ಆರಿಸಿದ ಕಾರ್ಮಿಕರ ಪ್ರಭುತ್ವದ ಎಲ್ಲಾ ಪ್ರತಿನಿಧಿಗಳು ಚುನಾಯಿತರು ಮತ್ತು ಅವರು ತಮ್ಮ ಕರ್ತವ್ಯವನ್ನು ಪಾಲಿಸದಿದ್ದರೆ ವಾಪಸು ಕರೆಯುವ ಹಕ್ಕು ನಾಗರಿಕರಿಗಿತ್ತು. ಕಾರ್ಮಿಕರ ಚುನಾಯಿತ ಸಭೆ ಕಾರ್ಯಾಂಗವೂ ಶಾಸಕಾಂಗವೂ ಎರಡೂ ಆಗಿತ್ತು. ಚುನಾಯಿತ ಪ್ರತಿನಿಧಿಗಳ ಸಂಬಳ ಸರಾಸರ ಕಾರ್ಮಿಕರಷ್ಟೇ ಇತ್ತು. ಯಾವುದೇ ವಿಶೇಷ ಸವಲತ್ತುಗಳು ಇರಲಿಲ್ಲ. ಕಾರ್ಮಿಕರ ಪ್ರಭುತ್ವಕ್ಕೆ ಕಮ್ಯೂನ್ ಒಂದು ಮಾದರಿಯೆಂದು ಮಾರ್ಕ್ಸ್ ಮತ್ತು ಲೆನಿನ್ ಇಬ್ಬರೂ ಬಗೆದಿದ್ದರು. ಪ್ಯಾರಿಸ್ ಕಮ್ಯೂನಿನಲ್ಲಿ ಮಹಿಳೆಯರ ಪಾತ್ರ ಮನನೀಯ. ಪ್ಯಾರಿಸ್ ಕಮ್ಯೂನ್ ಸ್ಥಾಪನೆಗೂ, ಅದರ ರಕ್ಷಣೆಗೂ ಕೊನೆಗಳಿಗೆಯವರೆಗೂ ಶಸ್ತ್ರಸಜ್ಜಿತರಾಗಿ ಹೋರಾಡಿದ್ದು ಮಾತ್ರವಲ್ಲದೆ, ಎಲ್ಲಾ ರಾಜಕೀಯ ವಾಗ್ವಾದಗಳಲ್ಲಿ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದರು, ಎಂದು ಪ್ಯಾರಿಸ್ ಕಮ್ಯೂನಿನ ಸಾಧನೆಗಳ ಬಗ್ಗೆ ಅವರು ವಿವರಿಸಿದರು.

ಇಂತಹ ಕಮ್ಯೂನನ್ನು ಆಳುವ ವರ್ಗಗಳು ರಕ್ತದ ಕಡಲಲ್ಲಿ ಮುಳುಗಿಸಿ ಮುಗಿಸಿದವು. 30 ಸಾವಿರ ಕಮ್ಯೂನಾರ್ಡರು ಫ್ರೆಂಚ್ ಸೈನ್ಯದ ಜತೆ ಕಾಳಗದಲ್ಲಿ ಸತ್ತರು ಅಥವಾ ಸೆರೆಹಿಡಿಯಲ್ಪಟ್ಟು ಸಾಮೂಹಿಕ ಶೂಟಿಂಗಿಗೆ ಬಲಿಯಾದರು. ಒಂದು ಲಕ್ಷಕ್ಕೂ ಹೆಚ್ಚು ಕಮ್ಯೂನಾರ್ಡರು ಕೊಲೆಯಾದರು ಅಥವಾ ಗಡಿಪಾರಾದರು ಅಥವಾ ವಲಸೆ ಹೋದರು – ಒಟ್ಟಾರೆಯಾಗಿ ಪ್ಯಾರಿಸಿನಲ್ಲಿ ಇಲ್ಲವಾದರು. ಇದಕ್ಕೆ ಬ್ಯಾಂಕಿನಲ್ಲಿದ್ದ ಬಂಡವಾಳಿಗರ ಹಣವನ್ನು ಮುಟ್ಟುಗೋಲು ಹಾಕುವ ಮೂಲಕ ಆಳುವ ವರ್ಗದ ಆರ್ಥಿಕ ಗೋಣು ಮುರಿಯುವ ಕ್ರಮಗಳನ್ನು ಕೈಗೊಳ್ಳದ್ದು ಮತ್ತು ಹಲವು ರಾಜಕೀಯ ಧಾರೆಗಳ (ಕಮ್ಯುನಿಸ್ಟರು, ಪ್ರೂಧೋನ್ ವಾದಿ, ಬ್ಲಾಂಕಿ ವಾದಿ, ಕಾಲ್ಪನಿಕ ಸಮಾಜವಾದಿಗಳು ಇತ್ಯಾದಿ) ನಡುವೆ ಏನು ಮಾಡಬೇಕು ಎಂಬುದರ ಬಗ್ಗೆ ಗೊಂದಲವಿದ್ದು ಸೈದ್ಧಾಂತಿಕ ಸ್ಪಷ್ಟತೆ ಇಲ್ಲದ್ದು – ಮುಂತಾದ ದೌರ್ಬಲ್ಯಗಳು ಕಾರಣವಾದವು ಎಂದು ಮಾರ್ಕ್ಸ್ ವಿಶ್ಲೇಷಿಸುತ್ತಾರೆ. ಬೂರ್ಜ್ವಾ ಪ್ರಭುತ್ವದ ಆಳುವ ಯಂತ್ರವನ್ನು ಹಾಗೆನೇ ಅಥವಾ ಬದಲಾಯಿಸಿಯೂ ಕಾರ್ಮಿಕ ಪ್ರಭುತ್ವ ಬಳಸಲು ಸಾಧ್ಯವಿಲ್ಲ. ಆ ಯಂತ್ರವನ್ನು ನಾಶ ಮಾಡಿ ಹೊಸ ಯಂತ್ರವನ್ನು ಕಟ್ಟಬೇಕು ಎಂಬುದು ಕಮ್ಯೂನ್ ಕಾರ್ಮಿಕ ಚಳುವಳಿಗೆ ಕೊಟ್ಟ ಕೊಡುಗೆ. ಒಬ್ಬ ಕಮ್ಯೂನಾರ್ಡ್ ಆಗಿದ್ದ ಯುಜೀನ್ ಪೊಟಿಯೆರ್ ಬರೆದ "ಅಂತರ್ರಾಷ್ಟ್ರೀಯ" ಹಾಡು ಅಂದಿನಿಂದ ಇಂದಿನವರೆಗೂ ಜಾಗತಿಕ ದುಡಿಯುವ ಜನರ ಚಳುವಳಿಯ 'ಅಧಿಕೃತ' ಹಾಡು ಆಗಿಬಿಟ್ಟಿದೆ. ಜಗತ್ತಿನ ಎಲ್ಲಾ ಭಾಷೆಗಳಿಗೆ ಅನುವಾದವಾಗಿ ಜನಪ್ರಿಯವಾಗಿದೆ. ಕಮ್ಯೂನ್ ಇಲ್ಲವಾಗಿರಬಹುದು. ಆದರೆ ಅದರ ಸ್ಫೂರ್ತಿ ಚಿರಂತನ, ಎಂದು ಅವರು ವಿವರಿಸಿದರು.

ಪುಸ್ತಕ ಅದರಲ್ಲೂ ಗಂಭೀರ ಪುಸ್ತಕಗಳನ್ನು ಓದುವವರು ವಿರಳವಾಗುತ್ತಿರುವಾಗ ಮಾರ್ಕ್ಸ್ ಅವರ ಕ್ಲಾಸಿಕ್ ಕೃತಿಗಳ ಪ್ರಕಟಣೆಯ ಸಾಹಸಕ್ಕೆ ಕೈ ಹಾಕಿದ ಎರಡೂ ಪ್ರಕಾಶನ ಸಂಸ್ಥೆಗಳಿಗೆ ಅವರು ಅಭಿನಂದನೆಗಳನ್ನು ಹೇಳಿದರು. ಈ ಪುಸ್ತಕ ಸೇರಿದಂತೆ ಮಾರ್ಕ್ಸ್ ಅವರ ಕ್ಲಾಸಿಕ್ ಕೃತಿಗಳನ್ನು ಎಡಪಂಥೀಯ ಮತ್ತು ದುಡಿಯುವ ಜನರ ಚಳುವಳಿಗಳ ಕಾರ್ಯಕರ್ತರು ಹಾಗೂ ವಿದ್ಯಾರ್ಥಿ–ಯುವಜನರ ಬಳಿ ಒಯ್ಯುವುದು ಹೇಗೆ ಎಂಬುದರ ಬಗ್ಗೆ ಕ್ರಮ ರೂಪಿಸಬೇಕು ಎಂದರು.

ಮಾರ್ಕ್ಸ್‌ವಾದದ ಭ್ರೂಣರೂಪದ ಕೃತಿ

ಮಾರ್ಕ್ಸ್ ಅವರ 'ತತ್ವಶಾಸ್ತ್ರದ ದಾರಿದ್ರ್ಯ', ಪ್ರೂಧೋನ್ ರ 'ದಾರಿದ್ರ್ಯದ ತತ್ವಶಾಸ್ತ್ರ' ಎಂಬ ಕೃತಿಯ ವಿಮರ್ಶೆ ಮಾಡಬೇಕು ಎಂಬ ಪ್ರಚೋದನೆಯಿಂದ ಬರೆದಿದ್ದರೂ ಮೊದಲ ಬಾರಿಗೆ ಈಗ ನಾವು ಮಾರ್ಕ್ಸ್‌ವಾದ ಎಂದು ಕರೆಯುವ ಸಿದ್ಧಾಂತದ ಭ್ರೂಣರೂಪದ ನಿರೂಪಣೆಯ ಮೊದಲ ಕೃತಿ ಎಂದು ಪ್ರೊ. ವಿ.ಎನ್.ಲಕ್ಷ್ಮಿನಾರಾಯಣ ಅವರು ಪುಸ್ತಕ ಪರಿಚಯದ ಮಾತುಗಳನ್ನಾಡುತ್ತಾ ಹೇಳಿದರು. (ಅವರ ಪುಸ್ತಕ ಪರಿಚಯ ಲೇಖನದ ರೂಪದಲ್ಲಿ ಈ ಸಂಚಿಕೆಯಲ್ಲೇ ಪ್ರಕಟವಾಗಿರುವುದರಿಂದ ವಿವರಗಳನ್ನು ಇಲ್ಲಿ ಬಿಡಲಾಗಿದೆ)

ಮೂರು ಕೃತಿಗಳ ಅನುವಾದಕರಾದ ಕೆ.ಪಿ.ವಾಸುದೇವನ್, ವಿಶ್ವ ಕುಂದಾಪುರ ಮತ್ತು ಕೆ.ಎಸ್.ಪಾರ್ಥಸಾರಥಿ ಅವರುಗಳು ಅನುವಾದಕರಾಗಿ ತಮ್ಮ ಅನುಭವಗಳನ್ನು ಹೇಳಿದರು. ಕೆ.ಪಿ.ವಾಸುದೇವನ್ ಮಾತನಾಡುತ್ತಾ, ಮೌಖಿಕ ಸಂಕಥನದಿಂದ ನೇರವಾಗಿ ಡಿಜಿಟಲ್ ಜಗತ್ತಿಗೆ ನಮ್ಮ ಜನ ಜಿಗಿದಿರುವಾಗ ಇನ್ನೂ ಪ್ರಿಂಟ್ ಪ್ರಕಟಣೆಗೆ ಓದುಗರಿದ್ದಾರೆ ಎಂದು ನಂಬಿ ಇಂತಹ ಪ್ರಕಟಣೆಯ ಸಾಹಸಕ್ಕೆ ಕೈ ಹಾಕಿರುವ ಎರಡೂ ಪ್ರಕಾಶನ ಸಂಸ್ಥೆಗಳಿಗೆ ಅಭಿನಂದನೆ ಸಲ್ಲಿಸಿದರು.

ವಿಶ್ವ ಕುಂದಾಪುರ ಮಾತನಾಡುತ್ತಾ, 1983ರಲ್ಲಿ ಮಾರ್ಕ್ಸ್ ಮರಣ ಶತಾಬ್ದಿಯನ್ನು ವಿದ್ಯಾರ್ಥಿ ನಾಯಕನಾಗಿ ಆಚರಿಸಿದ ದಿನದಿಂದ ಅವರ 200ನೇ ಜನ್ಮದಿನದ ಆಚರಣೆವರೆಗೆ ಮಾರ್ಕ್ಸ್ ವಾದದ ಜತೆ ತಮ್ಮ ಒಡನಾಟದ ಪಯಣವನ್ನು ನೆನಪಿಸಿಕೊಂಡರು. "ಮಾರ್ಕ್ಸ್200–ಕ್ಯಾಪಿಟಲ್150 ಮಾಲಿಕೆ"ಯಲ್ಲಿ ಕೆಲಸ ಮಾಡಿದ್ದು ತಮಗೆ ಹೆಮ್ಮೆ ಮತ್ತು ಸಂತೋಷ ಎರಡನ್ನೂ ತಂದಿದೆ ಎಂದರು. ಪ್ಯಾರಿಸ್ ಕಮ್ಯೂನ್ ಬೂರ್ಜ್ವಾ ಪ್ರಜಾಪ್ರಭುತ್ವಗಳಿಗೂ ಉತ್ತಮ ಆಡಳಿತದ ಮಾದರಿಯಾಗಿ ಈಗಲೂ ಪ್ರಸ್ತುತವಾಗಿದೆ. ಕಮ್ಯೂನ್ ಅಧಿಕಾರಕ್ಕೆ ಬಂದ ಕೂಡಲೇ ಗಿರವಿ ಅಂಗಡಿಗಳನ್ನು ನಿಷೇಧಿಸಿತ್ತು. ಪ್ರಭುತ್ವದಿಂದ ಚರ್ಚನ್ನು, ಚರ್ಚಿನಿಂದ ಶಿಕ್ಷಣವನ್ನು ಪ್ರತ್ಯೇಕಿಸಿದ್ದು, ಎಲ್ಲರಿಗೂ ಶಿಕ್ಷಣಕ್ಕೆ ಅವಕಾಶವಿರಬೇಕು ಎಂದು ಘೋಷಿಸಿದ್ದು, ಉತ್ತಮ ಜನಪ್ರತಿನಿಧಿಗಳನ್ನು ಆರಿಸಿದ್ದು – ಹೀಗೆ ಕಮ್ಯೂನಿನ ಇತರ ಕೆಲವು ಸಾಧನೆಗಳನ್ನು ಪಟ್ಟಿ ಮಾಡಿದರು.

ಕೆ.ಎಸ್.ಪಾರ್ಥಸಾರಥಿ ಅವರು "ನುಡಿಮಿಂಚು" ಕಿರುಪುಸ್ತಕದ ಪರಿಚಯ ಮಾಡಿದರು. ಮಾರ್ಕ್ಸ್ ಅವರ ಸುಮಾರು ನೂರು ಆಯ್ದ ಹೇಳಿಕೆಗಳ ಪುಸ್ತಕವಿದು. ಮಾರ್ಕ್ಸ್ ಕೃತಿಗಳ ಅಧ್ಯಯನ ಮಾಡಲು ಸಮಯವಿಲ್ಲದ ಅಥವಾ ಅನುಕೂಲವಿಲ್ಲದ ಚಳುವಳಿಯ ಕಾರ್ಯಕರ್ತರಿಗೆ ಅವರ ದೈನಂದಿನ ಕೆಲಸದಲ್ಲಿ ಆಯುಧವಾಗಬಲ್ಲ ಹೇಳಿಕೆಗಳ ಸಂಗ್ರಹವಿದು. ಇದನ್ನು ಪಾಕೆಟ್ ಬುಕ್ ಮಾದರಿಯಲ್ಲಿ ರೂಪಿಸಲಾಗಿದೆ ಎಂದು ಅವರು ಹೇಳಿದರು.

ಎರಡೂ ಪ್ರಕಾಶನ ಸಂಸ್ಥೆಗಳನ್ನು ಜತೆಗೂಡಿಸಿ "ಮಾರ್ಕ್ಸ್200–ಕ್ಯಾಪಿಟಲ್150 ಮಾಲಿಕೆ"ಯ ಯೋಜನೆಗೆ ಚಾಲನೆ ನೀಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಎಸ್. ರೆಡ್ಡಿ ಮತ್ತು ಯೋಜನೆಗೆ ಮಾರ್ಗದರ್ಶನ ಮಾಡುತ್ತಿರುವ ಡಾ. ಜಿ. ರಾಮಕೃಷ್ಣ ಅವರು ಗೋಷ್ಠಿಯ ಕೊನೆಯಲ್ಲಿ ಮಾತನಾಢಿದರು. ಅವರ ಮಾತುಗಳ ಪ್ರಮುಖ ಅಂಶಗಳು ಬಾಕ್ಸಿನಲ್ಲಿವೆ.

ಎಂ.ಎಸ್.ಕೃಷ್ಣನ್ ಟ್ರಸ್ಟಿನ ಜಿ. ಬಾಬು ವಂದನಾರ್ಪಣೆ ಸಲ್ಲಿಸಿದರು. ಮೈತ್ರಿ ಗೋಷ್ಠಿಯ ನಿರೂಪಣೆ ಮಾಡಿದರು.



ಪ್ಯಾರಿಸ್ ಕಮ್ಯೂನಿನ ಬಗ್ಗೆ ವಿಡಿಯೊ ಪ್ರದರ್ಶನ

ಪುಸ್ತಕ ಬಿಡಗಡೆ ಆರಂಭವಾಗುವ ಮೊದಲು ಪ್ಯಾರಿಸ್ ಕಮ್ಯೂನಿನ ಬಗ್ಗೆ ಐದು ಸ್ಫೂರ್ತಿದಾಯಕ ವಿಡಿಯೊಗಳನ್ನು ತೋರಿಸಲಾಯಿತು. ಇವೆಲ್ಲವೂ ಯೂ ಟ್ಯೂಬಿನಲ್ಲಿ ಲಭ್ಯವಾಗಿವೆ.

1. LA Commune, Paris 1871 - Peter Watkins (2000) (Extract) (5 mins)

https://www.youtube.com/watch?v=HGjbZ2USeSM

ಇದು ಕಮ್ಯೂನ್ ಬಗ್ಗೆ ಚಾರಿತ್ರಿಕ ಘಟನೆಗಳನ್ನು ಮರುಸೃಷ್ಟಿ ಮಾಡಿದ ಪ್ರಸಿದ್ಧ ನಿರ್ದೇಶಕ ಪೀಟರ್ ವಾಟ್ಕಿನ್ಸ್ ಅವರ ದೀರ್ಘ ಡಾಕ್ಯುಮೆಂಟರಿ ಫಿಲಂ ಒಂದರ ತುಣುಕು. ಪ್ಯಾರಿಸ್ ಕಮ್ಯೂನಿನ ಚುನಾವಣೆ ನಂತರದ ರೋಚಕ ವಿಜಯೋತ್ಸವದ ಸ್ಫೂರ್ತಿದಾಯಕ ದೃಶ್ಯ.

2. Marx on Commune de Paris (7 mins)

https://www.youtube.com/watch?v=krwYkVXhH7w

'ಮಾರ್ಕ್ಸ್ ಇನ್ ಸೊಹೊ' ಎಂಬ ದೀರ್ಘ ನಾಟಕದ ಒಂದು ಭಾಗ. ಕಮ್ಯೂನ್ ಬಗ್ಗೆ ಮಾರ್ಕ್ಸ್ ತನ್ನ ವಿಶ್ಲೇಷಣೆ ಕೊಡುವ ಭಾಗ. ಪುಸ್ತಕದ ಸಾರಾಂಶ ಇದ್ದಂತಿದೆ.

3. The Paris Commune: Our First Revolution (14 mins)

https://www.youtube.com/watch?v=zXlHGseyvfw

ಜಗತ್ತಿನ ಮೊದಲ ಕಾರ್ಮಿಕ ಕ್ರಾಂತಿ ಎಂದು ಪ್ರಸಿದ್ಧವಾದ ಪ್ಯಾರಿಸ್ ಕಮ್ಯೂನಿನ ಹಿನ್ನೆಲೆ, ಘಟನಾವಳಿ ಮತ್ತಿತರ ಮಾಹಿತಿ ಕೊಡುವ ಅನಿಮೇಟೆಡ್ ಭಾಗಗಳಿರುವ ವಿಡಿಯೋ

4. Unlearned lessons of the Paris Commune. (3 mins)

https://www.youtube.com/watch?v=tDwzml6YlL0

ಈಗ ಪ್ಯಾರಿಸ್ ಸಹ ಮರೆತಿರುವ ಪ್ಯಾರಿಸ್ ಕಮ್ಯೂನ್ ಬಗ್ಗೆ ರಶ್ಯ ಟುಡೆ ಟಿವಿ ವಾಹಿನಿಯ ಕಿರು ಸುದ್ದಿಚಿತ್ರ

5. National Anthem of the Paris Commune (1871) - "La Marseillaise de la Commune" (English Subtitles) - 3 mins

https://www.youtube.com/watch?v=ACmfRDAoMTk

ಪ್ಯಾರಿಸ್ ಕಮ್ಯೂನಿನ 'ರಾಷ್ಟ್ರಗೀತೆ' ಹಾಡಿನ ಸಂಗಿತದ ಜತೆ ಸಚಿತ್ರ ವಿಡಿಯೋ

ಕಮ್ಯೂನಿನಿಂದ ಜಂಟಿ ಹೋರಾಟದ ಪಾಠ........... ಪುಟ 9 ರಿಂದ

ತತ್ವಶಾಸ್ತ್ರದ್ಲ ಜತೆ ಶೂದ್ರನ ಸ್ಥಾನಮಾನ ಏನಿರಬೇಕು ಎಂಬ ಮತಧರ್ಮದ ಪ್ರಣಾಳಿಕೆಯನ್ನು ಮಿಶ್ರ ಮಾಡಲಾಗಿದೆ. ಒಂದು ಸಂಗತಿಯನ್ನು ವಸ್ತುನಿಷ್ಟವಾಗಿ ಕಾರ್ಯ–ಕಾರಣ ಸಂಬಂಧವಿರುವ ಘಟಕವಾಗಿ ವ್ಯಾಖ್ಯಾನಿಸದಿದ್ದರೆ ಅಂತಹ ತಿಳುವಳಿಕೆ ಹೇಗೆ ಅಪೂರ್ಣವಾಗುತ್ತದೆ ಎಂಬುದನ್ನು ಈ ಕೃತಿಯಲ್ಲಿ ತೋರಿಸಿಕೊಡಲಾಗಿದೆ. ಅದಕ್ಕೆ ಪರಿಹಾರವಾಗಿ ಚಾರಿತ್ರಿಕ ಭೌತವಾದವನ್ನು ಇದರಲ್ಲಿ ಆಮೂಲಾಗ್ರವಾಗಿ ಪೀಠಿಕಾ ರೂಪದಲ್ಲಿ ಮೊತ್ತ ಮೊದಲನೆಯ ಬಾರಿಗೆ ನಿರೂಪಣೆ ಮಾಡಿದ್ದು ಈ ಪುಸ್ತಕದಲ್ಲಿ, ಎಂದು ಡಾ. ಜಿ.ಆರ್. ವಿವರಿಸಿದರು.

ಮಾರ್ಕ್ಸ್‌ವಾದ ಅಧ್ಯಯನ ಮಾಡಿದವರೆಲ್ಲರೂ ಕಮ್ಯುನಿಸ್ಟರಾಗಿರುವುದಿಲ್ಲ. ಆಗಬೇಕು. ಈಗಲೂ ಮಾರ್ಕ್ಸ್‌ವಾದ ಗೊತ್ತಿಲದೆ ವೈಚಾರಿಕವಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ (ಉದಾಹರಣೆಗೆ ಇತಿಹಾಸದ ವ್ಯಾಖ್ಯಾನದಲ್ಲಿ) ವೈಜ್ಞಾನಿಕವಾಗಿ ಕೆಲಸ ಮಾಡಿದ ಹಲವರು ನಿಲುವು ಮಾರ್ಕ್ಸ್‌ವಾದಿ ನಿಲುವಿಗೆ ಹತ್ತಿರ ಬರುತ್ತದೆ. ಅಷ್ಟರಮಟ್ಟಿಗೆ ಮಾರ್ಕ್ಸ್‌ವಾದ ವೈಜ್ಞಾನಿಕವಾಗಿದೆ. ಕಮ್ಯುನಿಸ್ಟರಾಗಿಯೂ ಮಾರ್ಕ್ಸ್‌ವಾದ ಅಧ್ಯಯನ ಮಾಡದವರೂ ಅನೇಕರಿದ್ದಾರೆ.

ಸೆಪ್ಟೆಂಬರ್ 14 ರಂದು ಕ್ಯಾಪಿಟಲ್ ಸಂಪುಟ 1ನ್ನು ಗಾಂಧಿ ಭವನದಲ್ಲಿ ಅಲ್ಲ ಬಿಡುಗಡೆ ಮಾಡಬೇಕಾದ್ದು. ಅದನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಇನ್ನೂ ಹೆಚ್ಚು ಜನರನ್ನು ಮುಟ್ಟುವಂತೆ ಮಾಡಬೇಕು ಎಂದು ಡಾ. ಜಿ.ಆರ್. ಕರೆ ಕೊಟ್ಟರು.

ಪ್ರಸ್ತುತ ಸಮಾಜದಲ್ಲಿ ಸಮಾನತೆ, ಸಾಮರಸ್ಯ ಮತ್ತು ದಾರಿದ್ರ್ಯರಹಿತ ಸಮಾಜವನ್ನು ಕಟ್ಟಲು ಅನೇಕ ಪ್ರಗತಿಪರ ಚಿಂತಕರು ಮತ್ತು ಹೋರಾಟಗಾರರು ಬಂಡವಾಳವಾದವನ್ನು ವಿರೋಧಿಸುತ್ತಲೇ ಬುದ್ಧ, ಬಸವ, ಗಾಂಧಿ, ಲೋಹಿಯಾ, ಅಂಬೇಡ್ಕರ್‌ಪ್ರಣೀತ ಸಮಾಜವಾದವಾದಗಳ, 'ದೇವರು ಮೆಚ್ಚುವ ಸಮಾಜವಾದ'ದ ತಾತ್ವಿಕತೆಗಳನ್ನು ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗಿ ಮಂಡಿಸುತ್ತಾರೆ. ರಾಜಕೀಯ ಸಂಘರ್ಷಗಳನ್ನು ಹೊರಗಿಟ್ಟು ಸಮನ್ವಯ, ಸಂಯೋಜನೆ ಮತ್ತು ಸಹಕಾರಗಳ ಮೂಲಕ ಹೊಸ ಸಮಾಜವನ್ನು ಕಟ್ಟಬೇಕೆಂದು ಕರೆಕೊಡುತ್ತಾರೆ. ಕೆಲವರು ಇನ್ನೂ ಮುಂದೆ, (ಅಥವಾ ಹಿಂದೆ ಹೋಗಿ) ಬಂಡವಾಳವಾದ ಮತ್ತು ಸಮತಾವಾದ ಎರಡರಲ್ಲೂ ಇರುವ ಕೆಟ್ಟದ್ದನ್ನು ಬಿಟ್ಟು ಎರಡರಲ್ಲೂ ಇರುವ ಒಳ್ಳೆಯದನ್ನು ತೆಗೆದುಕೊಂಡು, ಬಂಡವಾಳವಾದ, ಸಮತಾವಾದ ಎರಡೂ ಅಲ್ಲದ 'ಮಾನವೀಯ ಉದಾರವಾದೀ ಪ್ರಜಾತಾಂತ್ರಿಕ ದೈವಸಹಿತ ಸಮಾಜವನ್ನು' ಕಟ್ಟಬಯಸುತ್ತಾರೆ. ಯಂತ್ರನಾಗರಿಕತೆಯನ್ನು ಬಂಡವಾಳಶಾಹಿಗಳ ಅಮಾನವೀಯ ವೈಭವೋಪೇತ ಜೀವನಕ್ರಮದೊಂದಿಗೆ ಸಮೀಕರಿಸಿ, ಶೋಷಣೆಯ ಪ್ರತ್ಯಕ್ಷಫಲವಾದ ಜನಸಾಮಾನ್ಯರ ದಾರಿದ್ರ್ಯವನ್ನು ಎಲ್ಲರಿಗೂ ಅಗತ್ಯವಾದ ಸರಳ ಬದುಕೆಂದು ಆದರ್ಶೀಕರಿಸುವ, 21ನೇ ಶತಮಾನದ ಡಿಜಿಟಲ್ ಯುಗದಲ್ಲಿ ಬದುಕುತ್ತಿರುವ ಇಂಥವರ ಧೋರಣೆ–ವಿಚಾರಗಳಿಗೂ 19ನೇ ಶತಮಾನದ ಪ್ರೂಧೋನ್‌ರ ಧೋರಣೆ–ವಿಚಾರಗಳಿಗೂ ಆಶ್ಚರ್ಯವೆನಿಸುವಷ್ಟು ಸಾಮ್ಯವಿದೆ. ಆದ್ದರಿಂದ 170 ವರ್ಷಗಳ ಹಿಂದೆ ಮಾರ್ಕ್ಸ್ ಪ್ರೂಧೋನ್‌ರ ಧೋರಣೆ–ವಿಚಾರಧಾರೆಯ ಬಗ್ಗೆ ಮಾಡಿದ ವಿಮರ್ಶೆ ನಮ್ಮ ಕಾಲದ 'ಪ್ರೂಧೋನ್'ಗಳಿಗೂ ಅನ್ವಯವಾಗುತ್ತದೆ.

ಮಾರ್ಕ್ಸ್ ಅವರ 'ತತ್ತ್ವಶಾಸ್ತ್ರದ ದಾರಿದ್ರ್ಯ' ಮತ್ತು ಪ್ರಸಕ್ತ ಸಮಾಜ

ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ

ಪ್ರೂಧೋನ್ ನ ಹಿನ್ನೆಲೆ

ಕಾರ್ಲ್ ಮಾರ್ಕ್ಸ್‌ನ **ತತ್ತ್ವಶಾಸ್ತ್ರದ ದಾರಿದ್ರ್ಯ** ಗ್ರಂಥದ ರಚನೆಗೆ ಪ್ರಚೋದನೆಯಾದದ್ದು 1847 ರಲ್ಲಿ ಪ್ಯೇರ್ ಜೋಸೆಫ್ ಪ್ರೂಧೋನ್ ಬರೆದ **ಆರ್ಥಿಕ ವೈರುಧ್ಯಗಳ ವ್ಯವಸ್ಥೆ** ಅಥವಾ **ದಾರಿದ್ರ್ಯದ ತತ್ತ್ವಶಾಸ್ತ್ರ** ಎಂಬ ಗ್ರಂಥ.


19ನೇ ಶತಮಾನದ ಫ್ರಾನ್ಸಿನಲ್ಲಿ ಹುಟ್ಟಿ ಬೆಳೆದು ಅಲ್ಲಿನ ರಾಜಕೀಯ ಆಲೋಚನೆಗಳ ಪ್ರಮುಖ ಅಂಗವಾಗಿದ್ದ ಪ್ರೂಧೋನ್ ರೈತಕುಟುಂಬದಿಂದ ಬಂದವರು. ಅವರ ಚಿಂತನೆಯನ್ನು ಗ್ರಾಮೀಣ–ರೈತ–ಬಡತನದ ಹಿನ್ನಲೆ ಮತ್ತು ಅನುಭವಗಳು ಬಾಲ್ಯದಿಂದಲೂ ಗಾಢವಾಗಿ ಪ್ರಭಾವಿಸಿದ್ದವು. ಅವರು ಪ್ರತಿಪಾದಿಸುವ ಆದರ್ಶಸಮಾಜವು ರೈತರು ಮತ್ತು ಕುಶಲಕರ್ಮಿಗಳು, ಶಾಂತಿ–ಸಮಾಧಾನಗಳಿಂದ ಸರಳ ಬದುಕಿನ ಘನತೆಯಲ್ಲಿ ಬದುಕುವಂಥ ಆಧ್ಯಾತಿಕ ದೃಷ್ಟಿಕೋನದ ವ್ಯಕ್ತಿಕೇಂದ್ರಿತ ಸಮಾಜ. ಅವರ ದೃಷ್ಟಿಯಲ್ಲಿ ಆಡಂಬರ, ಸಿರಿವಂತಿಕೆ ಮತ್ತು ವೈಭವೋಪೇತ ಜೀವನ ಸಂಪೂರ್ಣವಾಗಿ ಅನಪೇಕ್ಷಿತವಾದದ್ದು.

ಬಡತನದ ಕಾರಣದಿಂದಾಗಿ ಹರೆಯದಲ್ಲಿ ಮುದ್ರಕನಾಗಿ ಜೀವನೋಪಾಯವನ್ನು ಕಂಡುಕೊಂಡ ಪ್ರೂಧೋನ್ ಅಗಾಧವಾದ ಬೌದ್ಧಿಕ ಹಸಿವನ್ನು ಇರಿಸಿಕೊಂಡವರು. ಹೀಗಾಗಿ ತಾವೇ ಸ್ವಂತವಾಗಿ ಲ್ಯಾಟಿನ, ಗ್ರೀಕ್ ಮತ್ತು ಹಿಬ್ರ್ಯೂ ಭಾಷೆಗಳನ್ನು ಕಲಿತು ಆ ಮೂಲಕ ಸ್ವಂತ ಅಧ್ಯಯನದಿಂದ ಸಾಕಷ್ಟು ಪಾಂಡಿತ್ಯಗಳಿಸಿಕೊಂಡು ಆ ಕಾಲದ ಫ್ರೆಂಚ್ ಉದಾರವಾದಿಗಳು ಮತ್ತು ಸಮಾಜವಾದಿಗಳ ಸಂಪರ್ಕಕ್ಕೆ ಬಂದರು. ಕಾಲ್ಪನಿಕ ಸಮಾಜವಾದಿಯಾದ ಚಾರ್ಲ್ಸ್ ಫರಿಯರ್ ಒಂದುರೀತಿಯಲ್ಲಿ ಅವರ ಗುರು. ಪ್ರೂಧೋನ್ ತಮ್ಮ ಪಾಂಡಿತ್ಯಪೂರ್ಣ ಫ್ರೆಂಚ್‌ಭಾಷೆಯ ಬಳಕೆಯಿಂದಾಗಿ ಸಮಕಾಲೀನ ಫ್ರೆಂಚ್ ಲೇಖಕರ ಮನ್ನಣೆಗೂ ಪಾತ್ರರಾದರು.

ಪ್ರೂಧೋನ್ ಮೊದಲು ಬರೆದ ಪುಸ್ತಕ 'ಆಸ್ತಿ ಎಂದರೇನು?' ಎಂಬುದು. ತಮ್ಮನ್ನು 'ಅರಾಜಕತಾವಾದಿ' (ಅಂದರೆ 'ಪ್ರಭುತ್ವರಹಿತ ಸಮಾಜ'ದಲ್ಲಿ ನಂಬಿಕೆಯಿಟ್ಟವರು) ಎಂದು ಘೋಷಿಸಿಕೊಂಡವರು. ಆಸ್ತಿ ಎಂಬುದು ಚೌರ್ಯ ಎಂದರು. ಆಸ್ತಿ ತನ್ನಷ್ಟಕ್ಕೇ ಕೆಟ್ಟದ್ದಲ್ಲ, ಅದು ಮತ್ತೊಬ್ಬರ ಶ್ರಮವನ್ನು ಶೋಷಿಸಿದರೆ ಮಾತ್ರ ಕೆಟ್ಟದ್ದು. ರೈತರು, ಕುಶಲಕರ್ಮಿಗಳು ದುಡಿಯುವಾಗ ಅವರ ಉಪಕರಣಗಳನ್ನು ಮುಕ್ತವಾಗಿ ಬಳಸುವುದಕ್ಕೆ ಅಗತ್ಯವಾದ ಸ್ವಾತಂತ್ರ್ಯವನ್ನು ಆಸ್ತಿಯು ಕೊಡುತ್ತದೆ ಎಂಬುದು ಆಸ್ತಿಯ ಪರವಾಗಿರುವ ಅವರ ವಾದ. ಕಾಲ್ಪನಿಕ ಸಮತಾವಾದವಾದ (ಯುಟೋಪಿಯಾ), ಮಾರ್ಕ್ಸ್ ಪ್ರತಿಪಾದಿಸಿದ ವೈಜ್ಞಾನಿಕ ಸಮತಾವಾದವಾಗಲಿ ಎರಡೂ ಈ ಸ್ವಾತಂತ್ರ್ಯವನ್ನು, ಅಂದರೆ ಉತ್ಪಾದನಾ ಸಾಧನಗಳಮೇಲಿನ ರೈತ–ಕುಶಲಕರ್ಮಿಗಳ ನಿಯಂತ್ರಣವನ್ನು ಕಿತ್ತುಕೊಳ್ಳುತ್ತವೆ ಎಂಬುದು ಅವರ ಆಕ್ಷೇಪ.

ಪ್ರಭುತ್ವರಹಿತ ಸಮಾಜವನ್ನು ಪ್ರತಿಪಾದಿಸುವ ತಮ್ಮ ಪುಸ್ತಕಗಳಲ್ಲಿನ ಅಭಿಪ್ರಾಯಗಳಿಂದಾಗಿ ಪ್ರೂಧೋನ್ ಎರಡುಸಲ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕಾಯಿತು. ಆದರೆ ಅವರ ವಿಚಾರಗಳು ನ್ಯಾಯಾಧೀಶರಿಗೆ ಅರ್ಥವಾಗಲಿಲ್ಲವಾದ್ದರಿಂದ ಜೈಲಾಗುವುದು ತಪ್ಪಿತು!

1843ರಲ್ಲಿ ಪ್ರೂಧೋನ್‌ರಿಗೆ 'ಪರಸ್ಪರವಾದಿಗಳು' ಎಂಬ ನೇಕಾರರ ರಹಸ್ಯ ಸಂಘಟನೆಯ ಪರಿಚಯವಾಯಿತು. ಆಗತಾನೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಶ್ರಮಿಕ ಸಂಘಟನೆಗಳು ಕಾರ್ಖಾನೆಗಳನ್ನು ತಾವೇ ನಡೆಸಬೇಕು. ಸಮಾಜವನ್ನು ಹಿಂಸಾತ್ಮಕ ಕ್ರಾಂತಿಯ ಬದಲು ಆರ್ಥಿಕ ಕ್ರಮಗಳ ಮೂಲಕ ಬದಲಾಯಿಸಬಹುದು ಎಂದು ಈ ಪರಸ್ಪರವಾದಿಗಳು ಪ್ರತಿಪಾದಿಸುತ್ತಿದ್ದರು. ಪ್ರೂಧೋನ್ ತಮ್ಮ 'ದಾರಿದ್ರ್ಯದ ತತ್ತ್ವಶಾಸ್ತ್ರ'ದಲ್ಲಿ ಪ್ರತಿಪಾದಿಸುವುದು ಬಂಡವಾಳಶಾಹಿ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಒಳಗೇ ಇಂಥ 'ಪರಸ್ಪರವಾದೀ ಪ್ರಭುತ್ವರಹಿತ ಸಮಾಜ'ವನ್ನು.



ಕಾರ್ಲ್ ಮಾರ್ಕ್ಸ್ ಪ್ಯಾರಿಸ್ಸಿನಲ್ಲಿದ್ದಾಗ ಅವರಿಗೆ ಪ್ರಭುತ್ವರಹಿತ ಸಮಾಜದ ಪ್ರತಿಪಾದಕರಾದ ಬಕುನಿನ್ ಮತ್ತು ಪ್ರೂಧೋನ್‌ರ ಭೇಟಿಯಾಯಿತು. ಪ್ಯಾರಿಸ್ಸಿನಿಂದ ಉಚ್ಚಾಟಿತರಾಗಿ ಮಾರ್ಕ್ಸ್ ಬ್ರಸೆಲ್ಸ್‌ನಲ್ಲಿ ಇದ್ದಾಗ ಅಧ್ಯಯನ, ಸಂಶೋಧನೆ ಮತ್ತು ಪ್ರಖರ ಚಿಂತನೆಗಳ ಮೂಲಕ ತಮ್ಮ ಚಿಂತನೆಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಾ ತಮ್ಮ ಮಹತ್ವದ ಬರವಣಿಗೆಗಳಿಗೆ ಅಗತ್ಯವಾದ ತಯಾರಿಯನ್ನು ಮಾಡಿಕೊಳ್ಳುತ್ತಿದ್ದ ಕಾಲ ಅದು. ಜರ್ಮನರಿಗೆ ಸ್ವಾಭಾವಿಕವೆನಿಸುವಂಥ ತತ್ತ್ವಶಾಸ್ತ್ರದ ವಿದ್ಯಾರ್ಥಿಯಾಗಿ, ಭಾವನಾವಾದಿ ಹೆಗೆಲ್‌ರಿಂದ ಗತಿತಾರ್ಕಿಕತೆಯನ್ನು, ಫಾಯರ್‌ಬಾಕ್‌ರಿಂದ ಭೌತವಾದವನ್ನು, ರಿಕಾರ್ಡೋ ಮೊದಲಾದ ಬೂರ್ಷ್ವಾ ಅರ್ಥಶಾಸ್ತ್ರಜ್ಞರಿಂದ ರಾಜಕೀಯ ಅರ್ಥಶಾಸ್ತ್ರವನ್ನು ಅರಗಿಸಿಕೊಂಡು ಅವುಗಳ ಭಾವನಾವಾದಿ ಮತ್ತು ಬಂಡವಾಳಶಾಹಿ ಮಿತಿಗಳನ್ನು ಕಳಚಿ ಗತಿತಾರ್ಕಿಕಭೌತವಾದದ ನೆಲೆಗಟ್ಟಿನಲ್ಲಿ ವೈಜ್ಞಾನಿಕ ಸಮಾಜವಾದವನ್ನು ಪ್ರತಿಪಾದಿಸಲು ಸಜ್ಜಾಗಿದ್ದ ಕಾಲ. ಸಾಮಾಜಿಕ ಬದಲಾವಣೆಯ ಗಂಭೀರ ಆಸಕ್ತಿ ಮತ್ತು ಉದ್ದೇಶಗಳಲ್ಲಿ ಸಮಾನ ಅಂಶಗಳನ್ನು, ಆದರೆ ವೈಚಾರಿಕ ಹಿನ್ನೆಲೆ, ದೃಷ್ಟಿಕೋನ, ವಿಶ್ಲೇಷಣೆ ಮತ್ತು ತೀರ್ಮಾನಗಳಲ್ಲಿ ಭಿನ್ನತೆಯನ್ನು ಹೊಂದಿದ್ದ ಮಾರ್ಕ್ಸ್ ಮತ್ತು ಪ್ರೂಧೋನ್ ಹೊತ್ತು ಗೊತ್ತುಗಳ ಪರಿವೆಯಿಲ್ಲದೆ ಪರಸ್ಪರ ಕಲೆತು ಚರ್ಚೆ ನಡೆಸಿದ್ದರು. ಅದು 1844 ರಲ್ಲಿ ಮಾರ್ಕ್ಸ್ ಪ್ಯಾರಿಸ್‌ನಲ್ಲಿ ಇದ್ದಾಗ.

ಆ ನಂತರದ ದಿನಗಳಲ್ಲಿ ಪತ್ರವ್ಯವಹಾರದ ಮೂಲಕ ಅವರಿಬ್ಬರ ನಡುವೆ ನಡೆದ ಚರ್ಚೆಗಳಲ್ಲಿ ಅವರಿಬ್ಬರ ಭಿನ್ನಾಭಿಪ್ರಾಯಗಳು ತೀವ್ರವಾಗುತ್ತಾ ಹೋದವು. ಪ್ರೂಧೋನ್ ತಮ್ಮ ಗ್ರಂಥ 'ದಾರಿದ್ರ್ಯದ ತತ್ತ್ವಶಾಸ್ತ್ರ'ವನ್ನು ಅವರ ಪ್ರಕಾಶಕರ ಮೂಲಕ ಮಾರ್ಕ್ಸ್‌ರಿಗೆ ಕಳಿಸಿಕೊಟ್ಟರು. ಅದನ್ನು ಎರಡೇ ದಿನಗಳಲ್ಲಿ ಓದಿ ಮುಗಿಸಿದ ಅವರು ಪ್ಯಾರಿಸ್‌ನಲ್ಲಿದ್ದ ತಮ್ಮ ಮಿತ್ರ ಪಿ. ವಿ. ಅನೆಂಕೋವ್ ಅವರಿಗೆ ಬರೆದ ಪತ್ರದಲ್ಲಿ ಪ್ರೂಧೋನ್‌ರ ಶೈಲಿಯನ್ನು ಮೆಚ್ಚಿಕೊಳ್ಳುತ್ತಾ ಅವರ ಆದರ್ಶದ ಪೊಳ್ಳುತನವನ್ನು, ಅವರ ವೈಚಾರಿಕತೆಯ ಗಂಭೀರ ಮಿತಿಗಳನ್ನು, ಅವರು ಬೆಳೆಸುವ ವಾದಗಳಲ್ಲಿನ ಬಾಲಿಶತನವನ್ನು ಎಲ್ಲರಿಗೂ ಈಗಾಗಲೇ ಗೊತ್ತಿರುವ ವಿಷಯಗಳನ್ನು ತಾವೇ ಹೊಸದಾಗಿ ಕಂಡುಕೊಂಡೆವೆನ್ನುವ ಅವರ ಅಜ್ಞಾನವನ್ನು, ತಮ್ಮ ಪಾಂಡಿತ್ಯಪ್ರದರ್ಶನಕ್ಕಾಗಿ ಜರ್ಮನ್ ತತ್ತ್ವಶಾಸ್ತ್ರದ ಅರೆಬರೆಜ್ಞಾನವನ್ನು ಬಳಸಿಕೊಳ್ಳುವ ಡಾಂಭಿಕತನವನ್ನು, ಮತ್ತು ಪ್ರಸಕ್ತ ಸಮಾಜವನ್ನು ಅದರ ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲಾಗದ ಅವರ ಅಸಾಮರ್ಥ್ಯವನ್ನು ಕುರಿತು 'ಸಂಕ್ಷೇಪವಾಗಿ' ಬರೆಯುತ್ತಾರೆ. ಮತ್ತೊಂದು ಕಾಗದದಲ್ಲಿ ಈ ಬಗ್ಗೆ ವಿಶದವಾಗಿ ಬರೆಯುತ್ತೇನೆಂದು ಕಾಗದ ಮುಗಿಸುತ್ತಾರೆ. ಆದರೆ ಈ ಕಾಗದವೇ ಮಾರ್ಕ್ಸ್ ರ 'ತತ್ತ್ವಶಾಸ್ತ್ರದ ದಾರಿದ್ರ್ಯ' ದ ವಸ್ತುವಿನ ಸಾರಂಶ ರೂಪದಂತಿದೆ.

ಪುಸ್ತಕದ ವಸ್ತು

ಮಾರ್ಕ್ಸ್ ಪ್ರೂಧೋನ್‌ರ 'ದಾರಿದ್ರ್ಯದ ತತ್ತ್ವಶಾಸ್ತ್ರ' ಗ್ರಂಥಕ್ಕೆ ತಮ್ಮ ಪ್ರತಿಕ್ರಿಯೆಯಾಗಿಯೂ, ಮತ್ತು ಮುಂದೆ, 'ಬಂಡವಾಳ' ಗ್ರಂಥದಲ್ಲಿ ವಿಶದವಾಗಿ ನಿರೂಪಿಸಬೇಕಾದ ವೈಜ್ಞಾನಿಕ ಸಮಾಜವಾದೀ ರಾಜಕೀಯ ಅರ್ಥಶಾಸ್ತ್ರದ ಪ್ರಧಾನ ಅಂಶಗಳಾದ ಮೌಲ್ಯದ ನಿರ್ವಚನ, ಶ್ರಮಕಾಲದ ಮಹತ್ವ, ಶ್ರಮಶಕ್ತಿ, ಸಾಮಾಜಿಕಉತ್ಪಾದನೆ, ವಿನಿಮಯ, ಮಿಗುತಾಯ ಶ್ರಮ, ಮಿಗುತಾಯ ಮೌಲ್ಯ, ಉತ್ಪಾದನೆಯ ಚಾರಿತ್ರಿಕ ಘಟ್ಟಗಳು ಮತ್ತು ವರ್ಗಸಂಘರ್ಷಗಳಿಗೆ ಸಂಬಂಧಿಸಿದ ತಾತ್ವಿಕ ಮತ್ತು ಆರ್ಥಿಕ ವಿಚಾರಗಳ ಪ್ರತಿಪಾದನೆಯಾಗಿಯೂ 'ತತ್ತ್ವಶಾಸ್ತ್ರದ ದಾರಿದ್ರ್ಯ'ವನ್ನು ಬರೆದರು. ಈ ಕಾರಣಕ್ಕಾಗಿ ಇದು ಮಾರ್ಕ್ಸ್‌ರ ಮಹತ್ವಪೂರ್ಣ ಕೃತಿಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಅಗತ್ಯವಾದ ಪೂರ್ವಭಾವಿ ಕೃತಿಗಳಲ್ಲೊಂದು. 'ಕ್ಯಾಪಿಟಲ್'ನ ಭ್ರೂಣವೆನ್ನಬಹುದಾದ ಗ್ರಂಥ. ಲೆನಿನ್ ಹೇಳುವಂತೆ 'ಪ್ರಬುದ್ಧ ಮಾರ್ಕ್ಸ್‌ವಾದದ ಮೊದಲ ಕೃತಿ'.

ಒಟ್ಟು 9 ಅಧ್ಯಾಯಗಳಿರುವ ಪ್ರೂಧೋನ್‌ರ ಸುಧೀರ್ಘ ಕೃತಿ, 'ದಾರಿದ್ರ್ಯದ ತತ್ತ್ವಶಾಸ್ತ್ರ' ದೇವರ ಬಗೆಗಿನ ದೀರ್ಘ ಪ್ರಸ್ತಾವನೆಯೊಂದಿಗೆ ಪ್ರಾರಂಭವಾಗುತ್ತದೆ. ಈ ಪ್ರಸ್ತಾವನೆಯ ಒಟ್ಟು ತಾತ್ಪರ್ಯವೇನೆಂದರೆ ಧಾರ್ಮಿಕ ಮೂಲದ ದೇವರ ನಂಬಿಕೆಯ ಬದಲು ಮನುಷ್ಯ ಪ್ರಜ್ಞೆಯು ಒಪ್ಪಲಾಗದ–ತಿರಸ್ಕರಿಸಲೂ ಆಗದ ಅಗೋಚರ ಶಕ್ತಿಯನ್ನಾಗಿ ಪುರಸ್ಕರಿಸುವ ಆಧ್ಯಾತ್ಮಿಕತೆಯು 'ಪ್ರಭುತ್ವರಹಿತ ಸಮಾಜ'ಕ್ಕೆ ಬೇಕು.

ಪ್ರೂಧೋನ್ ಒಟ್ಟು 9 ಅಧ್ಯಾಯಗಳಲ್ಲಿ ಮಂಡಿಸುವ ವಿಚಾರಗಳು, ನಂಬಿಕೆಗಳು, ಗ್ರಹಿಕೆಗಳು, ವಾದಸರಣಿ ಮತ್ತು ತೀರ್ಮಾನಗಳ ಬಗ್ಗೆ ಪ್ರತಿಕ್ರಿಯೆಯಾಗಿ ಮಾರ್ಕ್ಸ್, ತಮ್ಮ ವಿಚಾರಗಳನ್ನು ಎರಡು ಭಾಗಗಳ 8 ಅಧ್ಯಾಯಗಳಲ್ಲಿ ಮಂಡಿಸಿದ್ದಾರೆ.

ವೈಜ್ಞಾನಿಕ ಸಂಶೋಧನೆ ಎಂಬ ಮೊದಲನೆಯ ಅಧ್ಯಾಯದಲ್ಲಿ–

1. ಉಪಯೋಗಮೌಲ್ಯ ಮತ್ತು ವಿನಿಮಯ ಮೌಲ್ಯಗಳ ವೈರುಧ್ಯ

2. ಸಂಯೋಜಿತ ಮೌಲ್ಯ ಮತು ಸಂಶ್ಲೇಷಿತ ಮೌಲ್ಯ

3. ಮೌಲ್ಯದ ಅನುಪಾತತೆಯ ನಿಯಮದ ಅನ್ವಯತೆ

ಎಂಬ ಮೂರು ಭಾಗಗಳಿವೆ.

ರಾಜಕೀಯ ಅರ್ಥಶಾಸ್ತ್ರದ ಆಧ್ಯಾತ್ಮಿಕತೆ ಎಂಬ ಎರಡನೆಯ ಅಧ್ಯಾಯದಲ್ಲಿ

1. ವಿಧಾನ

2. ಶ್ರಮವಿಭಜನೆ ಮತ್ತು ಯಂತ್ರೋಪಕರಣ

3. ಸ್ಪರ್ಧೆ ಮತ್ತು ಏಕಸ್ವಾಮ್ಯ

4. ಆಸ್ತಿ ಅಥವಾ ನೆಲಗಂದಾಯ

5. ಮುಷ್ಕರಗಳು ಮತ್ತು ಶ್ರಮಿಕರ ಸಂಯೋಗಗಳು

ಎಂಬ ಐದು ಭಾಗಗಳಿವೆ.

ಮಾರ್ಕ್ಸ್ ತಮ್ಮ ಗ್ರಂಥಕ್ಕೆ ಪ್ರೂಧೋನ್‌ರ ಗ್ರಂಥದ ಶೀರ್ಷಿಕೆಯನ್ನೇ ತಿರುವು ಮುರುವು ಮಾಡಿ **'ತತ್ತ್ವಶಾಸ್ತ್ರದ ದಾರಿದ್ರ್ಯ'** ಎಂಬ ಹೆಸರು ಕೊಟ್ಟಿದ್ದಾರೆ. ವ್ಯಕ್ತಿ, ಶ್ರಮಶಕ್ತಿ ಮತ್ತು ಸರಕಿನ ಮೌಲ್ಯದ ನಿರ್ವಚನ, ಉತ್ಪಾದನಾ ಸಾಧನಗಳು–ವಿಧಾನಗಳು–ಉತ್ಪಾದನಾ ಸಂಬಂಧಗಳಿಗಿರುವ ಪರಸ್ಪರತೆ, ಸಮಾಜದ ಸಂಘಟನೆಗೂ ಅದರ ಚಾರಿತ್ರಿಕತೆಗೂ ಇರುವ ನಿಕಟ ಸಂಬಂಧ, ಚರಿತ್ರೆಯ ಗತಿತಾರ್ಕಿಕ ವಿಶ್ಲೇಷಣೆ, ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಶಕ್ತಿಗಳು, ಸಮಾಜವಾದೀ ಆದರ್ಶಸಮಾಜ, ಕಾಲ್ಪನಿಕ ಸಮಾಜವಾದ ಮತ್ತು ಅರ್ಥಶಾಸ್ತ್ರ, ವೈಜ್ಞಾನಿಕತೆ ಮುಂತಾದ ಮೂಲಭೂತ ಅಂಶಗಳ ಬಗೆಗೆ ಪ್ರೂಧೋನ್ ಅವರಿಗಿರುವ ತಪ್ಪುಗ್ರಹಿಕೆಗಳನ್ನು ಮತ್ತು ಅಜ್ಞಾನವನ್ನು ಈ ಶೀರ್ಷಿಕೆಯು ಲೇವಡಿಮಾಡುತ್ತದೆ. ಪುಸ್ತಕದ ತಮ್ಮ ಕಿರು ಮುನ್ನುಡಿಯಲ್ಲಿ ಮಾರ್ಕ್ಸ್, ಪ್ರೂಧೋನ್‌ರನ್ನು ಕೆಟ್ಟ ತತ್ತ್ವಶಾಸ್ತ್ರಜ್ಞ, ಕೆಟ್ಟ ಅರ್ಥಶಾಸ್ತ್ರಜ್ಞ ಎರಡೂ ಹೌದು ಎಂದು ಲೇವಡಿಮಾಡುತ್ತಾರೆ. ಗ್ರಂಥದುದ್ದಕ್ಕೂ ಪ್ರೂಧೋನ್‌ರ ಅಜ್ಞಾನ, ಅರೆಬೆಂದ ತಿಳುವಳಿಕೆಯಿಂದ ಹುಟ್ಟಿದ ವಿಚಾರಗಳನ್ನು ವಿಮರ್ಶಿಸುತ್ತಾ ಸಮಾಜ, ಶ್ರಮಶಕ್ತಿ ಮತ್ತು ಉತ್ಪಾದನಾ ಸಂಬಂಧಗಳು, ಕೈಗಾರಿಕಾ ಉತ್ಪಾದನೆ, ಮೌಲ್ಯ ಮತ್ತು ವಿನಿಮಯ ಮೌಲ್ಯ ಕುರಿತಾದ ವಿಚಾರಗಳಲ್ಲಿರಬೇಕಾದ ಸ್ಪಷ್ಟತೆಗಳನ್ನು ಮಾರ್ಕ್ಸ್ ಎತ್ತಿತೋರಿಸುತ್ತಾರೆ.

'ಮಡಿಕೆಯ ಮಾಡುವರೆ, ಮಣ್ಣೇ ಮೊದಲು'. ಇದು ಬಸವಣ್ಣನವರ ವಚನದ ಒಂದು ಸಾಲು. ಹಾಗೆಯೇ ಕಾರ್ಲ್ ಮಾರ್ಕ್ಸ್ ಮನುಷ್ಯನ ಅಸ್ತಿತ್ವ ಮೊದಲು, ಚರಿತ್ರೆ ಆಮೇಲೆ ಎನ್ನುತ್ತಾರೆ. ಎಲ್ಲಾ ಸರಕುಗಳ ಮಧ್ಯದ ವಿನಿಮಯಗಳಿಗೂ ಮೂಲ ವಿನಿಮಯವು ಶ್ರಮಶಕ್ತಿ ಮತ್ತು ಹಣದ ನಡುವೆ

ಪುಟ 15 ನೋಡಿ

ಅಚ್ಛೇ ದಿನ್‌ಗಳ 'ವ್ಯಾಪಾರ ಸುಗಮತೆ' ಮತ್ತು ತೂತುಕುಡಿಯಲ್ಲಿ 13 ಬಲಿ



ಮೇ 22 ರಂದು ಪೋಲೀಸರ ಸ್ನೈಪರುಗಳು, ಅಸಾಲ್ಟ್ ರೈಫಲ್‌ಗಳು 11 ಪ್ರತಿಭಟನಾಕಾರರ ಬಲಿ ತೆಗೆದುಕೊಂಡ ನಂತರ ಮೇ 23ರಂದು ಮದ್ರಾಸ್ ಹೈಕೋರ್ಟ್ ವೇದಾಂತ ಗುಂಪಿನ ಸ್ಟೆರ್ಲೈಟ್‌ನ ತಾಮ್ರದ ಅದುರು ಕರಗಿಸುವ ಸ್ಥಾವರದ ವಿಸ್ತರಣೆಗೆ ತಡೆಯಾಜ್ಞೇ ನೀಡಿದೆ. ಅದನ್ನು ಪುನರಾರಂಭಿಸುವ ಮೊದಲು ಸಾರ್ವಜನಿಕ ಸಮಾಲೋಚನೆ ನಡೆಸಬೇಕೆಂದೂ ಹೇಳಿದೆ ಎಂದು ವರದಿಯಾಗಿದೆ. ಹಾಗೆ ಹೇಳುತ್ತಿರುವಂತೆ ತೂತುಕುಡಿಯಲ್ಲಿ ಇನ್ನೆರಡು ಜೀವಗಳು ಬಲಿಯಾಗಿವೆ.

ವಾಸ್ತವವಾಗಿ ತಾನು ಸಾರ್ವಜನಿಕ ಸಮಾಲೋಚನೆ ನಡೆಸಬೇಕಾಗಿಲ್ಲ ಎಂಬ ಈ ಕಂಪನಿಯ ನಿಲುವಿನಿಂದಾಗಿಯೇ ಈ ಪ್ರತಿಭಟನೆಗಳ ಇತ್ತೀಚಿನ ಘಟ್ಟ 100ದಿನಗಳ ಹಿಂದೆ ಆರಂಭವಾದದ್ದು, ಮತ್ತು ಈ ಕಂಪನಿ ಅಂತಹ ನಿಲುವು ತಳೆಯಲು ನೆರವಾದ್ದು ಈಗಿನ ಎನ್‌ಡಿಎ ಸರಕಾರ ಎಂಬುದು ಗಮನಾರ್ಹ.(ನಿತಿನ್ ಸೇಥಿ, ಬಿಸಿನೆಸ್ ಸ್ಟಾಂಡರ್ಡ್, ಮೇ 24).


ತಾನು ಸಾರ್ವಜನಿಕ ಸಮಾಲೋಚನೆ ನಡೆಸಬೇಕಾಗಿಲ್ಲ ಎಂಬ ನಿಲುವು ತಳೆದಿದ್ದ ಈ ಕಂಪನಿ ತನ್ನ ಸ್ಥಾವರದ ವಿಸ್ತರಣೆಗೆ 2014ರಲ್ಲಿ ಅನುಮತಿ ಕೇಳಿದಾಗ ಯುಪಿಎ–2 ಸರಕಾರ ಪರಿಸರ ಕಾಯ್ದೆಯ ಪ್ರಕಾರ ಸಾರ್ವಜನಿಕ ಸಮಾಲೋಚನೆ ನಡೆಸಿ ಸಾರ್ವಜನಿಕ ಒಪ್ಪಿಗೆ ಪಡೆಯಲು ಹೇಳಿತ್ತು. ಆದರೆ ಅಚ್ಛೇ ದಿನ್‌ಗಳ ಮೊದಲ ತಿಂಗಳಲ್ಲೇ ಕೇಂದ್ರದ ಪರಿಸರ ಮಂತ್ರಾಲಯ ಈ ಬಗ್ಗೆ ಒಂದು 'ಸ್ಪಷ್ಟೀಕರಣ' ಪ್ರಕಟಿಸಿ ಸಾರ್ವಜನಿಕ ಸಮಾಲೋಚನೆ ನಡೆಸಬೇಕಾಗಿಲ್ಲ ಎಂಬ ವೇದಾಂತದ ನಿಲುವಿಗೆ ಸಮ್ಮತಿ ಸೂಚಿಸಿ ಡಿಸೆಂಬರ್ 2018ರ ವರೆಗೆ ಪರಿಸರ ಅನುಮತಿಯನ್ನು ವಿಸ್ತರಿಸಿತು.

ಈ ಸ್ಥಾವರದಿಂದ ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದ ಜನ ಸತತವಾಗಿ ಇದನ್ನು ವಿರೋಧಿಸಿಕೊಂಡು ಬಂದಿದ್ದಾರೆ ಎಂಬುದು ಈಗ ಎಲ್ಲರಿಗೂ ತಿಳಿದಿರುವ ಸಂಗತಿ.

ಒಂದೆಡೆ ಅಚ್ಛೇ ದಿನ್‌ಗಳ ಈ ಆಡಳಿತಾತ್ಮಕ 'ಸ್ಪಷ್ಟೀಕರಣ'ದ ಊರ್ಜಿತತೆಯ ಬಗ್ಗೆ ಸಂದೇಹಗಳು ವ್ಯಕ್ತವಾದರೆ, ಇನ್ನೊಂದೆಡೆಯಲ್ಲಿ ದೊಡ್ಡ ಉದ್ದಿಮೆದಾರರ ಸಂಸ್ಥೆ ಸಿಐಐ ನಿಂದ ಇದು ಈ ಸರಕಾರದ ಒಂದು ಭಾರೀ ಮಹತ್ವದ ಆರ್ಥಿಕ ಸುಧಾರಣೆ, ಈಸ್ ಆಫ್ ಬಿಸಿನೆಸ್‌ನ ಅಂದರೆ ಸುಗಮ ವ್ಯಾಪಾರಕ್ಕೆ ಅನುವು ಮಾಡಿ ಕೊಡುವ ಒಂದು ಪ್ರಮುಖ ಕ್ರಮ, ಎಂದು ಸರ್ಟಿಫಿಕೇಟ್ ಕೂಡ ನೀಡಿತು. ಅಚ್ಛೇ ದಿನ್‌ವಾಲಾಗಳು ಕೂಡ ಇದೊಂದು ಅಂತರ್ರಾಷ್ಟ್ರೀಯ ಮಟ್ಟದಲ್ಲಿ 'ಈಸ್ ಆಫ್ ಬಿಸಿನೆಸ್' ಶ್ರೇಯಾಂಕದಲ್ಲಿ ನಮ್ಮ ದೇಶ ಮೇಲಕ್ಕೆ ಜಿಗಿಯುವಂತೆ ಮಾಡಿದ ತಮ್ಮ ಪ್ರಮುಖ ಸಾಧನೆ ಎಂದು ಹೇಳಿಕೊಳ್ಳುತ್ತಿದ್ದಾರೆ.

ಇನ್ನೊಂದು ಕಡೆ, ವೇದಾಂತ ಬೂರ್ಜ್ವಾ ರಾಜಕೀಯ ಪಕ್ಷಗಳ ಮಟ್ಟಿಗೆ ಕೊಡುಗೈ ದಾನಿಗಳು. ಈಗಿನ ಅಳುವ ಪಕ್ಷ ಮತ್ತು ಹಿಂದಿನ ಆಳುವ ಪಕ್ಷ ಎರಡೂ ಇದರ ದೊಡ್ಡ ಫಲಾನುಭವಿಗಳು. ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಪ್ರಕಾರ ಈ ರೀತಿ ವಂತಿಗೆ ಪಡೆಯುವುದು ಕಾನೂನುಬಾಹಿರ ಎಂದು ಮಾರ್ಚ್ 2014ರಲ್ಲಿ ದಿಲ್ಲಿ ಹೈಕೋರ್ಟ್ ತೀರ್ಪು ನೀಡಿ ಈ ಎರಡೂ ಪಕ್ಷಗಳ ವಿರುದ್ಧ ಕ್ರಮ ವಹಿಸುವಂತೆ ಚುನಾವಣಾ ಆಯೋಗಕ್ಕೆ ಹೇಳಿತು. ಈ ಎರಡೂ ಪಕ್ಷಗಳು ಸುಪ್ರಿಂ ಕೋರ್ಟಿಗೆ ಅಪೀಲು ಹೋದವು. ಈ ನಡುವೆ ಅಚ್ಛೇದಿನ್ ಸರಕಾರ 'ವಿದೇಶಿ ಕಂಪನಿ ಎಂಬ ನಿರೂಪಣೆಯನ್ನೇ ತಮಗೆ ಅನುಕೂಲವಾಗುವಂತೆ ಬದಲಿಸುವ ತಿದ್ದುಪಡಿಯನ್ನು ಎಫ್‌ಸಿಆರ್‌ಎ ಗೆ 2016ರ ಹಣಕಾಸು ಮಸೂದೆಯಲ್ಲಿ ಸೇರಿಸಿತು. ಆದರೆ ಅದೂ 2010ರ ಹಿಂದಿನ ವಂತಿಗೆಗಳಿಗೆ 'ರಕ್ಷಣೆ ಕೊಡದಾದಾಗ ಮತ್ತೆ 2018ರ ಹಣಕಾಸು ಮಸೂದೆಯಲ್ಲಿ ಮತ್ತೊಂದು ತಿದ್ದುಪಡಿ ಸೇರಿಸಿ ಕಾನೂನುಬಾಹಿರ ಆಗಿದ್ದುದನ್ನು ಕಾನೂನುಬದ್ಧಗೊಳಿಸಲಾಯಿತು. ರಾಜ್ಯಸಭೆಯಲ್ಲಿ ವಿರೋಧವನ್ನು ತಪ್ಪಿಸಲು ಹಣಕಾಸು ಮಸೂದೆಯ ಮಾರ್ಗ ಹಿಡಿಯಲಾಯಿತು ಎಂದು ಬೇರೆ ಹೇಳಬೇಕಾಗಿಲ್ಲ.

13 ಜನಗಳನ್ನು ವಿದೇಶಿ ಕಂಪನಿಯ ಈಗ ಕಾನೂನುಬಾಹಿರ ಎಂದಾಗಿರುವ ಕ್ರಮ ಬಲಿ ತೆಗೆದುಕೊಂಡರೂ ದೇಶದ ಪ್ರಧಾನ ಮಂತ್ರಿಗಳು ಮತ್ತು ಆಳುವ ಪಕ್ಷ ಚಕಾರವೆತ್ತಿಲ್ಲ ಏಕೆ ಎಂಬುದಕ್ಕೆ ಉತ್ತರ ಇಲ್ಲಿ ಸಿಗುತ್ತದೆ. ಚಕಾರವೆತ್ತಿಲ್ಲ ಮಾತ್ರವಲ್ಲ, ತಮಿಳುನಾಡಿನಲ್ಲಿ 'ಭಕ್ತರು'ಗಳು ಪೋಲೀಸ್ ಗೋಳಿಬಾರನ್ನು ಸಮರ್ಥಿಸಿಕೊಳ್ಳುವ ಹುಸಿ ಸುದ್ದಿಗಳನ್ನು ಹರಿಯ ಬಿಡುತ್ತಿದ್ದಾರೆ. ಇನ್ನೊಂದೆಡೆಯಲ್ಲಿ ಗೋಲೀಬಾರ್ ವೇಳೆ ಪೋಲೀಸ್ ವ್ಯಾನಿನಿಂದ ಸಮವಸ್ತ್ರದಲ್ಲಿಲ್ಲದ ವ್ಯಕ್ತಿಯೊಬ್ಬ ಅತ್ಯಾಧುನಿಕ ಅಸಾಲ್ಟ್ ರೈಫಲ್‌ನಿಂದ ಗುಂಡು ಹಾರಿಸುತ್ತಿದ್ದ ಎಂದೂ ವರದಿಯಾಗಿದೆ. ಸತ್ತವರಲ್ಲಿ ಕನಿಷ್ಟ ಅರ್ಧದಷ್ಟು ಮಂದಿ ಈ ಪ್ರತಿಭಟನೆಯ ಸಂಘಟಕರು ಎಂಬ ಸಂಗತಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ನ್ಯಾಯಾಂಗ ತನಿಖೆಯಲ್ಲಿ ಇವೆಲ್ಲ ಬಯಲಿಗೆ ಬರಬಹುದು ಎಂಬ ನಿರೀಕ್ಷೆಯೂ ಇತ್ತೀಚಿನ ದಿನಗಳ ಕಟು ಅನುಭವಗಳಿಂದಾಗಿ ಹಲವರಲ್ಲಿ ಉಳಿದಿಲ್ಲ.



ವೆದಾಂತ ಮಾಲಕರು, ಕೇಂದ್ರ ಸರಕಾರ ಮತ್ತು ರಾಜ್ಯಸರಕಾರದ ಶಾಮೀಲನ್ನು ಸೂಚಿಸುವ ಈ ಚಿತ್ರ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಗ್ರಾಮೀಣ ಕೂಲಿದರ ಹೆಚ್ಚಳ ಈ ಮೂರು ವರ್ಷಗಳಲ್ಲೇ ಅತಿ ಕಡಿಮೆ!

ಗ್ರಾಮೀಣ ಆದಾಯಗಳನ್ನು 2022 ರೊಳಗೆ ದ್ವಿಗುಣಗೊಳಿಸುವುದು ಈ ಸರಕಾರದ ಹಲವಾರು ಆಶ್ವಾಸನೆಗಳಲ್ಲಿ ಒಂದು.. ಅಂದರೆ ವರ್ಷಕ್ಕೆ ಸುಮಾರು 20% ದರದಲ್ಲಿ ಹೆಚ್ಚಳವಾಗಬೇಕು. ಆದರೆ ಈ ಸರಕಾರ ಬಂದ ಮೇಲೆ ಗ್ರಾಮೀಣ ಕೂಲಿಯ ಬೆಳವಣಿಗೆ ದರ ಅದಕ್ಕೆ ಅನುಗುಣವಾಗಿ ಹೆಚ್ಚುವ ಬದಲು ಇಳಿದಿದೆ. ಅದೀಗ ಕಳೆದ ಮೂರು ವರ್ಷಗಳಲ್ಲಿ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ. ಜನವರಿ 2018ರಲ್ಲಿ ಅದು 3.09%ಕ್ಕೆ ಇಳಿದಿದೆ ಎಂದು ವರದಿಯಾಗಿದೆ.

ಒಂದು ವರ್ಷದ ಕೆಳಗೆ ಜನವರಿ 2017ರಲ್ಲಿ ಅದು 6.57%. ಇತ್ತು. ಈಗ 3.09% ಅಂದರೆ ಹಣದುಬ್ಬರ ದರವನ್ನು ತಗೊಂಡರೆ ವಾಸ್ತವವಾಗಿ ನಿಜಕೂಲಿ ಏರುವ ಬದಲು ಇಳಿದಿದೆ. ಅದರಲ್ಲೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರ ಕೂಲಿ ದರದಲ್ಲಿ ಏರಿಕೆ ಕೇವಲ 1.67%. ಜನವರಿ 2018ರಲ್ಲಿ ಇವರ ಸರಾಸರಿ ಕೂಲಿ ಸಪ್ಟಂಬರ್ 2017ರಲ್ಲಿ ಇದ್ದುದಕ್ಕಿಂತಲೂ ಕಡಿಮೆ. ಇಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವವರ ಪಾಡು ತುಸು ವಾಸಿ. 3.61%. ಆದರೂ ದ್ವಿಗುಣಗೊಳ್ಳುವ ನಿರೀಕ್ಷೆ ಬಹುದೂರದ್ದು. ಏನಿದರ ಅರ್ಥ? ಒಂದೋ ಗ್ರಾಮೀಣ ಉದ್ಯೋಗಗಳಿಗೆ ಬೇಡಿಕೆ ಕಡಿಮೆಯಾಗಿದೆ, ಅಥವ ಉದ್ಯೋಗಾವಕಾಶಗಳೇ ಕಡಿಮೆಯಾಗಿವೆ. ಇವುಗಳಲ್ಲಿ ಯಾವುದು ನಿಜವಾದರೂ ಅದು ಗ್ರಾಮೀಣ ಆರ್ಥಿಕ ಸಂಕಟದ ಸೂಚಕವೇ ಆಗಿದೆ ಎನ್ನುತ್ತಾರೆ ಪರಿಣಿತರು(ಮಾನಸ ಚಕ್ರವರ್ತಿ, ಲೈವ್‌ಮಿಂಟ್, ಮೇ 21)

ಗಂಡಸರಿಗೆ ಹೋಲಿಸಿದರೆ ಹೆಂಗಸರ ಸ್ಥಿತಿ ಉತ್ತಮವಾಗಿದೆ ಎಂಬದು ಅಂಕಿ–ಅಂಶಗಳು ಮೇಲ್ನೋಟಕ್ಕೆ ತೋರಿಸುವ ಸಂಗತಿ ಎನ್ನುತ್ತಾರೆ ಇವರು. ಅದು ಜನವರಿ 2017ರಲ್ಲಿ 7.79% ಇತ್ತು. ಅಂದರೆ ಹಣದುಬ್ಬರವನ್ನು ಲೆಕ್ಕಕ್ಕೆ ತಗೊಂಡರೂ ಆದಾಯಗಳಲ್ಲಿ ತುಸು ಹೆಚ್ಚಳ ಆಗಿದೆ. ಆದರೆ ಇನ್ನು ಸ್ವಲ್ಪ ಆಳಕ್ಕೆ ಹೋದರೆ ಇಲ್ಲಿಯೂ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಕಳೆದ ವರ್ಷ ಹೆಚ್ಚಳ ದರ ಕೇವಲ 1.38% ಇದ್ದುದೇ ಈ ವರ್ಷ ಅದು ಬಹಳ ಹೆಚ್ಚಾದಂತೆ ಕಾಣಲು ಕಾರಣ.

ಒಟ್ಟಿನಲ್ಲಿ ಈ ಅಂಕಿ–ಅಂಶಗಳು ದೃಢಪಡಿಸುವ ಸಂಗತಿಯೆಂದರೆ ಗ್ರಾಮೀಣ ಭಾರತದಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ.

ಆದರೂ ಹಲವು ಕಂಪನಿಗಳು ಗ್ರಾಮೀಣ ಬಳಕೆದಾರರ ನಡುವೆ ತಮ್ಮ ವ್ಯವಹಾರಗಳು ಗಮನಾರ್ಹ ಬೆಳವಣಿಗೆ ತೋರಿಸುತ್ತವೆ ಎನ್ನುತ್ತಿದ್ದಾರೆ. ಅಂದರೆ ಇದು ಗ್ರಾಮೀಣ ಸಮಾಜದಲ್ಲೂ ಹೆಚ್ಚುತ್ತಿರುವ ಅಸಮಾನತೆಯ ಸೂಚಕವೇ? ಎಷ್ಟೆಂದರೂ ಗ್ರಾಮೀಣ ಬಡವರು ಉದ್ಯೋಗ ರಂಗದಲ್ಲಿನ ಮೀಸಲು ಪಡೆಯ ಒಂದು ಮುಖ್ಯ ವಿಭಾಗ ತಾನೇ ಎನ್ನುತ್ತಾರೆ ಈ ಪರಿಣಿತರು. ಅವರಿಗೆ ಪೂರ್ಣಕಾಲದ ಉದ್ಯೋಗ ಇಲ್ಲ ಎಂದರೆ, ಶ್ರೀಮಂತರಿಗೆ ಕಡಿಮೆ ಕೂಲಿಯಲ್ಲಿ ಕೆಲಸಗಾರರು ಸಿಗುತ್ತಾರೆ, ಅವರ ಇತರ ಬಳಕೆಗೆ ಹೆಚ್ಚು ಹಣ ಉಳಿಯುತ್ತದೆ ಎಂದೂ ಅರ್ಥ ತಾನೇ?

ಇಂತಹ ಧೋರಣೆಯಿಂದ ಅಚ್ಛೇ ದಿನ್‌ಗಳು ಸಾಧ್ಯವೇ? ಆದರೆ ಅದು ಈಗಾಲೇ ಒಂದು 'ಜುಮ್ಲಾ' ಆಗಿರುವಾಗ(ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಅದು ನಾಪತ್ತೆಯಾಗಿತ್ತು) ಈ ಪ್ರಶ್ನೆಯೇ ನಾಲ್ಕು ವರ್ಷಗಳ ನಂತರ ಅಪ್ರಸ್ತುತ!

ಅಚ್ಛೇ ದಿನ್‌ಗಳಲ್ಲಿ ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ನೆನಪಿಸಬೇಕಾಗಿದೆಯೇ?

ನಾಲ್ಕು ವರ್ಷಗಳ ಅಚ್ಛೇದಿನ್‌ಗಳ ನಂತರ ಚುನಾವಣಾ ಆಯೋಗದ ಮಾಜಿ ಆಯುಕ್ತರುಗಳಿಗೂ ಹಾಗನಿಸಿರುವಂತೆ ಕಾಣುತ್ತದೆ. ಕಳೆದ ವಾರ ಎಂಟು ನಿವೃತ್ತ ಮುಖ್ಯ ಚುನಾವಣಾ ಆಯುಕ್ತರುಗಳು ಮತ್ತು ಇನ್ನೊಬ್ಬ ಚುನಾವಣಾ ಆಯುಕ್ತರು ಹಾಲಿ ಮುಖ್ಯ ಚುನಾವಣಾ ಆಯುಕ್ತರು ಮತ್ತು ಆಯೋಗದ ಉಳಿದಿಬ್ಬರು ಸದಸ್ಯರುಗಳನ್ನು ಭೇಟಿಯಾದ ಸುದ್ದಿ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿದೆ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ಚುನಾವಣೆಗಳ ದಿನಾಂಕಗಳನ್ನು ನಿಗದಿ ಪಡಿಸುವಲ್ಲಿ ಆಗಿದ್ದ ಚುನಾವಣಾ ಆಯುಕ್ತರ ನಡೆ ವಿವಾದಾಸ್ಪದವಾಗಿದ್ದರೆ, ಆಮ್ ಆದ್ಮಿ ಪಕ್ಷದ ಶಾಸಕರ ಸದಸ್ಯತ್ವವನ್ನು ರದ್ದು ಮಾಡಿರುವುದನ್ನು ದಿಲ್ಲಿ ಹೈಕೋರ್ಟ್ ಕೂಡ ಟೀಕಿಸಿತು.

ಈಗಿನ ದಿನಗಳಲ್ಲಿ ಚುನಾವಣಾ ಆಯೋಗ ಸರಕಾರದ ಕೈಗೊಂಬೆಯಾಗುತ್ತಿದೆಯೇ ಎಂಬ ಪ್ರಶ್ನೆ ಈ ಭೇಟಿಯಲ್ಲಿ ಎದ್ದಿತು ಎನ್ನಲಾಗಿದೆ. ಈ ಪ್ರಶ್ನೆ ನ್ಯಾಯಬದ್ಧವಾಗಿರಲಿ, ಅಥವ ಆಗಿಲ್ಲದಿರಲಿ, ಚುನಾವಣಾ ಆಯೋಗ ಈ ಪ್ರಶ್ನೆಯ ಬುಡಕ್ಕೆ ಹೋಗಿ, ಏಕಿದು ಹೀಗೆ ಎಂದು ನೋಡಿ ಅದನ್ನು ಸರಿಪಡಿಸಬೇಕು ಎಂದು ಮಾಜಿ ಚುನಾವಣಾ ಆಯುಕ್ತರುಗಳು ಸಲಹೆ ನೀಡಿರುವುದಾಗಿ ವರದಿಯಾಗಿದೆ.

ದ್ವೇಷಭಾಷಣಗಳನ್ನು ಮಾಡುವ ರಾಜಕಾರಣಿಗಳು ಮತ್ತು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಗಳನ್ನು ಗಂಭೀರವಾಗಿ ಕಂಡು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾಜಿ ಆಯುಕ್ತರುಗಳು ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ. ಚುನಾವಣಾ ಅವಧಿ ದೀರ್ಘವಾಗಿದ್ದಾಗ ದ್ವೇಷ ಭಾವನೆಯೂ ಬಹಳ ಕಾಲ ಹರಿದಾಡುತ್ತಿರುತ್ತದೆ ಎಂದು ಒಬ್ಬ ಆಯುಕ್ತರು ಟಿಪ್ಪಣಿ ಮಾಡಿದ್ದಾರಂತೆ.

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆಯ ಬೇಕೆಂಬ ತಮ್ಮ ಗೀಳನ್ನು ಸಾಕಾರಗೊಳೀಸಲು ಅಚ್ಛೇದಿನ್‌ವಾಲಾಗಳು ಶತಪ್ರಯತ್ನ ನಡೆಸುತ್ತಿರುವಾಗ ಹಾಲಿ ಚುನಾವಣಾ ಆಯುಕ್ತರುಗಳೂ ಅದೇ ಒಲವನ್ನು ವ್ಯಕ್ತಪಡಿಸುತ್ತಿರುವುದು ಪ್ರಜಾಪ್ರಭುತ್ವವಾದಿಗಳಲ್ಲಿ ಆತಂಕ ಮೂಡಿಸಿದೆ. ಇದರಲ್ಲಿನ ಕಾನೂನು ಮತ್ತು ಸಂವಿಧಾನಿಕ ತೊಡಕುಗಳನ್ನು ನೋಡಿದರೆ ಇದು ಕಾರ್ಯಸಾಧುವಾಗಲಿಕ್ಕಿಲ್ಲ ಎಂಬುದು ಮಾಜಿ ಆಯುಕ್ತರುಗಳ ಸಾಮಾನ್ಯ ಅಭಿಪ್ರಾಯ ಇರುವಂತೆ ಕಾಣುತ್ತದೆ ಎಂದೂ ವರದಿಯಾಗಿದೆ.

ಇದೇ ಸಂದರ್ಭದಲ್ಲಿ ಸುಮಾರು ಎರಡು ದಶಕಗಳ ಕಾಲ ಚುನಾವಣಾ ಆಯೋಗಕ್ಕೆ ಕಾನೂನು ಸಲಹೆಗಾರರಾಗಿದ್ದ, 53 ವರ್ಷಗಳ ಕಾಲ ಆಯೋಗದೊಂದಿಗೆ ಸಂಬಂಧವಿದ್ದ ಮತ್ತೊಬ್ಬ ಪರಿಣಿತರು ಅದರ ನಿಷ್ಪಕ್ಷಪಾತತೆಯ ಹೆಸರಿಗೆ ಕುಂದು ತರುವ ಬಗ್ಗೆ ಆತಂಕವಾಗಿದೆ, ಇತ್ತೀಚೆಗೆ ಚುನಾವಣಾ ಆಯೋಗದ ಎರಡು–ಮೂರು ನಡೆಗಳು ಇದನ್ನು ಮಾಡಿವೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಎಡಪಕ್ಷಗಳು ಇದನ್ನು ಬಹಳ ದಿನಗಳಿಂದ ಹೇಳುತ್ತ ಬರುತ್ತಿವೆ.



ನಾಲ್ಕು ವರ್ಷಗಳ ನಂತರ 'ಕಾಂಗ್ರೆಸ್‌ಮುಕ್ತ ಭಾರತ'
–ವ್ಯಂಗ್ಯಚಿತ್ರ: ಮಂಜುಲ್

ವಿಶ್ವಾಸದ್ರೋಹದ ನಾಲ್ಕು ವರ್ಷಗಳು



ಪುಟ 8 ರಿಂದ

ಉತ್ಪಾದನಾ ವೆಚ್ಚಕ್ಕಿಂತ ಒಂದುವರೆ ಪಟ್ಟಿನಷ್ಟು ಕನಿಷ್ಠ ಬೆಂಬಲ ಬೆಲೆ ಒದಗಿಸುವುದಾಗಿ ನೀಡಿದ್ದ ವಚನವನ್ನು ಅನುಷ್ಠಾನಗೊಳಿಸಲು ಸರಕಾರ ನಿರಾಕರಿಸಿರುವುದರಿಂದ, ತಾವು ಮಾಡಿದ ಸಾಲದ ಬಾಧೆ ತಾಳಲಾಗದೆ ಲಕ್ಷಾಂತರ ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ಭಾರತದ ರೈತರಿಗೆ ಒಂದೇ ಬಾರಿಯ ಸಾಲ ಮನ್ನಾ ಮಾಡಲು ಸರಕಾರ ನಿರಾಕರಿಸಿದೆ, ಆದರೆ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳ ಲಕ್ಷಾಂತರ ಕೋಟಿ ರೂಪಾಯಿ ಸಾಲಗಳನ್ನು ವಜಾ ಮಾಡಲಾಗಿದೆ. ವಿದೇಶಿ ಮತ್ತು ದೇಶೀಯ ದೊಡ್ಡ ಕಾರ್ಪೊರೇಟ್ ಕಂಪೆನಿಗಳ ಗರಿಷ್ಟ ಲಾಭಗಳಿಕೆಯ ಅವಕಾಶಗಳನ್ನು ವಿಸ್ತರಿಸಲಾಗಿದೆ. ಇದರಿಂದಾಗಿ ದೇಶದಲಿನ ಅಸಮಾನತೆ ಅಪಾಯಕಾರಿ ಮಟ್ಟದಲ್ಲಿ ಹೆಚ್ಚುತ್ತಿದೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ ಮತ್ತು ಬಡವರು ಇನ್ನಷ್ಟು ಬಡವರಾಗುತ್ತಿದ್ದಾರೆ. 2017ರಲ್ಲಿ ಉತ್ಪಾದನೆಯಾದ ಹೆಚ್ಚುವರಿ ಸಂಪತ್ತಿನ ಶೇಕಡಾ 73 ಭಾಗ ದೇಶದ ಜನಸಂಖ್ಯೆಯ ಕೇವಲ ಒಂದು ಶೇಕಡಾ ಜನರ ಪಾಲಾಗಿದೆ. ದೇಶದ ಸಂಪನ್ಮೂಲಗಳನ್ನು ಅಭೂತಪೂರ್ವ ರೀತಿಯಲ್ಲಿ ಲೂಟಿ ಮಾಡಲಾಗುತ್ತಿದೆ. ಚಮಚಾ ಬಂಡವಾಳದ ಕೈ ಮೇಲಾಗಿ ಅದುವೇ ಮೆರೆದಾಡುತ್ತಿದೆ. ಕಾರ್ಪೊರೇಟ್‌ಗಳು ಬಹುತೇಕವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ 11 ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮೊತ್ತದ ಹಣವನ್ನು ಇನ್ನೂ ವಸೂಲಿ ಮಾಡಿಲ್ಲ. ಪ್ರತಿಯೊಂದು ಮೂಲಭೂತ ಆರ್ಥಿಕ ಸೂಚಿಗಳು ಕುಸಿತ ಅಥವಾ ಸ್ಥಗಿತತೆಯನ್ನೇ ಸೂಚಿಸುತ್ತಿವೆ. ಈ ರೀತಿಯಾಗಿ, ಈ ನಾಲ್ಕು ವರ್ಷಗಳು ಜನರಿಗೆ ಅವರ ಜೀವನೋಪಾಯದ ಪರಿಸ್ಥಿತಿಗಳು ತೀವ್ರವಾಗಿ ಕುಸಿದ ವರ್ಷಗಳಾಗಿವೆ. ಸರಕಾರವು ಚಮಚಾ ಬಂಡವಾಳದ ಅತ್ಯಂತ ಕೆಟ್ಟ ಸ್ವರೂಪವನ್ನು ಅನುಸರಿಸುತ್ತಿದ್ದು ಜನರ ಮೇಲೆ ಹೊರೆಗಳು ಜಾಸ್ತಿಯಾಗುತ್ತಿವೆ.

ಕೋಮುವಾದಿ ಧ್ರುವೀಕರಣ

ಜನರ ನಡುವೆ ನಮ್ಮ ಶ್ರೀಮಂತ ಹಾಗೂ ಅನನ್ಯ ವೈವಿಧ್ಯತೆಗಳನ್ನು ಧ್ರುವೀಕರಿಸಲು ನಡೆಸಲಾಗುತ್ತಿರುವ ಸತತ ಪ್ರಯತ್ನದಿಂದಾಗಿ ದಲಿತರು ಮತ್ತು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಮಾರಣಾಂತಿಕ ಹಲ್ಲೆಗಳು ನಡೆಯುತ್ತಿವೆ. ಉತ್ತರ ಪ್ರದೇಶದಲ್ಲಿ 'ಗೋರಕ್ಷಕರು' ಎಂಬ ಹೆಸರಿನ ಖಾಸಗಿ ಸೇನೆಗಳು ಮತ್ತು 'ರೋಮಿಯೋ–ವಿರೋಧಿ ದಳ'ಗಳ ಹೆಸರಿನಲ್ಲಿ ಅನೈತಿಕ ಪೊಲೀಸ್‌ಗಿರಿ ನಮ್ಮ ಯುವಜನರು ಏನನ್ನು ತಿನ್ನಬೇಕು, ಯಾವ ಉಡುಗೆಯನ್ನು ತೊಡಬೇಕು ಹಾಗೂ ಯಾರ ಜೊತೆ ಗೆಳೆತನ ಮಾಡಬೇಕು ಎಂಬಿತ್ಯಾದಿಗಳನ್ನು ಆದೇಶ ಗಳನ್ನು ಹೊರಡಿಸುತ್ತಿವೆ. ಕೋಮುವಾದಿ ವೈರಸ್‌ನ ವಿಷ ನಮ್ಮ ಸಮಾಜವನ್ನು ಅಮಾನವೀಯಗೊಳಿಸುವ ಹಂತಕ್ಕೆ ಮುಟ್ಟಿಸಿದೆ. ಬಾಲಕಿಯರ ಮೇಲೆ ನಡೆದಿರುವ ಇತ್ತೀಚಿನ ಬರ್ಬರ ಅತ್ಯಾಚಾರಗಳು ಮತ್ತು ಕೊಲೆಗಳು ಇದಕ್ಕೆ ಉದಾಹರಣೆಗಳಾಗಿವೆ.

ಉನ್ನತ ಶಿಕ್ಷಣ–ಸಂಶೋಧನೆ ಮೇಲೆ ದಾಳಿ

ನಮ್ಮ ಸಮಾಜದ ಅಮಾನವೀಯಕರಣದೊಂದಿಗೇ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳನ್ನು ಕೋಮುವಾದಿ ನೆಲೆಯಲ್ಲಿ ನಡೆಸುವ ಮೂಲಕ ತಾರ್ಕಿಕತೆ ಮತ್ತು ವೈಚಾರಿಕತೆ ಮೇಲೆ ಹಲ್ಲೆ ನಡೆಯುತ್ತಿದೆ. ಭ?ರತೀಯ ಇತಿಹಾಸವನ್ನು ಹಿಂದೂ ಪುರಾಣಗಳ ಕಥನವಾಗಿ ಬದಲಾಯಿಸುವುದು ಈ ಪ್ರಯತ್ನದ ಉದ್ದೇಶವಾಗಿದೆ. ನಮ್ಮ ಜನತೆಯ ಚಿಂತನಾ ಪ್ರಕ್ರಿಯೆಯನ್ನು ಕೋಮುಗ್ರಸ್ತಗೊಳಿಸುವ ಈ ನಡೆಯು ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಅಸಹಿಷ್ಣು ದೈವವಾದಿ, ಫ್ಯಾಸಿಸ್ಟ್ ಮಾದರಿ 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಆರ್‌ಎಸ್‌ಎಸ್ ಪ್ರಯತ್ನಗಳಿಗೆ ಅಂಗೀಕಾರ ದೊರಕಿಸುವ ಪ್ರಯತ್ನದ ಭಾಗವಾಗಿದೆ. ಅದು ನಮ್ಮೆಲ್ಲರಿಗೆ ಈಗ ಗೊತ್ತಿರುವ ಭಾರತವನ್ನು ನಾಶ ಮಾಡುವ ಹಲ್ಲೆಯಾಗಿದೆ. 'ಸಬ್ ಕೆ ಸಾಥ್' ಬದಲು ಹಿಂದೂತ್ವ ಆಕ್ರಮಣಗಳು ಹೆಚ್ಚಿದ್ದು ದೊಡ್ಡ ಸಂಖ್ಯೆಯಲ್ಲಿ ದಲಿತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ರಾಷ್ಟ್ರೀಯ ಸಂವಾದದಿಮದ ಹೊರಗಿಡುವ ಪ್ರಕ್ರಿಯೆಗೆ ಕಾರಣವಾಗಿದ್ದನ್ನು ಈ ನಾಲ್ಕು ವರ್ಷಗಳಲ್ಲಿ ನಾವು ನೋಡಿದ್ದೇವೆ.

'ಸಬ್ ಕಾ ವಿಕಾಸ್'?

ನೇರವಾಗಿ ಆರೋಗ್ಯ ಮತ್ತು ಜನರ ಜೀವನಾಧಾರಗಳ ಆರೋಗ್ಯಕ್ಕೆ ನೇರವಾಗಿ ಸಂಬಂಧಿಸಿದ ಎಲ್ಲಾ ಸಾಮಾಜಿಕ ರಂಗಗಳಲ್ಲಿ ಕೇಂದ್ರ ಸರಕಾರ ಮಾಡುವ ವೆಚ್ಚದಲ್ಲಿ ಈ ನಾಲ್ಕು ವರ್ಷಗಳಲ್ಲಿ ಸತತವಾಗಿ ಇಳಿಕೆಯಾಗಿದೆ. ಶಿಕ್ಷಣಕ್ಕೆ ಜಿಡಿಪಿಯ ಶೇಕಡಾ 6 ವೆಚ್ಚ ಮಾಡುವುದಾಗಿ ಆಶ್ವಾಸನೆ ನೀಡಿ ಮೋದಿ ಸರಕಾರ ಅಧಿಕಾರಕ್ಕೆ ಬಂದಿತ್ತು. ಆದರೆ ಅದರ ಬದಲು ಶಿಕ್ಷಣದ ವೆಚ್ಚ ಜಿಡಿಪಿಯ ಶೇಕಡಾವಾರಿಗೆ ಹೋಲಿಸಿದರೆ 2014–15ರಲ್ಲಿ ಶೇಕಡಾ 0.55 ಇದ್ದದ್ದು 2018–19ರಲ್ಲಿ 0.45 ಶೇಕಡಾಕ್ಕೆ ಇಳಿದಿದೆ. ಕೇಂದ್ರ ಬಜೆಟ್‌ಗಳ ಶೇಕಡಾವಾರು ಲೆಕ್ಕಾಚಾರದಲ್ಲಿ ಹೇಳುವುದಾದರೆ, ಅದು 2014–15ರಲ್ಲಿ ಶೇ. 4.1 ಇದ್ದದ್ದು 2018–19ರಲ್ಲಿ ಶೇಕಡಾ 3.6ಕ್ಕೆ ಕುಸಿದಿದೆ.

ಇಡೀ ಭಾರತಕ್ಕೆ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯ ಒದಗಿಸುವ ಭರವಸೆ ಹಾಗೂ ಅಬ್ಬರದ ಪ್ರಚಾರ ಮಾಡಲಾದ 'ಸ್ವಚ್ಛ ಭಾರತ' ಘೋಷಣೆ ವಾಸ್ತವದಲ್ಲಿ ತದ್ವಿರುದ್ಧವಾಗಿದೆ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮಕ್ಕೆ ಬಜೆಟ್ ಅನುದಾನ 2014–15ರಲ್ಲಿ ಇದ್ದ 10,892 ಕೋಟಿ ರೂಪಾಯಿಗಳಿಂದ 2018–19ರಲ್ಲಿ 7,000 ಕೋಟಿ ರೂಪಾಯಿಗೆ ಇಳಿದಿದೆ, ಅಂದರೆ ಶೇಕಡಾ 36ರಷ್ಟು ಕುಸಿತವಾಗಿದೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆ 2015–16ರಲ್ಲಿ ಒಂದು ಸಮೀಕ್ಷೆ ನಡೆಸಿತ್ತು. ಅದರ ಪ್ರಕಾರ ಸ್ವಚ್ಛ ಭಾರತ ಅಭಿಯಾನದಡಿ ನಿರ್ಮಿಸಲಾದ ಪ್ರತಿ ಹತ್ತು ಶೌಚಾಲಯಗಳ ಪೈಕಿ ಆರು ಶೌಚಾಲಯಗಳಿಗೆ ನೀರಿನ ಸೌಕರ್ಯ ಇಲ್ಲ. ಇತರ ಎಲ್ಲಾ ಘೋಷಣೆಗಳಂತೆ ಇವುಗಳು ಕೂಡ ಕೇವಲ ಬೊಗಳೆಗಳಾಗಿ ಉಳಿದಿವೆ.

ಅದೇ ರೀತಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಆರೋಗ್ಯ ಕ್ಷೇತ್ರಕ್ಕೆ ನೀಡುವ ಹಣಕಾಸು ಪ್ರಮಾಣವೂ ಸಾಕಷ್ಟಿಲ್ಲ. ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳಿಗೆ ನೀಡುವ ಅನುದಾನಗಳ ಪರಿಸ್ಥಿತಿ ಅತ್ಯಂತ ಕೆಟ್ಟದ್ದಾಗಿದೆ. ಉಪ–ಯೋಜನೆಗಳಿಗೆ ಬಜೆಟ್ ಬೆಂಬಲ ಏನೇನೂ ಸಾಲದು.

ಸಂಸದೀಯ ಪ್ರಜಾಪ್ರಭುತ್ವದ ಮೇಲೆ ದಾಳಿಗಳು

ಈ ನಾಲ್ಕು ವರ್ಷಗಳಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಎಲ್ಲಾ ಸಂಸ್ತೆಗಳು ತೀವ್ರ ದಾಳಿಗೆ ಒಳಗಾಗಿವೆ. ಸರಕಾರವನ್ನು ನಿಯಂತ್ರಿಸುವ ಹಾಗೂ ಅದನ್ನು ಜವಾಬುದಾರನಾಗಿ ಮಾಡುವ ಸಂಸತ್ತಿನ ಕಾರ್ಯಭಾರವನ್ನೇ ಪೇಲವಗೊಳಿಸಲಾಗಿದೆ. ಹಿಂದೆ ಯಾವತ್ತೂ ಕೇಳದಿದ್ದ ಘಟನೆಗಳು ನಡೆಯುತ್ತಿವೆ. ಅವಿಶ್ವಾಸ ಗೊತ್ತುವಳಿಗಳ ಚರ್ಚೆಗೆ ಅವಕಾಶ ನೀಡಲಾಗುತ್ತಿಲ್ಲ. ದೂರಗಾಮಿ ಪರಿಣಾಮ ಬೀರುವ ಶಾಸನಗಳನ್ನು ರಾಜ್ಯಸಭೆಯ ಪರಿಶೀಲನೆಯನ್ನು ತಪ್ಪಿಸಲಿಕ್ಕಾಗಿ ಹಣ ಮಸೂದೆ ಮೂಲಕ ಹಿಂಬಾಗಿಲಿನಿಂದ ತರಲಾಗಿದೆ. ಚುನಾವಣೆ ಆಯೋಗ ಮೊದಲಾದ ಇತರ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳು ಅವು ನಿರ್ವಹಿಸಬೇಕಾದ ಪಾತ್ರದ ವಿಚಾರದಲ್ಲಿ ಪ್ರಶ್ನೆಗಳನ್ನು ಎದುರಿಸುವಂತಾಗಿದೆ. ದೇಶದ ಹಿಂದಿನ ಮುಖ್ಯ ಚುನಾವಣಾ ಆಯುಕ್ತರುಗಳು ಇತ್ತೀಚೆಗೆ ಸಭೆ ನಡೆಸಿ ಜನರ ಮುಂದೆ ನ್ಯಾಯಸಮ್ಮತತೆ ಮತ್ತು ತಾಟಸ್ಥ್ಯ, ನಿಷ್ಪಕ್ಷಪಾತತೆಯನ್ನು ಅನುಸರಿಸುವ ಮೂಲಕ ಈಗಿನ ಚುನಾವಣೆ ಆಯೋಗದ ವಿಶ್ವಾಸಾರ್ಹತೆಯನ್ನು ಉಳಿಸಬೇಕೆಂದು ಕರೆ ನೀಡಿರುವುದು ಇಲ್ಲಿ ಮಹತ್ವದ್ದಾಗಿದೆ. ಇದು ಆಯೋಗದ ನಡೆಯ ಬಗ್ಗೆ ಇರುವ ಪಶ್ನಾರ್ಹ ನಡೆಗೆ ಸಾಕ್ಷಿಯಾಗಿದೆ. ಎಲ್ಲಾ ತನಿಖಾ ಸಂಸ್ಥೆಗಳು ಕೇಂದ್ರ ಸರಕಾರದ ರಾಜಕೀಯ ಅಂಗಗಳಂತೆ ಕಾರ್ಯ ನಿರ್ವಹಿಸುತ್ತಿವೆ.

ಗೋವಾ, ಮಣಿಪುರ, ಮೇಘಾಲಯ ಮತ್ತು ಆನಂತರ ಬಿಹಾರದಲ್ಲಿ ಚುನಾವಣೆಗಳಲ್ಲಿ ಸೋತ ಮೇಲೆ ಅಪಾರ ಪ್ರಮಾಣದ ಹಣದ ಬಳಕೆ, ಬೆದರಿಕೆಗಳು, ದಬ್ಬಾಳಿಕೆ ಮತ್ತು ಕಿರುಕುಳಗಳ ಮೂಲಕ ಸರಕಾರಗಳನ್ನು ರಚಿಸಲು ಬಿಜೆಪಿ ಸಮರ್ಥವಾಗಿದೆ.

ಜವಾಬುದಾರ ಮತ್ತು ಭ್ರಷ್ಟಾಚಾರರಹಿತ ಸರಕಾರ ಸ್ಥಾಪಿಸುವ ಆಶ್ವಾಸನೆಗಳು ಕೂಡ ಶಿಥಿಲಗೊಂಡಿವೆ. ಭ್ರಷ್ಟಾಚಾರ ನಿರ್ಮೂಲನಕ್ಕೆ ತನ್ನ ಸರಕಾರದ ಬದ್ಧತೆ ಬಗ್ಗೆ ಪ್ರಧಾನಿ ಬಣ್ಣ ಬಣ್ಣದ ಮಾತುಗಳನ್ನಾಡುತ್ತಾರೆ. 2013ರಲ್ಲಿ ಸಂಸತ್ತು ಅಂಗೀಕರಿಸಿದ ಹಾಗೂ 2014ರಲ್ಲಿ ಪ್ರಕಟಣೆ ಮಾಡಲಾದ ಲೋಕಪಾಲ್ ಮತ್ತು ಲೋಕಾಯುಕ್ತ ಕಾನೂನುಗಳನ್ನು ಇಂದಿಗೂ ಕಾರ್ಯಗತ ಮಾಡಿಲ್ಲ. ಸರಕಾರ 2016ರಲ್ಲಿ ಮಾಡಿದ ತಿದ್ದುಪಡಿ ಪ್ರಸ್ತಾವನೆಗಳಿಂದಾಗಿ ಭ್ರಷ್ಟಾಚಾರ–ವಿರೋಧಿ ಕಾನೂನು ದುರ್ಬಲಗೊಂಡಿದೆ. ಅನ್ಯಾಯ–ಅಕ್ರಮಗಳ ಮಾಹಿತಿ ನೀಡಿ ಎಚ್ಚರಿಸುವ (ವಿಶಲ್ ಬ್ಲೋವರ್) ಜನರಿಗೆ ರಕ್ಷಣೆ ನೀಡುವ ಕಾನೂನು ಇನ್ನೂ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಅದೆಷ್ಟೋ ವಿಶಲ್ ಬ್ಲೋವರ್‌ಗಳು ಪಟ್ಟಭದ್ರರ ಆಟಗಳಿಗೆ ಬಲಿಬಿದ್ದು ಪ್ರಾಣ ಕಳೆದುಕೊಳ್ಳಬೇಕಾಗಿದೆ. ದೂರು ನಿವಾರಣೆ ಮಸೂದೆಯನ್ನು ಪುನಃ ಮಂಡಿಸಲು ಮೋದಿ ಸರಕಾರ ವಿಫಲವಾಗಿದೆ. ಮಾಹಿತಿ ಹಕ್ಕು (ಆರ್‌ಟಿಐ)ಕಾನೂನಿಗೆ ತಿದ್ದುಪಡಿ ತರಲಾಗಿದೆ. ಕೇಂದ್ರ ಮಾಹಿತಿ ಆಯೋಗದಲ್ಲಿ ಒಟ್ಟು 11 ಕಮಿಷನರ್‌ಗಳು ಇರಬೇಕು. ಆದರೆ ನಾಲ್ಕು ಸ್ಥಾನಗಳು ಖಾಲಿಯಿದ್ದು ಮುಖ್ಯ ಮಾಹಿತಿ ಆಯುಕ್ತರ ಸಹಿತ ಇನ್ನೂ ನಾಲ್ವರು 2018ರಲ್ಲಿ ನಿವೃತ್ತರಾಗಲಿದ್ದಾರೆ. ಒಟ್ಟಿನಲ್ಲಿ ಆರ್‌ಟಿಐ ಕಾನೂನನ್ನು ಸರಕಾರ ನಿಷ್ಕ್ರಿಯ ಮಾಡುತ್ತಿದೆ ಎನ್ನುವುದು ಸುಸ್ಪಷ್ಟ.

ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಕಾನೂನುಗಳಿಗೆ ತೀವ್ರ ಬದಲಾವಣೆಗಳನ್ನು ತಂದಿರುವ ಮೋದಿ ಸರಕಾರ ವಸ್ತುಶಃ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದೆ. ಚುನಾವಣಾ ಬಾಂಡ್‌ಗಳನ್ನು ಪರಿಚಯಿಸಿರುವುದರಿಂದ, ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಬದಲು ಸರಕಾರವು ಉತ್ತರದಾಯಿತ್ವವನ್ನೇ ಬಲಿಕೊಟ್ಟಿದೆ. ಹಣ ಮಸೂದೆ ಮೂಲಕ ಹಿಂಬಾಗಿಲಿನಿಂದ ತಂದ ರಾಜಕೀಯ ದೇಣಿಗೆ ಕುರಿತ ಈ ಬದಲಾವಣೆಗಳು ರಾಜಕೀಯದಲ್ಲಿ ಅದರಲ್ಲೂ ವಿಶೇಷವಾಗಿ ಚುನಾವಣೆಗಳಲ್ಲಿ ಹಣದ ಶಕ್ತಿಯ ಬಳಕೆಯನ್ನು ಕಾನೂನುಬದ್ಧಗೊಳಿಸುತ್ತದೆ.

ನಾಲ್ಕು ವರ್ಷಗಳ ಅನುಭವ

ಈ ಬಿಜೆಪಿ ಸರಕಾರ ತೊಲಗಲೇ ಬೇಕು. ಪ್ರತಿಯೊಂದು ಆಶ್ವಾಸನೆ ವಿಚಾರದಲ್ಲಿ ವಿಶ್ವಾಸದ್ರೋಹ ಮಾಡಿದ್ದಲ್ಲದೆ ಸಂಸದೀಯ ಪ್ರಜಾಪ್ರಭುತ್ವ ಮತ್ತು ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದ ಪರಿಣಾಮಕತೆಯನ್ನು ತುಚ್ಛೀಕರಿಸುತ್ತಿದೆ. ಜನತೆಯ ಜೀವನೋಪಾಯದ ಮೇಲೆ ಅಭೂತಪೂರ್ವ ರೀತಿಯಲ್ಲಿ ಆಕ್ರಮಣ ಮಾಡುತ್ತಿದೆ. ಈ ಕಾರಣಗಳಿಂದಾಗಿ ಮೋದಿ ಸರಕಾರ ತಾನು ಜನ–ವಿರೋಧಿಯೂ ಹೌದು, ಸಂವಿಧಾನ–ವಿರೋಧಿಯೂ ಹೌದು ಎನ್ನುವುದನ್ನು ತಾನಾಗಿಯೇ ತೋರಿಸಿಕೊಟ್ಟಿದೆ. ಈ ಎಲ್ಲಾ ಅಂಶಗಳಲ್ಲದೆ ಇನ್ನೂ ಅನೇಕ ಕಾರಣಗಳಿಗಾಗಿ, ಈ ಸರಕಾರದ ಉಳಿದಿರುವ ಅಂತಿಮ ವರ್ಷದಲ್ಲಿ ಈ ಎಲ್ಲಾ ಆಕ್ರಮಣಗಳ ವಿರುದ್ಧ ಜನತಾ ಚಳವಳಿಗಳನ್ನು ನಡೆಸಿ ಈ ಸರಕಾರವನ್ನು ಪದಚ್ಯುತಗೊಳಿಸುವುದನ್ನು ಖಾತರಿಪಡಿಸುವುದು ಭಾರತೀಯ ಜನತೆಯ ಮುಂದಿರುವ ಪ್ರಧಾನ ಕಾರ್ಯಭಾರವಾಗಿದೆ.

ಮತ್ತೊಂದು 'ಗೋರಕ್ಷಕ' ಕೊಲೆ, ಮತ್ತೊಬ್ಬ ದಲಿತನ ಮೇಲೆ ಅತ್ಯಾಚಾರ, ಹತ್ಯೆ

ಮೋದಿ ಸರಕಾರ ನಾಲ್ಕು ವರ್ಷಗಳನ್ನು ಪೂರೈಸುವ ಒಂದು ವಾರದಮೊದಲಷ್ಟೇ, ಮೇ 18ರಂದು ಮಧ್ಯಪ್ರದೇಶದ ಸತ್ನಾದಲ್ಲಿ ರಿಯಾಝ್ ಎಂಬಾತನನ್ನು 'ಗೋರಕ್ಷಕ'ರೆನಿಸಿ ಕೊಂಡವರು ಬಡಿದು ಸಾಯಿಸಿದ್ದಾರೆ, ಜತೆಗಿದ್ದ ಶಕೀಲ್ ಎಂಬಾತ ಗಂಭೀರವಾಗಿ ಗಾಯ ಗೊಂಡಿದ್ದಾನೆ. ಯಥಾಪ್ರಕಾರ ಇವರು ಗೋವಧೆ ಮಾಡಿದ್ದರು ಎಂಬ 'ಸಂದೇಹ'ದ ಮೇಲೆ ಗೋರಕ್ಷಕರು ಹಲ್ಲೆ ಮಾಡಿದ್ದಾರೆ. ಮತ್ತೆ, ಯಥಾಪ್ರಕಾರ, ಕೊಲೆಗಡುಕರ ಮೇಲೆ ಹಗುರವಾದ ಎಫ್‌ಐಆರ್, ಆದರೆ ಸತ್ತ ವರು ಮತ್ತು ಗಾಯಗೊಂಡವರ ಮೇಲೆ ಗೋವಧೆಯ ಗುರುತರ ಎಫ್‌ಐ ಆರ್ ಎಂದು **ಅಖಿಲ ಭಾರತ ಕಿಸಾನ್ ಸಭಾ ಇದನ್ನು ಬಲವಾಗಿ ಖಂಡಿಸಿದೆ.** ಆಸ್ಪತ್ರೆ ಸೇರಿಸಲ್ಪಟ್ಟ ರಿಯಾಝ್ ಆಸ್ಪತ್ರೆಯಿಂದ ಹೊರಬಂದ ಕೂಡಲೇ ಬಂಧಿಸಲಾಗವುದಂತೆ. ಇವರ ಕುಟುಂಬ ದವರು ಇವರು ಗೋವಧೇ ಮಾಡಿಲ್ಲ ಎಂದು ಹೇಳುತ್ತಿದ್ದಾರೆ.

ಸ್ಥಳೀಯ ಹಿಂದುತ್ವ ಶಕ್ತಿಗಳು, ಸ್ಥಳೀಯ ಆಡಳಿತದ ದುಷ್ಟಕೂಟ ಮತ್ತು ಕೋಮು ಧ್ರುವೀಕರಣದ ರಾಜಕಾರಣಿಗಳ ಒತ್ತಡ, ಕಾನೂನುಗಳನ್ನು ಕ್ರಿಮಿನಲ್‌ಗಳ ಪರವಾಗಿ ತಿರುಚುತ್ತಿವೆ ಎಂದು ಕಿಸಾನ್ ಸಭಾ ಹೇಳಿದೆ.

ಎರಡು ದಿನಗಳ ನಂತರ, ಮೇ 20ರ ಬೆಳಿಗ್ಯೆ ಪಕ್ಕದ 'ಮಾದರಿ' ರಾಜ್ಯ ಗುಜರಾತಿನ ರಾಜಕೋಟ್‌ನಲ್ಲಿ ಚಿಂದಿ ಆಯುತ್ತಿದ್ದ ಒಬ್ಬ ದಲಿತ ವ್ಯಕ್ತಿಯನ್ನು ಬಡಿದು ಸಾಯಿಸಲಾಗಿದೆ. ಸ್ಥಳೀಯ ಕಾರ್ಖಾನೆಯ ನೌಕರರು ಇದನ್ನು ಮಾಡಿದ್ದಾರೆ ಎಂದು ಸಂದೇಹಿಸಲಾಗಿದೆ. ಚಿಂದಿ ಆರಿಸುತ್ತಿದ್ದ 40 ವರ್ಷದ ಮುಕೇಶ್ ವನಿಯ ದಲಿತ ಎಂದು ದೃಢ ಪಟ್ಟ ಮೇಲೆ ಆತನನ್ನು ಮತ್ತು ಆತನ ಹೆಂಡತಿಯನ್ನು ಕಸ ಎತ್ತುವಂತೆ ಅವರು ಹೇಳಿದರಂತೆ. ಅದಕ್ಕೆ ನಿರಾಕರಿಸಿದರೆಂಬ ಸಿಟ್ಟಿನಲ್ಲಿ ಆ ಮಂದಿ ಕಬ್ಬಿಣದ ಸಲಾಕೆಗಳಿಂದ ಮುಕೇಶ್ ವನಿಯಾಗೆ ಒಂದು ಗಂಟೆಗೂ ಹೆಚ್ಚು ಕಾಲ ಬಡಿದರು. ಇದರಿಂದಾಗಿ ಆತ ಸತ್ತಿದ್ದಾನೆ ಎಂದು ತಿಳಿದು ಬಂದಿದೆ.

ಇದು ಇನ್ನೊಂದು ಅಮಾನುಷ ಹತ್ಯೆ ಎಂದು ದಲಿತ ಶೋಷಣ ಮುಕ್ತಿ ಮಂಚ್ ಬಲವಾಗಿ ಖಂಡಿಸಿದೆ. ಈ ಕೊಲೆಗಡುಕರನ್ನು ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ವಿಚಾರಣೆಗೆ ಗುರಿಪಡಿಸಬೇಕು, ಮುಕೇಶ್ ಕುಟುಂಬಕ್ಕೆ ಒಂದು ಕೋಟಿ ರೂ. ಪರಿಹಾರ ನೀಡಬೇಕು, ಪತ್ನಿಗೆ ಸರಕಾರೀ ನೌಕರಿ ಕೊಡಬೇಕು ಎಂದು ಅದು ಆಗ್ರಹಿಸಿದೆ.

ಗುಜರಾತಿನಲ್ಲಿ ದಲಿತರ ಮೇಲೆ ಇಂತಹ ಅತ್ಯಾಚಾರಗಳು ಹೆಚ್ಚುತ್ತಿವೆ, ಆದರೆ ಇಲ್ಲಿನ ಬಿಜೆಪಿ ಸರಕಾರ ಆ ಬಗ್ಗೆ ನಿರ್ಲಕ್ಷ್ಯದಿಂದ ವರ್ತಿಸುತ್ತಿದೆ ಎಂದಿರುವ ಅದು ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ಈ ಕಾಯ್ದೆ ಕುರಿತ ತನ್ನ ಆದೇಶದ ಮರುವಿಮರ್ಶೆ ಮಾಡಬೇಕು ಎಂದೂ ಆಗ್ರಹಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಗುಜರಾತ್ ಸರ್ಕಾರಕ್ಕೆ ಈಗ ನೋಟಿಸ್ ನೀಡಿದೆ ಎಂದು ವರದಿಯಾಗಿದೆ.

ಥೂಥುಕುಡಿ ಗೋಲೀಬಾರಿನ ವಿರುದ್ಧ ತಮಿಳುನಾಡಿನಾದ್ಯಂತ ಪ್ರತಿಭಟನೆ



ಮೇ 22 ರಂದು 11 ಜನರನ್ನು ಮತ್ತು ಮರುದಿನ ಮತ್ತೆ ಒಬ್ಬರನ್ನು ಬಲಿ ತೆಗೆದುಕೊಂಡ ತಮಿಳುನಾಡು ಪೋಲೀಸರ ಅಮಾನುಷ ಗೋಲೀಬಾರಿನ ವಿರುದ್ಧ ತಮಿಳುನಾಡಿನಾದ್ಯಂತ ಪ್ರತಿಭಟನೆಗಳು ನಡೆದಿವೆ.

ಬಹುರಾಷ್ಟ್ರೀಯ ಕಂಪನಿ ವೇದಾಂತ ಗುಂಪಿಗೆ ಸೇರಿದ ಸ್ಟೆರ್ಲೈಟ್ ಕಂಪನಿ ಮಹಾರಾಷ್ಟ್ರದಲ್ಲಿ ತಾಮ್ರದ ಅದುರಿನ ಸ್ಥಾವರ ತೆರೆಯಲು ಅಲ್ಲಿನ ಜನಗಳ ಸತತ ವಿರೋಧದಿಂದಾಗಿ ಸಾಧ್ಯವಾಗದಾದಾಗ ತಮಿಳುನಾಡು ಪ್ರವೇಶಿಸಿತು. ಇಲ್ಲಿಯೂ ವಿರೋಧ ಬಂದರೂ ಲೆಕ್ಕಿಸದೆ 1996ರಿಂದ ಬಂದರು ಪಟ್ಟಣವಾದ ಥೂಥುಕುಡಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಪರಿಸರ ನಿಯಮಾವಳಿಗಳನ್ನೆಲ್ಲ ಗಾಳಿಗೆ ತೂರಿ, ಜನಗಳ ಕಾನೂನು ಸಮರದ ಫಲವಾಗಿ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್ ನಿರ್ದೇಶನಗಳನ್ನೂ ಉಲ್ಲಂಘಿಸಿ ತನ್ನ ಕೆಲಸವನ್ನು ಮುಂದುವರೆಸುತ್ತಲೇ ಇದೆ. ಕೊನೆಯಿಲ್ಲದಂತೆ ಕಾಣುವ 'ಕಾನೂನು ಸಮರದಿಂದ ಬೇಸತ್ತ ಜನ ಕಳೆದ ಫೆಬ್ರುವರಿಯಿಂದ ಪ್ರತಿದಿನ ಎಂಬಂತೆ ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಮೇ 22 ಅವರ ಈ ಸತತ ಪ್ರತಿಭಟನೆಯ 100ನೇ ದಿನವಾಗಿತ್ತು. ಜನಗಳು ಜಿಲ್ಲಾ ಕಲೆಕ್ಟರ್‌ರವರನ್ನು ಭೇಟಿಯಾಗಿ ಈ ಸ್ಥಾವರವನ್ನು ಮುಚ್ಚಬೇಕೆಂಬ ತಮ್ಮ ಬೇಡಿಕೆಯನ್ನು ಒತ್ತಾಯಿಸಲು ನಿರ್ಧರಿಸಿದರು.

ಜಿಲ್ಲಾ ಕಲೆಕ್ಟರ್ ಭೇಟಿಗೆ ಅನುಮತಿ ನೀಡಲಿಲ್ಲ, ಬದಲಿಗೆ ಸೆಕ್ಷನ್ 144 ಹಾಕಿ ಮಾಯವಾದ. ಆದರೂ ಪ್ರತಿಭಟನಾಕಾರರು ಪೋಲೀಸರನ್ನು ಎದುರಿಸಿ ಜಿಲ್ಲಾ ಕಲೆಕ್ಟರ್ ಕಚೇರಿಯತ್ತ ಸಾಗಿದರು. ಪೋಲೀಸರು ತಮ್ಮ ಸ್ನೈಪರ್‌ಗಳೊಂದಿಗೆ ಸಿದ್ಧವಿದ್ದಂತೆ ಕಾಣುತ್ತದೆ. ಅವನ್ನು ಚಲಾಯಿಸಿದರು. 11 ಜನ ಬಲಿಯಾದರು. ಇವರಲ್ಲಿ ಒಬ್ಬ ಮಹಿಳೆ ಮತ್ತು 17 ವರ್ಷದ ಹುಡುಗಿಯೂ ಸೇರಿದ್ದಾರೆ.

ಇದು ಸಾಲದೆಂಬಂತೆ ಮರುದಿನ ಗೋಲೀಬಾರನ್ನು ಪ್ರತಿಭಟಿಸಿದ ಜನಗಳ ಮೇಲೆ ಆಶ್ರುವಾಯು ಪ್ರಯೋಗಿಸಿದರು, ಮತ್ತೆ ಗೋಲೀಬಾರಿನಲ್ಲಿ ಇನ್ನೊಬ್ಬ



ಯುವಕನ ಬಲಿಯಾಯ್ತು. ಗೋಲೀಬಾರ್ ಮೊದಲು ಮತ್ತು ಮಾಡುವಾಗ ವಹಿಸಬೇಕಾದಾಗ ಕ್ರಮಗಳನ್ನು ಅನುಸರಿಸದಂತೆ ಕಾಣುತ್ತಿಲ್ಲ ಎಂಬುದು ಈ ಘಟನೆಯ ವಿಡೀಯೋಗಳಿಂದ ಅನಿಸುತ್ತದೆ ಎಂದು ಹೇಳಲಾಗಿದೆ.

ಪ್ರತಿಭಟನಾಕಾರರು ಪೋಲಿಸ್ ವಾಹನಗಳನ್ನು ಸುಡುತ್ತಿದ್ದರು, ಸ್ಟೆರ್ಲೈಟ್ ಕಾಲನಿಯಲ್ಲಿ ಮನೆಗಳಿಗೆ ಬೆಂಕಿ ಹಚ್ಚುವವರಿದ್ದರು ಎಂದೆಲ್ಲ ಪೋಲೀಸರು ಸಬೂಬು ಕೊಡುತ್ತಿದ್ದಾರೆ. ಆದರೆ ಅವೆಲ್ಲ ನಂಬಲರ್ಹವಲ್ಲ ಎನ್ನಲಾಗುತ್ತಿದೆ.

ಪೋಲೀಸ್ ಸ್ನೈಪರ್‌ಗಳಿಗೆ ಬಲಿಯಾದವರೆಲ್ಲರೂ ಕಳೆದ 99 ದಿನಗಳಿಂದ ಈ ಹೋರಾಟವನ್ನು ಸಂಯೋಜಿಸುತ್ತಿದ್ದವರು ಎಂದೂ ಹೇಳಲಾಗುತ್ತಿದೆ. ಅಂದರೆ ಪೊಲೀಸರು ಗುರಿಯಿಟ್ಟು ಮಾಡಿದ ಕೆಲಸ ಇದು, ಅದನ್ನು ಸಮರ್ಥಿಸಿಕೊಳ್ಳಲು ಪ್ರತಿಭಟನಾಕಾರರು ಬೆಂಕಿ ಹಚ್ಚಿದ ಪ್ರಕರಣಗಳನ್ನು ಸೃಷ್ಟಿಸಲಾಗಿದೆ ಎಂಬ ಬಲವಾದ ಸಂದೇಹ ಹಲವರಲ್ಲಿದೆ. ಪ್ರಾಣ ಕಳಕೊಂಡವರಲ್ಲಿ ಹಲವರ ತಲೆ, ಮುಖಗಳಲ್ಲಿ ಗಾಯಗಳಾಗಿವೆ. ಗೋಲೀಬಾರ್ ಜನಗಳನ್ನು ನಿಯಂತ್ರಿಸಲು ಎಂದು ಹೇಳಲಾಗುವುದರಿಂದ ಮೊಣಕಾಲಿನ ಮೇಲೆ ಗುಂಡು ಹಾರಿಸುವಂತಿಲ್ಲ ಎಂಬ ನಿಯಮವಿದೆ ಎಂಬುದನ್ನು ಗಮನಿಸಬೇಕು.

ಸಿಪಿಐ(ಎಂ) ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಲು ಒತ್ತಾಯಿಸಿತ್ತು. ಆದರೆ ಎಐಎಡಿಎಂಕೆ ಸರಕಾರ ನಿವೃತ್ತ ನ್ಯಾಯಾಧೀಶರಿಂದ ತನಿಖೆಗೆ ನಿರ್ಧರಿಸಿದೆ. ಮತ್ತು ಅವರು ಆರಿಸಿರುವ ನ್ಯಾಯಾಧೀಶರ ವಿಶ್ವಾಸಾರ್ಹತೆಯ ಬಗ್ಗೆ ಹಲವರಿಗೆ ಸಂದೇಹಗಳಿವೆ.

ಸಿಪಿಐ(ಎಂ) ತಮಿಳುನಾಡು ಕಾರ್ಯದರ್ಶಿ ಕೆ.ಬಾಲಕೃಷ್ಣನ್ ಮೇ22 ರಂದು ಸುದ್ದಿ ತಿಳಿದ ಕೂಡಲೇ ಥೂಥುಕುಡಿಗೆ ಧಾವಿಸಿದರು. ಗಾಯಗೊಂಡ ನೂರಕ್ಕೂ ಹೆಚ್ಚು ಮಂದಿಗೆ ವೈದ್ಯಕೀಯ ನೆರವುಗಳನ್ನು ಒದಗಿಸಲು ವ್ಯವಸ್ಥೆ ಮಾಡುತ್ತಲೇ ಈ ಕಾರ್ಯಾಚರಣೆ ನಡೆಸಿರುವ ಪೋಲಿಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ಸ್ಟೆರ್ಲೈಟ್ ಸ್ಥಾವರವನ್ನು ಮುಚ್ಚಬೇಕು, ಸರ್ವಪಕ್ಷ ಸಭೆಯನ್ನು ಕರೆಯಬೇಕು ಎಂದು ಆಗ್ರಹಿಸಿ ಇತರ ಮುಖಂಡರೊಂದಿಗೆ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಅವರನ್ನು ಮತ್ತು ಇತರ ಸಿಪಿಐ(ಎಂ) ಕಾರ್ಯಕರ್ತರನ್ನು ಬಂಧಿಸಲಾಯಿತು. ಬಂಧನದಲ್ಲೂ ಅವರು ಉಪವಾಸ ಸತ್ಯಾಗ್ರಹ ಮುಂದುವರೆಸಿದರು.

ಸಿಪಿಐ(ಎಂ)ನ ತಮಿಳುನಾಡು ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯದ ಹಲವೆಡೆಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ,

ಕೇಂದ್ರ ಸರಕಾರ ಇದುವರೆಗೆ ಚಕಾರವೆತ್ತಿಲ್ಲ. ಕಾನೂನು ವ್ಯವಸ್ಥೆ ರಾಜ್ಯ ಸರಕಾರಕ್ಕೆ ಸೇರಿದ್ದು ಎನ್ನುತ್ತ, ಕೇಂದ್ರ ಗೃಹ ಮಂತ್ರಲಯ ವರದಿಗಳನ್ನು ತರಿಸಿಕೊಳ್ಳುತ್ತಿದೆ ಎನ್ನುತ್ತಿದ್ದಾರೆ. 12 ಜನ ಪ್ರಾಣ ಕಳಕೊಂಡರೂ ಪ್ರಧಾನಿಗಳು ಎಂದಿನಂತೆ ಮೌನವ್ರತ ಧರಿಸಿದ್ದಾರೆ. ವೇದಾಂತ ಭಾರತದ ಪ್ರಸಕ್ತ ಆಳುವ ಪಕ್ಷವೂ ಸೇರಿದಂತೆ ಪ್ರಮುಖ ಬೂರ್ಜ್ವಾ ಪಕ್ಷಗಳ ಪ್ರಮುಖ ಪೋಷಕರು ಎಂಬುದು ಗಮನಾರ್ಹ. ಇಂತವರು ಕೊಟ್ಟ 'ಕೊಡುಗೆ'ಗಳ ಕಾನೂನುಬಾಹಿರತೆಯನ್ನು ಸುಪ್ರಿಂ ಕೋರ್ಟ್ ಎತ್ತಿ ತೋರಿಸಿದಾಗ ಅದನ್ನು ಪೂರ್ವಾನ್ವಯವಾಗುವಂತೆ 'ಸರಿಪಡಿಸ'ಲಿಕ್ಕಾಗಿಯೇ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆಯನ್ನು ಎರಡೆರಡು ಬಾರಿ, ಅದೂ ಮುಚ್ಚುಮರೆಯಿಂದ ತಿದ್ದುಪಡಿ ಮಾಡಲಾಯಿತು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಮೇ 23ರಂದು ಚೆನ್ನೈನಲ್ಲಿ ಸಿಪಿಐ(ಎಂ) ಕಾರ್ಯಕರ್ತರ ರಾಸ್ತಾರೋಕೋ ಪ್ರತಿಭಟನೆ



ಅಜ್ಞಾನಿಗಳೋ, ಮಾಹಿತಿಹೀನರೋ ಅಥವ ಶುದ್ಧ ಸುಳ್ಳುಕೋರರೋ?

ಬಿಜೆಪಿ ಐಟಿ ತಂಡದ ಮುಖ್ಯಸ್ಥ ಅಮಿತ್ ಮಾಲವೀಯ ಮೇ 18ರಂದು ತ್ರಿಪುರಾದ ಹಾಲಿ ಮುಖ್ಯಮಂತ್ರಿ ಬಿಪ್ಲಬ್ ಕುಮಾರ್ ದೇಬ್(ಹೌದು, ಎರಡು ತಿಂಗಳಲ್ಲೇ ಏಳು ಆಭಾಸಕಾರೀ ಹೇಳಿಕೆಗಳ "ಖ್ಯಾತಿ'ಯ ವ್ಯಕ್ತಿ!) ನೆರೆಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ ಫೋಟೋ ಹಾಕಿ ಹೀಗೆ ಟ್ವೀಟ್ ಮಾಡಿದ್ದಾರೆ

"ಇದು ತ್ರಿಪುರಾದ ಮೊದಲ ನೆರೆ ಖಂಡಿತ ಆಗಿರಲಿಕ್ಕಿಲ್ಲ. ಆದರೆ ಒಂದು ರಾಜ್ಯದ ಮುಖ್ಯಮಂತ್ರಿ ನೆರೆ ಪರಿಹಾರದ ಕೆಲಸದ ಉಸ್ತುವಾರಿ ಮಾಡಲು ಹೋಗಿರುವುದು ಖಂಡಿತ ಇದು ಮೊದಲ ಬಾರಿ. ಮಾಧ್ಯಮಗಳು ಇದನ್ನು ವರದಿ ಮಾಡುವುದಿಲ್ಲ. ಏಕೆಂದರೆ ಅದು ಅವರ ಕಣ್ಮಣಿ , ಅಧಿಕಾರದಿಂದ ಹೊರಹಾಕಲ್ಪಟ್ಟ ಮಾಣಿಕ್ ಸರ್ಕಾರ್ ಎಷ್ಟು ಕಳಪೆ ಎಂದು ತೋರಿಸುತ್ತದೆ."

ಮೇಲೆ ಪಕ್ಕದಲ್ಲಿರುವ ಸಿಪಿಐ(ಎಂ)ನ ಸಪ್ಟಂಬರ್ 4, 2017 ರ ಟ್ವೀಟ್‌ನಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ಮಾಣಿಕ್ ಸರ್ಕಾರ್ ರಾತ್ರಿಯ ವೇಳೆಯಲ್ಲೂ ಸುರಿವ ಮಳೆಯ ನಡುವೆಯೇ ನೆರೆ ಪರಿಹಾರ ಕಾರ್ಯದ ನಿರೀಕ್ಷಣೆ ಮಾಡುತ್ತಿರುವ ಎರಡು ಫೋಟೋಗಳನ್ನು ಕಾಣಬಹುದು. ಟ್ವೀಟ್ ಹೀಗಿದೆ:

"ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ನೆರೆ ಪರಿಹಾರ ಕಾರ್ಯಾಚರಣೆಗಳ ಉಸ್ತುವಾರಿಗೆ ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದಾರೆ. ತ್ರಿಪುರಾದ ಜನತೆಗಾಗಿ ಹಗಲಿರುಳು ಕೆಲಸ"

ಮಾಲವೀಯ ತಮ್ಮ ಯುವ ಮುಖ್ಯಮಂತ್ರಿಗಳ ಆಭಾಸಗಳನ್ನು ತೊಳೆಯಲು ಬೇರೇನಾದರೂ ಉದಾಹರಣೆ ಹುಡುಕಬೇಕು.

ಹಾಗೆ ನೋಡಿದರೆ ಅಮಿತ್ ಮಾಲವಿಯ ತಮ್ಮದೇ ಕಣ್ಮಣಿ ಮುಖ್ಯಮಂತ್ರಿಗಳನ್ನೂ ನಿರ್ಲಕ್ಷಿಸಿದ್ದಾರೆ. ಈ ಕೆಳಗಿನದ್ದು ಆಗಸ್ಟ್ 21, 2016ರ ಫೋಟೋ– ಮಧ್ಯಪ್ರದೇಶದ ಮುಖ್ಯಮಂತ್ರಿ(ವ್ಯಾಪಂ 'ಖ್ಯಾತಿ'ಯ) ಶಿವರಾಜ್ ಸಿಂಗ್ ಚೌಹಾಣ್ ರವರ ನೆರೆಪೀಡಿತ ಪ್ರದೇಶಗಳ ಭೇಟಿಯದ್ದು.

ಇದೂ ಮಾಹಿತಿ ಪರಿಣಿತರ ಮಾಹಿತಿಹೀನತೆಯ ಮತ್ತೊಂದು ಉದಾಹರಣೆಯೋ ಅಥವ ಈ ಫೋಟೋ ಪ್ರದರ್ಶಿಸುತ್ತಿರುವ ಆಭಾಸವೇ ಕಾರಣವೋ ಗೊತ್ತಿಲ್ಲ.

ಏನೇ ಅಗಲಿ, ಕಳೆದ ನಾಲ್ಕು ವರ್ಷಗಳಿಂದ ಆಭಾಸಕಾರೀ ಹೇಳಿಕೆಗಳನ್ನು ಕೊಟ್ಟೂ ಅರಗಿಸಿಕೊಂಡಿರುವ, ಜನಗಳ ಗಮನವನ್ನು ಈ ಮೂಲಕ ಅವರ ದೈನಂದಿನ ಬವಣೆಗಳ ಪ್ರಶ್ನೆಗಳಿಂದ ಬೇರೆಡೆಗೆ ಸೆಳೆಯುವಲ್ಲಿ 'ಯಶಸ್ವಿ'ಯಾಗಿದ್ದೇನೆ ಎಂದು ನಂಬಿದಂತಿರುವ 'ಪ್ರಧಾನ ಸೇವಕರು' ಹಾಕಿಕೊಡುತ್ತಿರುವ ಪರಂಪರೆ ಮುಂದುವರೆಯಬೇಕು ತಾನೇ?







ಇರಾಕ್ : ಕಮ್ಯುನಿಸ್ಟರಿರುವ ಸದ್ರ್ ಕೂಟ ಮೊದಲ ಸ್ಥಾನದಲ್ಲಿ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಇರಾಕ್ ಕಮ್ಯುನಿಸ್ಟ್ ಪಕ್ಷ ಹಾಗು ಶಿಯಾ ನಾಯಕ ಮುಕ್ತಾದ್ ಅಲ್ ಸದ್ರ್, ರವರ ನೇತೃತ್ವದಲ್ಲಿ ಸುಧಾರಣಾ ಕ್ರಾಂತಿಯ ಒಕ್ಕೂಟ ಅಥವಾ 'ಸೈರೌನ್" ಕೂಟ ಅತಿ ಹೆಚ್ಚು ಸ್ಥಾನಗಳನ್ನು ಗಳಿಸಿ ಹೊರಹೊಮ್ಮಿ ಮುಂದಿನ ಸರಕಾರ ರಚಿಸಲು ಸಜ್ಜಾಗುತ್ತಿದೆ. ಅದು ಇರಾಕಿನ 18 ಪ್ರಾಂತ್ಯಗಳಲ್ಲಿ 16 ಪ್ರಾಂತ್ಯಗಳಲ್ಲಿ ಮುನ್ನಡೆ ಸಾಧಿಸಿದೆ.

ಇರಾಕಿನ 329 ಸದಸ್ಯರ ಪಾರ್ಲಿಮೆಂಟ್ ಗೆ ನಡೆದ ಈ ಚುನಾವಣೆಯಲ್ಲಿ 54 ಸ್ಥಾನವನ್ನು ಸೈರೌನ್ ನೇತೃತ್ವದಲ್ಲಿ ನ ಮೈತ್ರಿ ಕೂಟದಲ್ಲಿ ಕಮ್ಯುನಿಸ್ಟ್ ಪಕ್ಷವು ಸೇರಿದ್ದ ಕಾರಣ ಮೊದಲ ಸ್ಥಾನ ಪಡೆಯಲು ಸಾಧ್ಯವಾದ್ದದ್ದು ಎಂಬುದು ರಾಜಕೀಯ ವೀಕ್ಷಕರ ಅಭಿಪ್ರಾಯ. ಏಕೆಂದರೆ ಇರಾನ್ ನೊಂದಿಗೆ ಸಂಪರ್ಕ ಹೊಂದಿರುವ "ಫತಾಹ್" ಮೈತ್ರಿ ಕೂಟವು 47 ಸ್ಥಾನವನ್ನು ಪಡೆದು ಎರಡನೆಯ ಕೂಟವಾಗಿ ಹೊಮ್ಮಿದೆ.

ಪ್ರಧಾನ ಮಂತ್ರಿ ಹೈದರ್ ಅಲ್ ಅಬಾಡಿ ಯವರ "ವಿಕ್ಟರ್" ಮೈತ್ರಿ ಕೂಟ ಕೇವಲ 42 ಸ್ಥಾನಕ್ಕೆ ಸೀಮಿತಗೊಂಡು ಮೂರನೆಯ ಸ್ಥಾನಕ್ಕೆ ನೂಕಲ್ಪಟ್ಟಿದೆ. ಚುನಾವಣಾ–ಪೂರ್ವ ಸಮೀಕ್ಷೆಗಳು "ವಿಕ್ಟರ್" ಕೂಟಕ್ಕೆ ಮೊದಲ ಸ್ಥಾನ ಮತ್ತು ಸೈರೌನ್" ಕೂಟಕ್ಕೆ ಮೂರನೇ ಸ್ಥಾನ ಕೊಟ್ಟಿದ್ದವು. ಫಲಿತಾಂಶ ಮಾತ್ರ ತಿರುವು ಮುರುವಾಗಿದೆ. ಸಂಸತ್ತಿನಲ್ಲಿ ಹಲವು ಸಣ್ಣ ಕೂಟಗಳೂ ಇದ್ದು, ಪ್ರಧಾನಿ ಅಬಾಡಿಯವರ "ವಿಕ್ಟರ್" ಕೂಟವನ್ನು ಮತ್ತೆ ಸರಕಾರ ಮಾಡಲು

ಇರಾಕಿನ ಈ ಚುನಾವಣೆಯಲ್ಲಿ ಮೊದಲ ಸ್ಥಾನವನ್ನು ಗಳಿಸಿರುವ "ಸೈರೋನ್" ಕೂಟ ಹೊರಗಿನ ಶಕ್ತಿ ಗಳಾದ ಅಮೆರಿಕ ಮತ್ತು ಇರಾನ್ ಗಳಿಗೆ ನುಂಗಲಾರದ ತುತ್ತಾಗಿದೆ. ಏಕೆಂದರೆ ಎರಡಕ್ಕೂ ವಿರುದ್ಧವಾಗಿರುವ ಮತ್ತು ಸೈದ್ಧಾಂತಿಕ ಮತ್ತು ಕಾರ್ಯಕ್ರಮಾತ್ಮಕ ಸ್ಪಷ್ಟತೆ ಇರುವ ಕೂಟ ಇದೊಂದೇ.



ಬಿಡಬಾರದು ಎಂಬ ಭಾವನೆ ಬಲವಾಗಿದೆ. ಆದ್ದರಿಂದ "ಸೈರೌನ್" ಕೂಟ ಸರಕಾರ ರಚಿಸುವ ಸಾಧ್ಯತೆ ಇದೆ.

ಮೊದಲ ಕಮ್ಯುನಿಸ್ಟ್ ಸಂಸದೆ

ಕಮ್ಯುನಿಸ್ಟ್ ಪಕ್ಷ ದ ಮೊದಲ ಮಹಿಳಾ ಅಭ್ಯರ್ಥಿ 'ಸುಹಾದ್ ಅಲ್ ಖತೀಬ್' ರವರು, ಶಿಯಾ 'ಪವಿತ್ರ ನಗರ' ವಾದ ನಜಾಫ್ ನಿಂದ ಆಯ್ಕೆಯಾಗಿರುವುದು ಗಮನಾರ್ಹ ಬೆಳವಣಿಗೆ ಯೆಂದು ಗುರುತಿಸಲಾಗಿದೆ.

ಇರಾಕಿನ ಈ ಚುನಾವಣೆಯಲ್ಲಿ ಮೊದಲ ಸ್ಥಾನವನ್ನು ಗಳಿಸಿರುವ "ಸೈರೋನ್" ಕೂಟ ಹೊರಗಿನ ಶಕ್ತಿ ಗಳಾದ ಅಮೆರಿಕ ಮತ್ತು ಇರಾನ್ ಗಳಿಗೆ ನುಂಗಲಾರದ ತುತ್ತಾಗಿದೆ. ಏಕೆಂದರೆ ಎರಡಕ್ಕೂ ವಿರುದ್ಧವಾಗಿರುವ ಮತ್ತು ಸೈದ್ಧಾಂತಿಕ ಮತ್ತು ಕಾರ್ಯಕ್ರಮಾತ್ಮಕ ಸ್ಪಷ್ಟತೆ ಇರುವ ಕೂಟ ಇದೊಂದೇ.

ಶಿಯಾ ಸಮುದಾಯದ ನಾಯಕರಾದ ಸದಾರ್ ರವರ ಪಕ್ಷ ಇರಾಕಿನ ರಾಜಧಾನಿ ನಗರವಾದ ಬಾಗ್ದಾದ್ ಸೇರಿದಂತೆ, 6 ಪ್ರಮುಖ ಪ್ರಾಂತ್ಯ ಗಳಲ್ಲಿ ಜಯ ಸಾಧಿಸಿದೆ. ಒಟ್ಟು ಶೇಕಡ 91 ರಷ್ಟು ಮತ ಎಣಿಕೆ ಯಲ್ಲಿ ಸುಮಾರು 13 ಲಕ್ಷ ಮತವನ್ನು ಗಳಿಸಿದೆ. ಈ ಹಿನ್ನಲೆಯಲ್ಲಿ ಹೊಸ ಸರಕಾರದ ರಚನೆಗೆ ಎಲ್ಲಾ ಗುಂಪು ಗಳು ಪ್ರಯತ್ನ ನಡೆಸಲು ಆರಂಭಿಸಿವೆ.

ಬಡತನ ಮತ್ತು ಭ್ರಷ್ಟಾಚಾರ ಪ್ರಮುಖ ಚುನಾವಣಾ ವಿಷಯ

"ಸೈರೋನ್" ಮೈತ್ರಿ ಕೂಟದ, ಪ್ರಮುಖವಾಗಿ ಕಮ್ಯುನಿಸ್ಟರು ಈ ಚುನಾವಣೆಯಲ್ಲಿ ಜನರು ಅನುಭವಿಸಿದ ಸಂಕಷ್ಟಗಳು ಮತ್ತು ಪ್ರಧಾನಿ ಹೈದರ್ ರವರ, ಆಡಳಿತದಲ್ಲಿನ ಭ್ರಷ್ಟಾಚಾರ, ಮತ್ತು ಬಡತನದ ಅಂಶಗಳನ್ನು ಪ್ರಮುಖ ವಾಗಿ ಪ್ರಚಾರದಲ್ಲಿ ಎತ್ತಿಹಿಡಿದಿದ್ದರು. ಅಮೆರಿಕ ಮತ್ತು ಇರಾನ್ ದೇಶಗಳು ಇರಾಕಿನಲ್ಲಿ ನಡೆಸುವ ಹಸ್ತಕ್ಷೇಪದ ಕುರಿತಾದ ವಿಚಾರಗಳನ್ನು ಹೆಚ್ಚಾಗಿ ಬಳಸಿಕೊಂಡು ಜನರ ಗಮನಸೆಳೆದಿದ್ದು, ಕೂಟಕ್ಕೆ ಹೆಚ್ಚು ಸ್ಥಾನ ಬರಲು ಅನುಕೂಲ ವಾಯಿತು. ಎಂದು ಚುನಾವಣೆ ನಂತರದ ವಿಶ್ಲೇಷಣೆಗಳು ತಿಳಿಸಿವೆ.

ಒಟ್ಟಾರೆಯಾಗಿ ಇರಾಕಿನ ಚುನಾವಣೆಯಲ್ಲಿ ದಶಕಗಳಿಂದ ಕಡೆಗಣಿಸಲ್ಪಟ್ಟಿದ್ದ, ಸದ್ರ್ ರವರು ಕಮ್ಯುನಿಸ್ಟ್ ರೊಂದಿಗೆ ಮುಂಚೂಣಿಗೆ ಬಂದಿದ್ದಾರೆ. ಇರಾಕಿನ ಜನ ಸೈದ್ಧಾಂತಿಕ ಬದ್ಧತೆಯೊಂದಿಗೆ, ದೇಶ ಪ್ರೇಮದ ಭಾವನಾತ್ಮಕತೆಯಿಂದ ಈ ಚುನಾವಣೆಯಲ್ಲಿ ಭಾಗವಹಿಸಿದ್ದಾರೆ ಎಂದು ಪತ್ರಕರ್ತ ಅಲ್ ರಹೀಮ್ಮ್ ರವರು ಅಭಿಪ್ರಾಯ ಪಟ್ಟಿದ್ದಾರೆ. ●

ಮಾರ್ಕ್ಸ್ ಅವರ 'ತತ್ತ್ವಶಾಸ್ತ್ರದ ದಾರಿದ್ರ್ಯ' ಮತ್ತು ಪ್ರಸಕ್ತ ಸಮಾಜ

ನಡೆಯುವ ಅಸಮ ಮೌಲ್ಯದ ವಿನಿಮಯ. ಮೌಲ್ಯ ಎಂದರೇನೇ ವಿನಿಮಯಮೌಲ್ಯ. ಮೌಲ್ಯ ಹುಟ್ಟುವುದು ಪ್ರೂಧೋನ್ ನಂಬುವಂತೆ ವಿನಿಮಯದಿಂದಲ್ಲ, ಶ್ರಮಕಾಲದಿಂದ.ಈ ಸತ್ಯವನ್ನು ಬೂರ್ಷ್ವಾ ಅರ್ಥಶಾಸ್ತ್ರಜ್ಞರಾದ ರಿಕಾರ್ಡೋ ಮತ್ತು ಆಡಮ್‌ಸ್ಮಿತ್ ಅಂಥವರು ಬಹಳ ಹಿಂದೆಯೇ ಅರ್ಥಮಾಡಿಕೊಂಡಿದ್ದರು. ಮಾರ್ಕ್ಸ್‌ವಾದದ ಸಾಹಿತ್ಯದಲ್ಲಿ ಅರ್ಥಶಾಸ್ತ್ರಜ್ಞ ಎಂದರೇನೇ ಬೂರ್ಷ್ವಾ ಅರ್ಥಶಾಸ್ತ್ರವನ್ನು ಪ್ರತಿನಿಧಿಸುವ, ಸಮರ್ಥಿಸುವ ಅರ್ಥಶಾಸ್ತ್ರಜ್ಞ ಎಂದು ಅರ್ಥ. ಸಾಮಾಜಿಕ ಬದಲಾವಣೆಗಳನ್ನು ಚಾರಿತ್ರಿಕ ಅನುಕ್ರಮಣಿಕೆಯಲ್ಲಿ ನೋಡಬೇಕೇ ಹೊರತು ವಿಚಾರಗಳ ಅನುಕ್ರಮಣಿಕೆಯಲ್ಲಿ ಅಲ್ಲ. ಸರಕುಗಳ ಉತ್ಪಾದನೆಯಾಗಲಿ ವಿನಿಮಯವಾಗಲಿ ಇಬ್ಬರು ವ್ಯಕ್ತಿಗಳ ನಡುವೆ ಅವರ ಇಚ್ಛಾನುಸಾರ, ಆತ್ಮಸಂತೋಷದಿಂದ ನಡೆಯುವ ವ್ಯಕ್ತಿಗತ ಕ್ರಿಯೆಗಳಲ್ಲ. ಅವು ಸಾಮಾಜಿಕ ಕ್ರಿಯೆಗಳು. ಪ್ರೂಧೋನ್ ಹೇಳುವಂತೆ ಯಂತ್ರಗಳು ಶ್ರಮವಿಭಜನೆಯನ್ನು ಒಂದುಗೂಡಿಸುವುದಿಲ್ಲ, ಉತ್ಪಾದನಾ ಸಲಕರಣೆಗಳನ್ನು ಮಾತ್ರ ಒಟ್ಟುಮಾಡುತ್ತದೆ. ಸ್ವಯಂಚಾಲಿತ ಯಂತ್ರೋಪಕರಣಗಳನ್ನು ಆಧರಿಸಿದ ಉತ್ಪಾದನೆಯು ಬೂರ್ಷ್ವಾ ಮತ್ತು ಶ್ರಮಿಕ ಎಂಬ ಎರಡು ವರ್ಗಗಳನ್ನು ಹುಟ್ಟಿಸಿದೆ. ಇವು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಹೊಂದಿದ ವರ್ಗಗಳು. ವೈರುಧ್ಯಗಳನ್ನು ನಿವಾರಿಸುವುದೆಂದರೆ, ವಸ್ತುಗಳಲ್ಲಿನ ವಿರುದ್ಧ ಗುಣಗಳಲ್ಲಿ ಒಳ್ಳೆಯದನ್ನು ಆರಿಸಿಕೊಂಡು ಕೆಟ್ಟದ್ದನ್ನು ಬಿಡುವುದಲ್ಲ. ಏಕೆಂದರೆ ಕೇವಲ ಒಳ್ಳೆಯದರ ಸಂಯೋಜನೆ ಅಥವಾ ಸಂಶ್ಲೇಷಣೆಯು ಹೆಚ್ಚಿನ ಮಟ್ಟದ ವೈರುಧ್ಯವನ್ನು ಹುಟ್ಟಿಸುವುದರಿಂದ ಅದು ಸಾಧ್ಯವಿಲ್ಲ. ವೈರುಧ್ಯವೇ ಪ್ರಗತಿಯ ಮೂಲ. ವರ್ಗವೈರುಧ್ಯಗಳು ಶ್ರಮಿಕರ ಸಂಘಟನೆ ಮತ್ತು ಹೋರಾಟಗಳಿಂದ ಕೊನೆಗೊಳ್ಳಬೇಕೇ ಹೊರತು ಪ್ರೂಧೋನ್ ಪ್ರತಿಪಾದಿಸುವಂತೆ ಆಧ್ಯಾತ್ಮಿಕತೆ, ವರ್ಗಸಾಮರಸ್ಯ ಮತ್ತು ವ್ಯಕ್ತಿಗತ ಹೊಂದಾಣಿಕೆಗಳಿಂದ ಸಾಧ್ಯವಿಲ್ಲ. ಈ ಸಂಗತಿಗಳು ಪ್ರೂಧೋನ್‌ರಿಗೆ ತಿಳಿದಿರಲಿಲ್ಲ ಎಂದು ತೋರಿಸಲು, ಚರಿತ್ರೆ, ಸಾಮಾಜಿಕ ಸಂಘಟನೆ, ಬದಲಾವಣೆಯ ಪ್ರೇರಕ ಮತ್ತು ಚಾಲಕ ಶಕ್ತಿಗಳು ಯಾವುವು ಎಂಬ ಬಗ್ಗೆ ಸರಿಯಾದ ಗ್ರಹಿಕೆ ಯಾವುದೆಂದು ಪ್ರತಿಪಾದಿಸಲು ಮಾರ್ಕ್ಸ್ ಬರೆದ ಪುಸ್ತಕವೇ 'ತತ್ತ್ವಶಾಸ್ತ್ರದ ದಾರಿದ್ರ್ಯ'.

ಒಂದು ದೃಷ್ಟಿಯಿಂದ ನೋಡಿದರೆ, ಮಾರ್ಕ್ಸ್‌ರ 'ತತ್ತ್ವಶಾಸ್ತ್ರದ ದಾರಿದ್ರ್ಯ'ವನ್ನು ಅರ್ಥಮಾಡಿಕೊಳ್ಳಲು ಅದರೊಂದಿಗೆ ಪ್ರೂಧೋನ್‌ರ 'ದಾರಿದ್ರ್ಯದ ತತ್ತ್ವಶಾಸ್ತ್ರ'ವನ್ನೂ ತುಲನಾತ್ಮಕವಾಗಿ ಓದಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ಏಕೆಂದರೆ ಈ ಗ್ರಂಥದಲ್ಲಿ ಅಡಕವಾಗಿರುವ ವಿಚಾರಗಳ ಪ್ರತಿಪಾದನೆಗೆ ಪ್ರೂಧೋನ್‌ರ ಗ್ರಂಥ ಒಂದು ಅವಕಾಶವೇ ಹೊರತು ಅದರ ವಿಮರ್ಶೆಯೇ ಮಾರ್ಕ್ಸ್‌ನ ಪ್ರಧಾನ ಉದ್ದೇಶವಲ್ಲ.

ಹೀಗಿದ್ದರೂ, ಪ್ರಸ್ತುತ ಸಮಾಜದಲ್ಲಿ ಸಮಾನತೆ, ಸಾಮರಸ್ಯ ಮತ್ತು ದಾರಿದ್ರ್ಯರಹಿತ ಸಮಾಜವನ್ನು ಕಟ್ಟಲು ಅನೇಕ ಪ್ರಗತಿಪರ ಚಿಂತಕರು ಮತ್ತು ಹೋರಾಟಗಾರರು ಬಂಡವಾಳವಾದವನ್ನು ವಿರೋಧಿಸುತ್ತಲೇಬುದ್ಧ,ಬಸವ,ಗಾಂಧಿ,ಲೋಹಿಯಾ, ಅಂಬೇಡ್ಕರ್‌ಪ್ರಣೀತ ಸಮಾಜವಾದವಾದಗಳ, 'ದೇವರು ಮೆಚ್ಚುವ ಸಮಾಜವಾದ'ದ ತಾತ್ವಿಕತೆಗಳನ್ನು ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗಿ ಮಂಡಿಸುತ್ತಾರೆ. ರಾಜಕೀಯ ಸಂಘರ್ಷಗಳನ್ನು ಹೊರಗಿಟ್ಟು ಸಮನ್ವಯ, ಸಂಯೋಜನೆ ಮತ್ತು ಸಹಕಾರಗಳ ಮೂಲಕ ಹೊಸ ಸಮಾಜವನ್ನು ಕಟ್ಟಬೇಕೆಂದು ಕರೆಕೊಡುತ್ತಾರೆ. ಕೆಲವರು ಇನ್ನೂ ಮುಂದೆ, (ಅಥವಾ ಹಿಂದೆ ಹೋಗಿ) ಬಂಡವಾಳವಾದ ಮತ್ತು ಸಮತಾವಾದ ಎರಡರಲ್ಲೂ ಇರುವ ಕೆಟ್ಟದ್ದನ್ನು ಬಿಟ್ಟು ಎರಡರಲ್ಲೂ ಇರುವ ಒಳ್ಳೆಯದನ್ನು ತೆಗೆದುಕೊಂಡು, ಬಂಡವಾಳವಾದ, ಸಮತಾವಾದ ಎರಡೂ ಅಲ್ಲದ 'ಮಾನವೀಯ ಉದಾರವಾದೀ ಪ್ರಜಾತಾಂತ್ರಿಕ ದೈವಸಹಿತ ಸಮಾಜವನ್ನು' ಕಟ್ಟಬಯಸುತ್ತಾರೆ. ಯಂತ್ರನಾಗರಿಕತೆಯನ್ನು ಬಂಡವಾಳಶಾಹಿಗಳ ಅಮಾನವೀಯ ವೈಭವೋಪೇತ ಜೀವನಕ್ರಮದೊಂದಿಗೆ ಸಮೀಕರಿಸಿ, ಶೋಷಣೆಯ ಪ್ರತ್ಯಕ್ಷಫಲವಾದ ಜನಸಾಮಾನ್ಯರ ದಾರಿದ್ರ್ಯವನ್ನು ಎಲ್ಲರಿಗೂ ಅಗತ್ಯವಾದ ಸರಳ ಬದುಕೆಂದು ಆದರ್ಶೀಕರಿಸುವ, 21ನೇ ಶತಮಾನದ ಡಿಜಿಟಲ್ ಯುಗದಲ್ಲಿ ಬದುಕುತ್ತಿರುವ ಇಂಥವರ ಧೋರಣೆ–ವಿಚಾರಗಳಿಗೂ 19ನೇ ಶತಮಾನದ ಪ್ರೂಧೋನ್‌ರ ಧೋರಣೆ–ವಿಚಾರಗಳಿಗೂ ಆಶ್ಚರ್ಯವೆನಿಸುವಷ್ಟು ಸಾಮ್ಯವಿದೆ. ಆದ್ದರಿಂದ 170 ವರ್ಷಗಳ ಹಿಂದೆ ಮಾರ್ಕ್ಸ್ ಪ್ರೂಧೋನ್‌ರ ಧೋರಣೆ–ವಿಚಾರಧಾರೆಯ ಬಗ್ಗೆ ಮಾಡಿದ ವಿಮರ್ಶೆ ನಮ್ಮ ಕಾಲದ 'ಪ್ರೂಧೋನ್'ಗಳಿಗೂ ಅನ್ವಯವಾಗುತ್ತದೆ. ಈ ಕಾರಣಕ್ಕಾಗಿ ಮಾರ್ಕ್ಸ್ ಮತ್ತು ಪ್ರೂಧೋನ್‌ರ ಎರಡೂ ಕೃತಿಗಳ ತುಲನಾತ್ಮಕ ಅಧ್ಯಯನವೂ ಸಹ ಅಗತ್ಯ ಮತ್ತು ಪ್ರಸ್ತುತವೂ ಹೌದು.

ಕಾರ್ಲ್ ಮಾರ್ಕ್ಸ್ ಕ್ಯಾಪಿಟಲ್ ಅಥವಾ ದಿ ಕ್ರಿಟೀಕ್ ಒ ಪೊಲಿಟಿಕಲ್ ಎಕಾನಮಿ ಗ್ರಂಥದಲ್ಲಿ ಮಂಡಿಸಿದ ಮುಖ್ಯ ವಿಚಾರಗಳನ್ನು ಪ್ರಾರಂಭಿಕ ಕೃತಿಗಳಾದ ಬ್ರಸೆಲ್ಸ್ ಕೃತಿಗಳೆಂದು ಹೆಸರಾದ **ದಿ ಹೋಲಿ ಫ್ಯಾಮಿಲಿ, ಎಸ್ಸೆ ಆನ್ ಫ್ಯೂಅರ್‌ಬಾ, ಜರ್ಮನ್ ಈಡಿಯಾಲಜಿ, ತತ್ತ್ವಶಾಸ್ತ್ರದ ದಾರಿದ್ರ್ಯ ಮತ್ತು ಕಮ್ಯುನಿಸ್ಟ್ ಮ್ಯಾನಿಫೆಸ್ಟೋ** ಕೃತಿಗಳಲ್ಲಿ ಹೇಳಿರುವುದಾದರೆ ಅವನ್ನು ಯಾಕೆ ಬಿಡಿ ಬಿಡಿಯಾಗಿ ಅಧ್ಯಯನ ಮಾಡಬೇಕು, ನೇರವಾಗಿ ಕ್ಯಾಪಿಟಲ್ ಒಂದನ್ನೇ ಓದಬಹುದಲ್ಲ? **ತತ್ತ್ವಶಾಸ್ತ್ರದ ದಾರಿದ್ರ್ಯ**'ವು ಕ್ಯಾಪಿಟಲ್‌ನಲ್ಲಿರುವ ವಿಚಾರಗಳ ಭ್ರೂಣರೂಪವನ್ನು ಒಳಗೊಂಡಿದ್ದರೆ, ಭ್ರೂಣವನ್ನೇಕೆ ನೋಡಬೇಕು, ಪೂರ್ಣವಾಗಿ ಬೆಳೆದ ಮಗುವನ್ನೇ ನೋಡಬಾರದೇಕೆ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಭ್ರೂಣರೂಪ ಎನ್ನುವುದು ಆಲಂಕಾರಿಕ ಮಾತು. '**ತತ್ತ್ವಶಾಸ್ತ್ರದ ದಾರಿದ್ರ್ಯ**'ದ ಓದು, ಕ್ಯಾಪಿಟಲ್ ಮತ್ತು ಉಳಿದ ಗ್ರಂಥಗಳ ಓದಿಗೆ ಪೂರಕವಾದ್ದು, ಎಂದು ಅದರ ಅರ್ಥವೇ ಹೊರತು ಅಕ್ಷರಶಃ ಅದೇ ಅಲ್ಲ.

ಒಂದು ಗ್ರಂಥವನ್ನು ಓದಲು ಆ ಗ್ರಂಥದ ಭಾಷೆಯ ಅಕ್ಷರಮಾಲೆ, ಪದಗಳು, ಪದಗುಚ್ಛಗಳು, ವಾಕ್ಯ ಮತ್ತು ವ್ಯಾಕರಣಗಳ ಪರಿಚಯ ಮಾಡಿಕೊಂಡಮೇಲೆ ಗ್ರಂಥದ ಅಧ್ಯಯನ ಆಸ್ವಾದನೆ ಸಾಧ್ಯ. ಈ ಅರ್ಥದಲ್ಲಿ ಮಾರ್ಕ್ಸ್‌ವಾದದ ಓನಾಮ, ಪದಸಂಗ್ರಹ ಮತ್ತು ವಾಕ್ಯಗಳಲ್ಲಿ ವ್ಯಕ್ತವಾಗುವ ಪರಿಕಲ್ಪನೆಗಳು, ವಾಗ್ವಾದ ಮತ್ತು ಚರ್ಚೆಗಳನ್ನು ಪರಿಚಯಮಾಡಿಕೊಳ್ಳಲು ಮಾರ್ಕ್ಸ್‌ರ ಪ್ರಾರಂಭಿಕ ಗ್ರಂಥಗಳ ಓದು ಸಹಾಯಮಾಡುತ್ತವೆ. ಚಾರಿತ್ರಿಕ ಮತ್ತು ಗತಿತಾರ್ಕಿಕ ಭೌತವಾದದ ವ್ಯಾಕರಣದ ವಿವಿಧ ಅಂಶಗಳು ಈ ಗ್ರಂಥಗಳಲ್ಲಿ ವಿಶದವಾಗುತ್ತವೆ. ಕನ್ನಡದ ಓದಿನ ಮೂಲಕ ಮಾರ್ಕ್ಸ್‌ವಾದಿ ಚಿಂತನೆಯ ಪರಿಚಯ ಮಾಡಿಕೊಳ್ಳುವವರಿಗೆ, ಮಾರ್ಕ್ಸ್‌ವಾದದ ಬಗ್ಗೆ ಅಗಾಧ ಪ್ರೀತಿ, ಅಭಿಮಾನ, ಮೆಚ್ಚುಗೆಗಳನ್ನು ಹೊಂದಿದ್ದೂ ಆದರೆ ಮಾರ್ಕ್ಸ್ ಸಿದ್ಧಾಂತದ ಬಗ್ಗೆ ಏನೂ ತಿಳಿದಿಲ್ಲವಲ್ಲಾ ಎಂದು ಪರಿತಪಿಸಿವವರಿಗೆ, ಸೈದ್ಧಾಂತಿಕ ಸ್ಪಷ್ಟತೆ ಬೇಕೆಂದು ಕ್ರಾಂತಿಗಾಗಿ ಹಂಬಲಿಸುತ್ತಾ ಕ್ರಾಂತಿಕಾರಕ ಕಾರ್ಯಕ್ರಮಗಳಲ್ಲಿ ಮುಳುಗಿದ ಒಡನಾಡಿಗಳಿಗೆ, 'ಮಾರ್ಕ್ಸ್ ಹೀಗೆ ಹೇಳುತ್ತಾನೆ'–ಎಂದು ಪ್ರಾರಂಭಿಸಿ, 'ಎಡಪಂಥೀಯ'ವೆನ್ನುವ ತಮ್ಮ ಗ್ರಹಿಕೆಗಳನ್ನು ಆಧರಿಸಿದತಮ್ಮದೇ ವಿಚಾರಗಳನ್ನು ಮಾರ್ಕ್ಸ್ ಹೇಳಿದ್ದೆಂದು ಮಂಡಿಸುವ, ಅಥವಾ ಸಾರಾಸಗಟಾಗಿ ಖಂಡಿಸುವ ಅನೇಕಾನೇಕ 'ಎಡಪಂಥೀಯ'ಚಿಂತಕ–ವಿಮರ್ಶಕರಿಗೆ, ಈ ಗ್ರಂಥಗಳ ಅಧ್ಯಯನವು ವೈಜ್ಞಾನಿಕ ಸಮಾಜವಾದದ ವ್ಯಾಕರಣವನ್ನು, ಕ್ರಾಂತಿಕಾರಿ ಬದಲಾವಣೆಗೆ ಅಗತ್ಯವಾದ ಸಮಾಜವಾದೀ ತಾತ್ವಿಕತೆಯ ಮೀಮಾಂಸೆಯನ್ನು ಪರಿಚಯಮಾಡಿಸುತ್ತವೆ. **ತತ್ತ್ವಶಾಸ್ತ್ರದ ದಾರಿದ್ರ್ಯ**'ವು ಅಂಥ ಪ್ರಾರಂಭಿಕ ಮುಖ್ಯ ಗ್ರಂಥಗಳಲ್ಲೊಂದು.

ಮಾರ್ಕ್ಸ್ ಪ್ರೂಧೋನ್‌ರ ವಿಚಾರಗಳು, ಅವರ ತಪ್ಪುಗ್ರಹಿಕೆಗಳು, ಶಾಸ್ತ್ರೀಯ ಮತ್ತು ರಮ್ಯಪಂಥದ ಅರ್ಥಶಾಸ್ತ್ರರು ಹೇಳುವ ವಿಚಾರಗಳು, ಅವುಗಳಲ್ಲಿ ಮಾರ್ಕ್ಸ್ ಒಪ್ಪುವಂಥವು, ಒಪ್ಪದಿರುವಂಥವು, ಮಾರ್ಕ್ಸ್ ಪ್ರತಿಕ್ರಿಯೆಯಾಗಿ ಮಂಡಿಸುವ ವಿಚಾರಗಳು ಎಲ್ಲವೂ ಒಂದೇ ಧಾರೆಯೆಂಬಂತೆ ನಿರೂಪಿತವಾಗುವುದರಿಂದ ಓದುವಾಗ ಸಾಕಷ್ಟು ಗೊಂದಲವಾಗುತ್ತದೆ. ಈಗ ಸರಳವೆನಿಸಿರುವ ಎಷ್ಟೋ ವಿಚಾರಗಳು, ಸುಪರಿಚಿತ ಎನ್ನಿಸುವಂಥ ಅನೇಕ ವಾದಮಂಡನೆಗಳು ಇದ್ಯಾವುದರ ಪರಿಚಯವೂ ಇಲ್ಲದ ಓದುಗರಿಗೆ ಕ್ಲಿಷ್ಟವೆನಿಸುತ್ತವೆ. ●

JANASHAKTHI KANNADA VARA PATRIKE MAY 28-JUNE 3, 2018 Price: Rs. 10/- Date of Publication: 25 MAY 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283




ಅಹಮದಾಬಾದ್

“ಧೋರಣೆಗಳನ್ನು ಬದಲಿಸಿ, ಇಲ್ಲವೇ ಜನ ಸರಕಾರವನ್ನು ಬದಲಿಸುತ್ತಾರೆ”

‘ಪೋಲ್ ಖೋಲ್, ಹಲ್ಲಾ ಬೋಲ್” ಪ್ರತಿಭಟನೆಯಲ್ಲಿ ಎಚ್ಚರಿಕೆ

ಪುಟ 8 ರಿಂದ

ಸಂಸತ್ ಮಾರ್ಗದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ, ಜೆಇಜೆಎಎ ಯ ರಾಷ್ಟ್ರೀಯ ಮುಖಂಡರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಜೆಇಜೆಎಎ ನ ಸಂಯೋಜಕರು ಮತ್ತು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಹನ್ನನ್ ಮೊಲ್ಲ ಎಲ್ಲ ಜನವಿಭಾಗಗಳು ತಂತಮ್ಮ ರಂಗದಲ್ಲಿನ ಹೋರಾಟಗಳನ್ನು ತೀವ್ರಗೊಳಿಸಬೇಕು, ಐಕ್ಯ ಹೋರಾಟಗಳಲ್ಲಿ ಗರಿಷ್ಟ ಪ್ರಮಾಣದಲ್ಲಿ ಜನಗಳನ್ನು ಅಣಿನೆರೆಸಿ ಅದನ್ನೊಂದು ಸರಕಾರದ ಧೋರಣೆಗಳನ್ನು ಬದಲಿಸಬಲ್ಲ, ಇಲ್ಲವೇ ಸರಕಾರವನ್ನೇ ಬದಲಿಸಬಲ್ಲ ರಾಜಕೀಯ ಶಕ್ತಿಯಾಗಿ ಮಾಡಬೇಕು ಎಂದು ಕರೆ ನೀಡಿದರು.

ಎಐಕೆಎಸ್, ಅಜೊಯ್‌ಭವನ್‌ನ ಅತುಲ್ ಕುಮಾರ್ ಅಂಜನ್, ಎಐಯುಟಿಯುಸಿಯ ಸತ್ಯವಾನ್ ರತೀ, ಎಐಸಿಸಿಟಿಯುನ ಸಂತೋಷ್ ರಾಯ್, ಯುಟಿಯುಸಿಯ ಮನೋಜ್ ಭಟ್ಟಾಚಾರ್ಯ, ಅಗ್ರಗಾಮಿ ಕಿಸಾನ್ ಸಭಾದ ಎಸ್‌ಎನ್ ಚೌಹಾಣ್, ಎಐಎಂಎಸ್‌ಎಸ್‌ನ ರಿತು ಕೌಶಿಕ್, ಎಂಇಸಿಯ ಸುಚಂದ, ಮತ್ತು ಡಿಎಸ್‌ಎಂಎಂನ ನಾಥು ಪ್ರಸಾದ್ ಸಭೆಯನ್ನುದ್ದೇಶಿಸ ಮಾತನಾಡಿದರು. ಸಿಐಟಿಯುನ ಅನುರಾಗ್ ಸಕ್ಸೇನ ಸಭೆ ಕಲಾಪಗಳನ್ನು ನಡೆಸಿ ಕೊಟ್ಟರು. ಆರ್.ಕೆ.ಶರ್ಮ, ಸತ್ಯನಾರಾಯಣ, ಪುರುಷೋತ್ತಮ್ ಮತ್ತು ಸಂಗ್ವಾರಿ, ಬಾಂಗ್ಲಾ ಮಂಚ್ ಮತ್ತು ಎಐಡಿಎಸ್‌ಒನ ಸಾಂಸ್ಕೃತಿಕ ಗುಂಪು ಕ್ರಾಂತಿಕಾರಿ ಹಾಡುಗಳನ್ನು ಪ್ರಸ್ತುತ ಪಡಿಸಿದರು.

ತಮಿಳುನಾಡಿನಲ್ಲಿ ಈ ಪ್ರತಿಭಟನೆ ಸಹಜವಾಗಿ ಕಾರ್ಪೊರೇಟ್‌ಗಳ ಪರವಾಗಿ ಪೋಲೀಸರು 13 ಮಂದಿಯನ್ನು ಬಲಿ ತೆಗೆದುಕೊಂಡ ಗೋಲೀಬಾರನ ಹೀನ ಕೃತ್ಯದ ವಿರುದ್ಧ ಎಲ್ಲ ಜಿಲ್ಲೆಗಳಲ್ಲಿ ನಡೆಯಿತು. ಚೆನ್ನೈನಲ್ಲಿ ನಡೆಯಿತು. ಇದರಲ್ಲಿ 5000ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಅಸ್ಸಾಂನಲ್ಲಿ ಗುವಹಾಟಿ ಮತ್ತು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ರ್‍ಯಾಲಿಗಳು ನಡೆದಿವೆ. ಆಂಧ್ರಪ್ರದೇಶದಲ್ಲಿ ವಿಜಯವಾಡದಲ್ಲಿ ರ್‍ಯಾಲಿ ನಡೆಯಿತು, ಬಿಹಾರದ ರಾಜಧಾನಿ ಪಟ್ನಾದಲ್ಲಿ 15 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ದೊಡ್ಡ ರ್‍ಯಾಲಿ ನಡೆಯಿತು.

ಗುಜರಾತಿನ ರಾಜಧಾನಿ ಅಹಮದಾಬಾದ್, ರಾಜಸ್ತಾನದ ಜೈಪುರ, ಮಧ್ಯಪ್ರದೇಶದ ಭೋಪಾಲ್, ಪಶ್ಚಿಮ ಬಂಗಾಲದ ಕೊಲ್ಕತ ಮತ್ತು ತ್ರಿಪುರಾದ ಅಗರ್ತಲಾದಲ್ಲಿ ಬೃಹತ್ ಮತಪ್ರದರ್ಶನಗಳು ನಡೆದವು.

ಹರ್‍ಯಾಣ ರಾಜ್ಯದಲ್ಲಿ ಕರ್ನಾಲ್‌ನಲ್ಲಿ ಮತಪ್ರದರ್ಶನ ನಡೆಯಿತು.

ಉತ್ತರಪ್ರದೇಶ, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರದಲ್ಲಿ ರಾಜ್ಯ ಮತ್ತು ಜಿಲ್ಲಾ ರಾಜಧಾನಿಗಳಲ್ಲಿ ಪ್ರತಿಭಟನೆಗಳು ನಡೆದವು.

ಜೆಇಜೆಎಎಯ ಅಂಗಸಂಘಟನೆಗಳ ರಾಷ್ಟ್ರೀಯ ಮುಖಂಡರುಗಳು, ತಪನ್ ಸೆನ್, ಡಾ.ಹೇಮಲತಾ, ಅಮರಜಿತ್ ಕೌರ್, ಆನಿ ರಾಜ, ಕವಿತಾ ಕೃಷ್ಣನ್, ರಾಜೀವ್ ದಿಮ್ರಿ, ಮೇಧಾ ಪಾಟ್ಕರ್, ಡಾ.ಸುನೀಲಂ, ಅಶೋಕ್ ಚೌಧುರಿ, ನಿಖಿಲ್ ಡೇ. ಮಧುರೇಶ್ ಕುಮಾರ್, ವಿಕ್ರಂ ಸಿಂಗ್, ಮುಂತಾದವರು ವಿವಿಧ ರಾಜ್ಯಗಳಲ್ಲಿ ಪ್ರತಿಭಟನೆಗಳಲ್ಲಿ ಭಾಗವಹಿಸಿದರು.

ನವದೆಹಲಿಯ ಸಾರ್ವಜನಿಕ ಸಭೆಯಲ್ಲಿ ಥೂತುಕುಡಿಯಲ್ಲಿ 13 ಜನಗಳನ್ನು ಸಾಯಿಸಿದ ಅಮಾನುಷ ಪೋಲೀಸ್ ಗೋಲೀಬಾರನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು, ಒಂದು ನಿಮಿಷ ಮೌನ ಆಚರಿಸಿ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಮುಂಬೈ


ಪಟ್ನಾ



ವಿಜಯವಾಡ


ಬರ್ದ್ವಾನ್

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**